ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

KARNATAKA STATE OPEN UNIVERSITY
Manasagangothri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)

# HISTORY OF SOUTH INDIA

**ಕೋರ್ಸ್ - 1** **ಬ್ಲಾಕ್ - 5**

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

**ರಾಷ್ಟ್ರೀಯ ಶಿಕ್ಷಣ ನೀತಿ 1986**

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾಧ್ಯಮಗಳನ್ನು ಉಪಯೋಗಿಸುತ್ತದೆ............................ ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತ್ತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

*The Open University system has been initiated in order to augment opportunities for higher education and as an instrument of democratising education.*

***National Education Policy 1986***

*"The Open University system has been initiated use of Multimedia in distance education system. ..................it is vehicle which transports knowledge to the place of learners rather than transport to the place of learning.*

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ -1

# ಬ್ಲಾಕ್
# 5


| | |
|---|---|
| ಘಟಕ - 15 | |
| ರಾಷ್ಟ್ರಕೂಟರ ರಾಜಕೀಯ, ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿ | 1-22 |
| ಘಟಕ - 16 | |
| ರಾಷ್ಟ್ರಕೂಟರ ಕಾಲದ ಸಾಂಸ್ಕೃತಿಕ ಬೆಳವಣಿಗೆ | 23-36 |
| ಘಟಕ - 17 | |
| ಕಲ್ಯಾಣದ ಚಾಲುಕ್ಯರು ಮತ್ತು ಕಳಚೂರ್ಯರು : ರಾಜಕೀಯ ಮತ್ತು ಸಂಸ್ಕೃತಿ | 37-59 |

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಕೆ.ಎಸ್. ರಂಗಪ್ಪ**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*

## ಪಠ್ಯಕ್ರಮ ನಿರೂಪಕರು

**ಡಾ. ಶಿವಣ್ಣ**
ಇತಿಹಾಸ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಘಟಕಗಳು **15, 16 ಮತ್ತು 17**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, **2012**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

# ಕೋರ್ಸ್ ೯ - 1

# ಬ್ಲಾಕ್ - 5

## ಪೀಠಿಕೆ

5 ನೆಯ ಬ್ಲಾಕ್ 15, 16 ಮತ್ತು 17 ನೇ ಘಟಕಗಳನ್ನೊಳಗೊಂಡಿದೆ. ಘಟಕ 15 ರಲ್ಲಿ ರಾಷ್ಟ್ರಕೂಟರ ರಾಜಕೀಯ ಇತಿಹಾಸ, ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗ್ಗೆ ನೀವು ತಿಳಿದುಕೊಳ್ಳುವಿರಿ. ರಾಷ್ಟ್ರಕೂಟರು ಇಡೀ ಭಾರತದ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಅದೇ ರೀತಿ ಅವರ ಆಡಳಿತವು ಕೂಡ ಹಲವು ವಿಶೇಷ ಲಕ್ಷಣಗಳಿಂದ ಕೂಡಿರುವುದನ್ನು ತಿಳಿದುಕೊಳ್ಳುವಿರಿ. ಆರ್ಥಿಕ ಪರಿಸ್ಥಿತಿಯ ಬಗ್ಗೆಯು ಕೂಡ ಎಷ್ಟರ ಮಟ್ಟಿಗೆ ಅವರ ಆಳ್ವಿಕೆಯ ಕಾಲದಲ್ಲಿ ಸುಭಿಕ್ಷತೆಯನ್ನು ಹೊಂದಿತ್ತೆಂಬುದು ಅರ್ಥವಾಗುತ್ತದೆ.

ಘಟಕ 16 ರಲ್ಲಿ ರಾಷ್ಟ್ರಕೂಟರ ಕಾಲದ ಸಮಾಜದಲ್ಲಾದ ಬದಲಾವಣೆಗಳನ್ನು ಅರಿತುಕೊಳ್ಳುವಿರಿ. ವಿದ್ಯಾಭ್ಯಾಸ ಪ್ರಸಾರದಲ್ಲಿ ಅಗ್ರಹಾರಗಳು, ಬ್ರಹ್ಮಪುರಿಗಳು ಮತ್ತು ಘಟಕಗಳು ಹಾಗೂ ದೇವಸ್ಥಾನಗಳು ನಿರ್ವಹಿಸಿದ ಪಾತ್ರದ ಬಗ್ಗೆ ನೀವು ಅರಿತುಕೊಳ್ಳುವಿರಿ. ರಾಷ್ಟ್ರಕೂಟರ ಕಾಲ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದಲೂ ಬಹಳ ಪ್ರಮುಖ ಎಂಬುದು ನಿಮಗೆ ಅರ್ಥವಾಗುತ್ತದೆ. ಸಂಸ್ಕೃತ ಹಾಗೂ ಕನ್ನಡದಲ್ಲಿ ಉದ್ಗ್ರಂಥಗಳು ರಚಿತವಾದವು. ಕನ್ನಡ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಇದು ಪರ್ವಕಾಲ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳುವಿರಿ. ರಾಷ್ಟ್ರಕೂಟರ ಕಲೆ ಮತ್ತು ವಾಸ್ತು ಶಿಲ್ಪವು ಕೂಡ ಅನೇಕ ವಿಶೇಷ ಲಕ್ಷಣಗಳಿಂದ ಕೂಡಿದೆ. ಗುಹಾಲಯಗಳು ಹಾಗೂ ಏಕ ಶಿಲಾದೇವಾಲಯಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಾಣವಾದವು ಎಂಬುದನ್ನು ನೀವು ಈ ಘಟಕದ ಅಧ್ಯಯನದಿಂದ ಮನನ ಮಾಡಿಕೊಳ್ಳುವಿರಿ.

ಘಟಕ 17 ಕಲ್ಯಾಣದ ಚಾಲುಕ್ಯರ ಮತ್ತು ಕಳಚೂರ್ಯರ ಇತಿಹಾಸಕ್ಕೆ ಸಂಬಂಧಿಸಿದ ಘಟಕ. ಕಲ್ಯಾಣದ ಚಾಲುಕ್ಯರು ಒಂದು ಪ್ರಬಲ ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆ ನಡೆಸಿದರು ಎಂಬುದು ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವಿರಿ. ಅದೇ ರೀತಿ ಕಳಚೂರ್ಯರು ಹಲವು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಇವರ ಆಳ್ವಿಕೆಯ ಕಾಲ ವೀರಶೈವ ಧರ್ಮದ ಬೆಳವಣಿಗೆಯ ದೃಷ್ಟಿಯಿಂದಲೂ ಮಹತ್ವ ಎಂಬುದನ್ನು ಅರ್ಥ ಮಾಡಿಕೊಳ್ಳುವಿರಿ. ಸಾಹಿತ್ಯ, ಧರ್ಮ ಮತ್ತು ಕಲೆಯ ದೃಷ್ಟಿಯಿಂದಲೂ ಚಾಲುಕ್ಯರ ಕಾಲ ಪ್ರಮುಖ ಎಂಬುದು ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು

# ಘಟಕ - 15

# ರಾಷ್ಟ್ರಕೂಟರ ರಾಜಕೀಯ, ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿ

*ರಚನೆ*


15.0 ಉದ್ದೇಶಗಳು

15.1 ಪೀಠಿಕೆ

15.2 ದಂತಿದುರ್ಗ ( ಕ್ರಿ.ಶ. 735-757)

15.3 ಒಂದನೆಯ ಕೃಷ್ಣ ಮತ್ತು ಎರಡನೆಯ ಗೋವಿಂದ

15.4 ಧೃವಧರಾವರ್ಷ ( ಕ್ರಿ.ಶ. 780-793)

15.4.1 ಗಂಗವಾಡಿಯ ಮೇಲೆ ಆಕ್ರಮಣ

15.4.2 ಕಂಚಿಯ ಪಲ್ಲವರು ಮತ್ತು ವೆಂಗಿಯ ಚಾಲುಕ್ಯರ ವಿರುದ್ಧ ಕೈಗೊಂಡ ಯುದ್ಧಗಳು

15.4.3 ಉತ್ತರ ಭಾರತದ ದಂಡಯಾತ್ರೆ

15.5 ಮೂರನೆಯ ಗೋವಿಂದ (ಕ್ರಿ.ಶ. 793-814)

15.5.1 ಸ್ತಂಭನ ದಂಗೆ

15.5.2 ಕಂಚಿಯ ಪಲ್ಲವರು ಮತ್ತು ವೆಂಗಿಯ ಚಾಲುಕ್ಯರ ವಿರುದ್ಧದ ಹೋರಾಟ

15.5.3 ಉತ್ತರ ಭಾರತದ ರಾಜರುಗಳ ಮೇಲೆ ಸಾಧಿಸಿದ ದಿಗ್ವಿಜಯಗಳು

15.5.4 ಮೂರನೆಯ ಗೋವಿಂದನ ವಿರುದ್ಧ ರಚಿಸಿದ ದಕ್ಷಿಣ ಭಾರತದ ರಾಜರುಗಳ ಒಕ್ಕೂಟ

15.5.5 ಮೂರನೆಯ ಗೋವಿಂದನ ಆಳ್ವಿಕೆಯ ಮೌಲ್ಯಮಾಪನ

15.6 ಒಂದನೆಯ ಅಮೋಘವರ್ಷ ( ಕ್ರಿ.ಶ. 814-878)

15.6.1 ವೆಂಗಿಯ ಚಾಲುಕ್ಯರ ವಿರುದ್ಧ ನಡೆದ ಹೋರಾಟ

15.6.2 ತಲಕಾಡಿನ ಗಂಗರು ಮತ್ತು ಕಂಚಿಯ ಪಲ್ಲವರೊಡನೆ ಸಂಬಂಧ

15.6.3 ಗುಜರಾತಿನ ರಾಷ್ಟ್ರಕೂಟರ ಹಾಗೂ ಎರಡನೆಯ ಕೃಷ್ಣನ ದಂಗೆಗಳು

15.6.4 ಸಾಹಿತ್ಯ ಮತ್ತು ಧರ್ಮಕ್ಕೆ ಅಮೋಘವರ್ಷನ ಕೊಡುಗೆ

15.7 ಎರಡನೆಯ ಕೃಷ್ಣ ( ಕ್ರಿ.ಶ. 878-914)

15.8 ಮೂರನೆಯ ಇಂದ್ರ, ಎರಡನೆಯ ಅಮೋಘವರ್ಷ ಮತ್ತು ನಾಲ್ಕನೆಯ ಗೋವಿಂದ

15.9 ಮೂರನೆಯ ಅಮೋಘವರ್ಷ ಮತ್ತು ಮೂರನೆಯ ಕೃಷ್ಣ

15.9.1 ಮೂರನೆಯ ಕೃಷ್ಣ ಮತ್ತು ಎರಡನೆಯ ಭೂತುಗ

15.9.2 ಮೂರನೆಯ ಕೃಷ್ಣ ಮತ್ತು ಮೂರನೆಯ ಮಾರಸಿಂಹ

15.9.3 ಮೂರನೆಯ ಕೃಷ್ಣನ ವ್ಯಕ್ತಿತ್ವ

15.10 ರಾಷ್ಟ್ರಕೂಟ ಮನೆತನದ ಪತನ

15.11 ರಾಷ್ಟ್ರಕೂಟರ ಆಡಳಿತ

15.11.1 ರಾಜ ಮತ್ತು ಅವನ ಆಸ್ಥಾನ

15.11.2 ಯುವರಾಜ

15.11.3 ಮಂತ್ರಿಮಂಡಲ

15.11.4 ಕೇಂದ್ರದ ಕಛೇರಿ

15.11.5 ಸಾಮಂತರು

15.11.6 ನೇರ ಆಡಳಿತಕ್ಕೊಳಪಟ್ಟ ಪ್ರದೇಶಗಳು

15.11.7 ಸ್ಥಳೀಯ ಆಡಳಿತ

15.11.8 ಸೈನ್ಯದ ಆಡಳಿತ

15.12 ಆರ್ಥಿಕ ಪರಿಸ್ಥಿತಿ

15.12.1 ವ್ಯವಸಾಯ

15.12.2 ಕೈಗಾರಿಕೆ

15.12.3 ವ್ಯಾಪಾರ ಮತ್ತು ವಾಣಿಜ್ಯ

15.12.4 ಶ್ರೇಣಿಗಳು

15.13 ಸಂಕ್ಷಿಪ್ತ ಅವಲೋಕನ

15.14 ಮಾದರಿ ಪ್ರಶ್ನೆಗಳು

15.15 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 15.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವ ಅಂಶಗಳೆಂದರೆ:

* ರಾಷ್ಟ್ರಕೂಟ ಮನೆತನದ ಆಳ್ವಿಕೆಯ ಸ್ಥಾಪನೆ
* ಒಂದನೆಯ ಕೃಷ್ಣನ ಸಾಧನೆಗಳು
* ದಕ್ಷಿಣ ಭಾರತ ಮತ್ತು ಉತ್ತರ ಭಾರತದಲ್ಲಿ - ಧೃವನ ದಂಡಯಾತ್ರೆಗಳು
* ದಕ್ಷಿಣ ಭಾರತದ ಮೇಲೆ ಮೂರನೆಯ ಗೋವಿಂದನ ಸಾರ್ವಭೌಮತ್ವ ಮತ್ತು ಅವನ ಉತ್ತರದ ದಂಡಯಾತ್ರೆಗಳು
* ಅಮೋಘವರ್ಷನು ಎದುರಿಸಿದ ಸಮಸ್ಯೆಗಳು, ಸಮಕಾಲೀನ ರಾಜಮನೆತನಗಳೊಡನೆ ಅವನ ಸಂಬಂಧಗಳು ಮತ್ತು ಅವನ ಕೊಡುಗೆಗಳು
* ರಾಷ್ಟ್ರಕೂಟರು ಮತ್ತು ತಲಕಾಡಿನ ಗಂಗರ ನಡುವಿನ ಮೈತ್ರಿಕೂಟ, ಅವರು ಮೂರನೆಯ ಕೃಷ್ಣನ ಕಾಲದಲ್ಲಿ ಜಂಟಿಯಾಗಿ ಚೋಳರ ವಿರುದ್ಧ ಕೈಗೊಂಡ ದಂಡಯಾತ್ರೆ
* ರಾಷ್ಟ್ರಕೂಟ ಮನೆತನದ ಪತನಕ್ಕೆ ಕಾರಣವಾದ ಘಟನೆಗಳು
* ರಾಷ್ಟ್ರಕೂಟರ ಆಡಳಿತದ ಪ್ರಮುಖ ಲಕ್ಷಣಗಳು
* ಆರ್ಥಿಕ ಪರಿಸ್ಥಿತಿಗಳು - ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ.

## 15.1 ಪೀಠಿಕೆ

ಕ್ರಿ.ಶ. 757 ರಲ್ಲಿ ಬಾದಾಮಿ ಚಾಲುಕ್ಯ ಮನೆತನದ ಸಾರ್ವಭೌಮತ್ವವನ್ನು ಕೊನೆಗಾಣಿಸಿ ದಂತಿದುರ್ಗನು ರಾಷ್ಟ್ರಕೂಟ ಮನೆತನವನ್ನು ಸ್ಥಾಪಿಸಿದನು. ಈ ಮನೆತನವು ಕ್ರಿ.ಶ. 973 ರವರೆಗೆ ಒಂದು ಪ್ರಬಲ ಹಾಗೂ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆ ನಡೆಸಿತು. ರಾಷ್ಟ್ರಕೂಟರ ಸಾಮ್ರಾಜ್ಯ ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ ವಿಸ್ತರಿಸಿತ್ತು. ಧೃವ, ಮೂರನೆಯ ಗೋವಿಂದ, ಅಮೋಘ ವರ್ಷನೃಪತುಂಗ, ಮೂರನೆಯ ಇಂದ್ರ ಮತ್ತು ಮೂರನೆಯ ಕೃಷ್ಣ, ಈ ಮನೆತನದ ಪ್ರಮುಖ ಚಕ್ರವರ್ತಿಗಳು. ಸುಮಾರು ಎರಡು ಶತಮಾನಗಳ ಕಾಲ ಭಾರತದ ಯಾವೊಂದು ರಾಜಮನೆತನವು ರಾಷ್ಟ್ರಕೂಟ ಮನೆತನವನ್ನು ಎದುರಿಸಿ ಜಯಗಳಿಸಲಾಗಲಿಲ್ಲ. ಅವರ ಆಳ್ವಿಕೆಯ ಕಾಲವನ್ನು ಭಾರತದ ಇತಿಹಾಸದಲ್ಲಿ ರಾಷ್ಟ್ರಕೂಟರ ಯುಗವೆಂದು ಕರೆದರೆ ತಪ್ಪಾಗಲಾರದು.

## 15.2 ದಂತಿದುರ್ಗ (ಕ್ರಿ.ಶ. 735-757)

ದಂತಿದುರ್ಗನು ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪಕ. ಅವನ ಪೂರ್ವಜರಾದ ಒಂದನೆಯ ಇಂದ್ರ, ಒಂದನೆಯ ಗೋವಿಂದ, ಕರ್ಕ ಮತ್ತು ಎರಡನೆಯ ಇಂದ್ರ ಬಾದಾಮಿ ಚಾಲುಕ್ಯರ ಸಾಮಂತರಾಗಿ ಸೇವೆ ಸಲ್ಲಿಸಿದ್ದರು. ದಂತಿದುರ್ಗನು ಎರಡನೆಯ ಇಂದ್ರನ ಮಗ. ಬಾದಾಮಿಯ ಚಾಲುಕ್ಯರ ಎರಡನೆಯ ವಿಕ್ರಮಾದಿತ್ಯನ ಕಾಲದಲ್ಲಿ ಅವನು ಇಂದಿನ ಔರಂಗಬಾದ್ ಪ್ರದೇಶದಲ್ಲಿ ಮಾಂಡಳಿಕನಾಗಿ ಸೇವೆ ಸಲ್ಲಿಸುತ್ತಿದ್ದನು. ಅವನು ಎರಡನೆಯ ವಿಕ್ರಮಾದಿತ್ಯನ ಹಲವು ಯುದ್ಧಗಳಲ್ಲಿ ಭಾಗವಹಿಸಿ ನಿಷ್ಠೆಯಿಂದ ಸೇವೆ ಸಲ್ಲಿಸಿದನು. ಆದರೆ ಎರಡನೆಯ ಕೀರ್ತಿವರ್ಮನ ಕಾಲದಲ್ಲಿ ರಾಷ್ಟ್ರಕೂಟರ ಒಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಬೇಕೆಂದು ಆಲೋಚನೆ ನಡೆಸಲು ಪ್ರಾರಂಭಿಸಿದನು. ಪ್ರಾರಂಭದಲ್ಲಿ ಗೂರ್ಜರ ಪ್ರತಿಹಾರರನ್ನು ಸೋಲಿಸಿದನು. ಅನಂತರ ದಕ್ಷಿಣ ಗುಜರಾತ್ ಮತ್ತು ಮಧ್ಯ ಪ್ರದೇಶದ ಹಲವು ಭಾಗಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದನು. ದಂತಿದುರ್ಗನು ಹೊರಡಿಸಿದ ವಲ್ಲಭ (ಎರಡನೇ ಕೀರ್ತಿವರ್ಮ) ನನ್ನು ಸೋಲಿಸಿ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿದನೆಂಬ ಅಂಶವು ತಿಳಿದು ಬರುತ್ತದೆ. ಅನಂತರ ಚಾಲುಕ್ಯ ಸಾಮ್ರಾಜ್ಯದ ದಂತಿದುರ್ಗನು ಹಲವು ಪ್ರದೇಶಗಳನ್ನು ಗೆದ್ದುಕೊಂಡನು. ಈ ರೀತಿಯಾಗಿ ರಾಷ್ಟ್ರಕೂಟರ ಒಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು.

## 15.3 ಒಂದನೇ ಕೃಷ್ಣ ಮತ್ತು ಎರಡನೆಯ ಗೋವಿಂದ

ದಂತಿದುರ್ಗನಿಗೆ ಗಂಡು ಮಕ್ಕಳಿಲ್ಲದೆ ಇದ್ದುದರಿಂದ ಅವನ ಮರಣಾನಂತರ ಅವನ ಚಿಕ್ಕಪ್ಪ ಒಂದನೇ ಕೃಷ್ಣನು ರಾಜನಾದನು. ದಂತಿದುರ್ಗನು ಮರಣ ಹೊಂದಿದ ಮೇಲೆ ಪುನಃ ಎರಡನೆಯ ಕೀರ್ತಿವರ್ಮನು ತನ್ನ ಪರಮಾಧಿಕಾರವನ್ನು ಸ್ಥಾಪಿಸಲು ಪ್ರಯತ್ನ ನಡೆಸಿದನು. ಆದರೆ ಪುನಃ ಕೃಷ್ಣನಿಂದ ಸೋಲನ್ನನುಭವಿಸಿದನು. ಈ ರೀತಿಯಾಗಿ ಚಾಳುಕ್ಯರ ಆಳ್ವಿಕೆ ಕ್ರಿ.ಶ. 757 ರಲ್ಲಿ ಕೊನೆಗೊಂಡಿತು. ಕೃಷ್ಣನು ಗಂಗವಾಡಿಯನ್ನು ಗೆದ್ದುಕೊಂಡು ತನ್ನ ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿದನು. ಒಂದನೆಯ ಕೃಷ್ಣನಿಗೂ ಮತ್ತು ಗಂಗರ ರಾಜ ಶ್ರೀಪುರುಷನ ನಡುವೆ ಅನೇಕ ಯುದ್ಧಗಳು ನಡೆದವು. ಪ್ರಾರಂಭದಲ್ಲಿ ಅನೇಕ ಕದನಗಳಲ್ಲಿ ಒಂದನೆಯ ಕೃಷ್ಣನು ವಿಜಯಗಳಿಸಿ ನೆಲಮಂಗಲದ ಹತ್ತಿರವಿರುವ ಮಣ್ಣೆಯವರೆಗೂ ದಂಡೆತ್ತಿ ಹೋದನು. ಆದರೆ ಅನಂತರ ಶ್ರೀಪುರುಷನು ಕೃಷ್ಣನನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಇದೇ ವೇಳೆಯಲ್ಲಿ ಒಂದನೆಯ ಕೃಷ್ಣನ ಮಗನಾದ ಎರಡನೆಯ ಗೋವಿಂದನು ವೆಂಗಿಯ ವಿರುದ್ಧ ದಂಡೆತ್ತಿ ಹೋಗಿ ನಾಲ್ಕನೆಯ ವಿಷ್ಣುವರ್ಧನನನ್ನು ಸೋಲಿಸಿದನು. ಕೃಷ್ಣನು ರಾಷ್ಟ್ರಕೂಟ ರಾಜ್ಯಕ್ಕೆ ಭದ್ರ ತಳಹದಿಯನ್ನು ಹಾಕುವುದರಲ್ಲಿ ಯಶಸ್ವಿಯಾದನು. ಒಂದನೆಯ ಕೃಷ್ಣನು ಕ್ರಿ.ಶ. 774 ರಲ್ಲಿ ಮರಣವಾದ ಮೇಲೆ ಅವನ ಮಗ ಎರಡನೆಯ ಗೋವಿಂದನು ರಾಷ್ಟ್ರಕೂಟ ಸಿಂಹಾಸನವನ್ನಲಂಕರಿಸಿದನು.

ಎರಡನೆಯ ಗೋವಿಂದನು (ಕ್ರಿ.ಶ. 774 - 780 ) ಯುವರಾಜನಾಗಿದ್ದಾಗ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಜಯಗಳಿಸಿದ್ದನು. ಆದರೆ ರಾಜನಾದ ಮೇಲೆ ಸುಖಲೋಲುಪ್ತನಾಗಿ ಸಾಮ್ರಾಜ್ಯದ ಹಿತವನ್ನು ಕಡೆಗಣಿಸಿದನು. ಆಡಳಿತದ ಕೆಲಸವನ್ನು ತನ್ನ ತಮ್ಮ ಧೃವನಿಗೆ ವಹಿಸಿಕೊಟ್ಟನು. ಮಹಾಮಾಂಡಳಿಕರು ಇವನ ನಡವಳಿಕೆಯಿಂದ ಬೇಸತ್ತರು. ಕ್ರಮೇಣ ಸಹೋದರರಲ್ಲಿ ವಿರಸವುಂಟಾಯಿತು. ಧೃವನು ಎರಡನೆಯ ಗೋವಿಂದನನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬಂದನು.

## 15.4 ಧೃವ ಧರಾವರ್ಷ ( ಕ್ರಿ.ಶ. 780 -793)

ಧೃವನು ಕ್ರಿ.ಶ. 780 ರಲ್ಲಿ ರಾಷ್ಟ್ರಕೂಟ ಅರಸನಾದನು. ಈತನು ಸಿಂಹಾಸನಕ್ಕೆ ಬಂದ ಮೇಲೆ ರಾಷ್ಟ್ರಕೂಟರ ಇತಿಹಾಸದಲ್ಲಿ ಒಂದು ಹೊಸ ಯುಗ ಪ್ರಾರಂಭವಾಯಿತೆಂದು ಹೇಳಬಹುದು. ಈತನು ರಾಷ್ಟ್ರಕೂಟರ ಪ್ರಬಲ ಚಕ್ರವರ್ತಿಗಳಲ್ಲೊಬ್ಬನಾಗಿದ್ದನು. ಆಂತರಿಕ ಯುದ್ಧದ ಸಮಯದಲ್ಲಿ ತನ್ನ ಸಹೋದರನ ಪರವಾಗಿದ್ದವರನ್ನು ಸದೆಬಡಿಯಲು ನಿಶ್ಚಯಿಸಿದನು.

### 15.4.1 *ಗಂಗವಾಡಿಯ ಮೇಲೆ ಆಕ್ರಮಣ*

ಪೈಥಾನ್ ತಾಮ್ರ ಪತ್ರಗಳ ಪ್ರಕಾರ ಮಾಳವ, ಕಂಚಿ, ಗಂಗ, ವೆಂಗಿಯ ಅರಸರು ಮತ್ತು ಇನ್ನು ಅನೇಕರು ಎರಡನೆಯ ಗೋವಿಂದನ ಪರವಾಗಿ ಹೋರಾಟ ನಡೆಸಿದರೆಂದು ತಿಳಿದು ಬರುತ್ತದೆ. ಇವರಲ್ಲಿ ಗಂಗ ರಾಜಮನೆತನವು ಹೆಚ್ಚು ಅಪಾಯಕಾರಿ ಎಂದು ಧೃವನು ಭಾವಿಸಿದನು. ಒಂದನೆಯ ಕೃಷ್ಣನು ಅವರನ್ನು ಸದೆಬಡಿಯುವುದರಲ್ಲಿ ವಿಫಲನಾಗಿದ್ದನು. ಆಂತರಿಕ ಕಲಹದ ಸಮಯದಲ್ಲೂ ಕೂಡ ಗೋವಿಂದನ ಪರವಾಗಿ ಹಸ್ತ ಕ್ಷೇಪ ನಡೆಸಿದ್ದನು. ಆದ್ದರಿಂದ ಗಂಗರನ್ನು ಶಿಕ್ಷಿಸಲು ಧೃವನು ನಿರ್ಧರಿಸಿದನು. ಎರಡನೆಯ ಶಿವಮಾರನು ಶ್ರೀಪುರುಷನಷ್ಟು ಪ್ರಬಲ ಅರಸನಾಗಿರಲಿಲ್ಲ. ಧೃವನು ಅವನ ರಾಜ್ಯದ ಮೇಲೆ ದಾಳಿ ಮಾಡಿ ಸುಲಭವಾಗಿ ಸೋಲಿಸಿದನು. ಅನೇಕ ಶಾಸನಗಳು ಎರಡನೆಯ ಶಿವಮಾರನು ಧೃವನಿಂದ ಸೋಲಿಸಲ್ಪಟ್ಟ ಮಾಹಿತಿಯನ್ನು ವಿವರಿಸುತ್ತವೆ. ಅನಂತರ ಸೆರೆಮನೆಯಲ್ಲಿಟ್ಟನು. ಧೃವನು ತನ್ನ ಮಗ ಸ್ತಂಭ (ಕಂಭ) ನನ್ನು ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದನು.

### 15.4.2 *ಕಂಚಿಯ ಪಲ್ಲವರು ಮತ್ತು ವೆಂಗಿಯ ಚಾಲುಕ್ಯರ ವಿರುದ್ಧ ಕೈಗೊಂಡ ಯುದ್ಧಗಳು*

ಅನಂತರ ಧೃವನು ಕಂಚಿಯ ಪಲ್ಲವರ ವಿರುದ್ಧ ದಂಡೆತ್ತಿ ಹೋದನು. ದಂತಿವರ್ಮನು ಕೂಡ ಎರಡನೆಯ ಗೋವಿಂದನ ಪರವಾಗಿ ಹೋರಾಟ ನಡೆಸಿದ್ದನೆಂದು ತಿಳಿದು ಬರುತ್ತದೆ. ಧೃವನು ಅವನನ್ನು ಸದೆಬಡಿದು ಕಪ್ಪ ಕಾಣಿಕೆಯನ್ನು ವಸೂಲಿ ಮಾಡಿದನು.

ವೆಂಗಿಯ ನಾಲ್ಕನೆಯ ವಿಷ್ಣುವರ್ಧನನು ಕೂಡ ರಾಷ್ಟ್ರಕೂಟ ರಾಜ್ಯದಲ್ಲಿ ನಡೆದ ಆಂತರಿಕ ಯುದ್ಧದಲ್ಲಿ ಎರಡನೆಯ ಗೋವಿಂದನ ಪಕ್ಷ ವಹಿಸಿದ್ದನು. ವಿಷ್ಣುವರ್ಧನನು ಧೃವನ ಪ್ರಾಬಲ್ಯವನ್ನು ಕಂಡು, ಶರಣಾಗತನಾದನು. ಧೃವನೊಡನೆ ಒಪ್ಪಂದವನ್ನು ಮಾಡಿಕೊಂಡು ಕಪ್ಪ ಕಾಣಿಕೆ ನೀಡಿದನು. ತನ್ನ ಮಗಳು ಶೀಲಮಹಾದೇವಿಯನ್ನು (ಶಿಲಭಟ್ಟಾರಿಕೆ) ಧೃವನಿಗೆ ವಿವಾಹ ಮಾಡಿಕೊಟ್ಟನು.

### 15.4.3 ಉತ್ತರ ಭಾರತದ ದಂಡಯಾತ್ರೆ

ದಕ್ಷಿಣ ಭಾರತದಲ್ಲಿ ತನ್ನ ಅಧಿಕಾರವನ್ನು ಪ್ರಬಲವಾಗಿ ಸ್ಥಾಪಿಸಿದ ನಂತರ ಉತ್ತರದ ರಾಜ್ಯಗಳ ಮೇಲೂ ದಂಡಯಾತ್ರೆ ಕೈಗೊಳ್ಳಲು ನಿರ್ಧರಿಸಿದನು. ಮೊದಲನೆಯದಾಗಿ ಮಾಳವಾದ ಅರಸನನ್ನು ಸದೆಬಡಿಯಲು ನಿರ್ಧರಿಸಿದನು. ಉತ್ತರದಲ್ಲಿ ಅತ್ಯಂತ ಪ್ರಮುಖ ಕೇಂದ್ರವಾಗಿದ್ದ ಕನೂಜಿನವರೆಗೂ ದಂಡೆತ್ತಿ ಹೋಗಿ ಅಲ್ಲಿ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಲು ನಿರ್ಧರಿಸಿದನು.

ಉತ್ತರ ಭಾರತದಲ್ಲಿ ಎರಡು ಪ್ರಮುಖ ರಾಜಮನೆತನಗಳೆಂದು ಪರಿಗಣಿಸಲ್ಪಟ್ಟಿದ್ದ ಗೂರ್ಜರ ಪ್ರತೀಹಾರ ಮತ್ತು ಪಾಲ ಮನೆತನಗಳು ಕನೂಜಿನ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಲು ಪೈಪೋಟಿ ನಡೆಸುತ್ತಿದ್ದವು. ಆಗ ಕನೂಜಿನ ರಾಜನಾಗಿದ್ದ ಇಂದ್ರಾಯುಧನು ಈ ಎರಡು ಪ್ರಬಲ ಮನೆತನಗಳನ್ನು ಎದುರಿಸುವಷ್ಟು ಸಾಮರ್ಥ್ಯ ಹೊಂದಿರಲಿಲ್ಲ. ವಾಯುವ್ಯ ಭಾರತದಲ್ಲಿ ಪರಮಾಧಿಕಾರವನ್ನು ಸ್ಥಾಪಿಸಿದ್ದ ಗೂರ್ಜರ ಪ್ರತೀಹಾರ ಅರಸ ವತ್ಸರಾಜನು ಮೊದಲು ಕನೂಜಿನ ಮೇಲೆ ದಾಳಿ ಮಾಡಿ ಅದನ್ನು ಆಕ್ರಮಿಸಿಕೊಳ್ಳುವುದರಲ್ಲಿ ಯಶಸ್ವಿಯಾದನು. ಇಂದ್ರಾಯುಧನನ್ನು ತನ್ನ ಮಾಂಡಳಿಕನನ್ನಾಗಿ ಮುಂದುವರಿಯಲು ಅವಕಾಶ ಮಾಡಿಕೊಟ್ಟನು. ಪೂರ್ವ ಭಾರತದ ಮತ್ತೊಂದು ಪ್ರಬಲ ಮನೆತನವೆನಿಸಿಕೊಂಡಿದ್ದ ಪಾಲ ರಾಜ ಧರ್ಮಪಾಲನು ವತ್ಸರಾಜನನ್ನು ಕನೂಜಿನಿಂದ ಹೊಡೆದೋಡಿಸಿ ಅಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸುವ ದೃಷ್ಠಿಯಿಂದ ಒಂದು ಪ್ರಬಲ ಸೈನ್ಯದೊಂದಿಗೆ ದಂಡೆತ್ತಿ ಹೋದನು. ಆದರೆ ಅವನು ವತ್ಸರಾಜನಿಂದ ಸೋಲನ್ನನುಭವಿಸಿ ಹಿಂದಿರುಗಬೇಕಾಯಿತು. ಧರ್ಮಪಾಲನು ಎರಡನೆಯ ಬಾರಿಗೆ ತನ್ನ ಸೈನ್ಯವನ್ನು ಸಂಘಟಿಸಿ ಕನೂಜಿನ ಮೇಲೆ ಪುನಃ ದಂಡೆತ್ತಿ ಹೋದನು.

ಈ ವೇಳೆಯಲ್ಲಿ ಧೃವ ತನ್ನ ಉತ್ತರ ಭಾರತದ ದಂಡಯಾತ್ರೆಯನ್ನು ಕೈಗೊಂಡನು. ಧೃವನು ನರ್ಮದಾ ನದಿಯನ್ನು ದಾಟಿ ಕನೂಜಿನ ಕಡೆ ಧಾವಿಸಿದನು. ಧೃವನ ದಾಳಿಯನ್ನರಿತ ವತ್ಸರಾಜನು ಒಂದು ದೊಡ್ಡ ಸೈನ್ಯ ಸಮೇತ ಅವನನ್ನು ಎದುರಿಸಲು ಧಾವಿಸಿದನು. ಇವರಿಬ್ಬರ ನಡುವೆ ನಡೆದ ಯುದ್ಧದಲ್ಲಿ ವತ್ಸರಾಜನು ಸೋತು ರಣರಂಗದಿಂದ ಪಲಾಯನ ಮಾಡಿದನು. ದೋ ಅಬ್ ನದಿಯವರೆಗೂ ಆಗಮಿಸಿದ್ದ ಧರ್ಮಪಾಲನು ಕೂಡ ಧೃವನ ವಿರುದ್ಧ ಹೋರಾಟ ಮಾಡಬೇಕಾಯಿತು. ಧರ್ಮ ಪಾಲನು ಕೂಡ ಸೋಲನ್ನನುಭವಿಸಿದನು. ಯಾವುದೇ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವ ಉದ್ದೇಶವಿಲ್ಲದೆ ಇದ್ದುದರಿಂದ ಕನೂಜನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಗಂಗ ಮತ್ತು ಯಮುನಾ ನದಿಗಳ ದಡದ ಮೇಲೆ ಕೆಲವು ದಿವಸಗಳು ತಂಗಿದ್ದು ಅನಂತರ ತನ್ನ ರಾಜ್ಯಕ್ಕೆ ಹಿಂದಿರುಗಿದನು. ಧೃವನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. ಕರ್ಕ, ಸ್ತಂಭ, ಮೂರನೆಯ ಗೋವಿಂದ ಮತ್ತು ಇಂದ್ರ. ಧೃವನಿಗಿಂತ ಮೊದಲೆ ಕರ್ಕನು ಮರಣಹೊಂದಿದನು. ಧೃವನು ತನ್ನ ಮೂರನೆಯ ಮಗ ಮೂರನೆಯ ಗೋವಿಂದನನ್ನು ತನ್ನ ಉತ್ತರಾಧಿಕಾರಿ ಎಂದು ಘೋಷಿಸಿ ಯುವರಾಜನನ್ನಾಗಿ ನೇಮಿಸಿದನು. ಇಂದ್ರನು ಮಾಳವದ ರಾಜ್ಯಪಾಲನಾದನು.

ಧೃವನು ರಾಷ್ಟ್ರಕೂಟ ಮನೆತನದ ಗೌರವವನ್ನು ಉತ್ತುಂಗಕ್ಕೇರಿಸುವುದರಲ್ಲಿ ಯಶಸ್ವಿಯಾದನು. "ಮೊಟ್ಟಮೊದಲನೆಯದಾಗಿ, ಶಾತವಾಹನರು ಆಳಿದ 800 ವರ್ಷಗಳ ನಂತರ, ದಖ್ಖಿನ್ನಿನ ಒಂದು ಸೈನ್ಯ ಅವನ (ಧೃವ) ನಾಯಕತ್ವದಲ್ಲಿ ಉತ್ತರ ಭಾರತದ ಮೇಲೆ ದಂಡೆತ್ತಿ ಹೋಗಿ ದೋ ಆಬ್ ಪ್ರದೇಶದವರೆಗೂ ಧಾವಿಸಿತು". ಅವನು ಕ್ರಿ.ಶ. 793 ರಲ್ಲಿ ಮರಣ ಹೊಂದಿದಾಗ ಇಡೀ ಭಾರತದಲ್ಲೆ ರಾಷ್ಟ್ರಕೂಟರನ್ನು ಎದುರಿಸುವ ಮತ್ತೊಂದು ಮನೆತನವಿರಲಿಲ್ಲ' ಎಂಬುದಾಗಿ ಆಲ್ತೇಕರ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

## 15.5 ಮೂರನೆಯ ಗೋವಿಂದ (ಕ್ರಿ.ಶ. 793- 814)

ಧೃವನ ಉತ್ತರಾಧಿಕಾರಿಯಾಗಿ ಬಂದ ಮೂರನೆಯ ಗೋವಿಂದನು ರಾಷ್ಟ್ರಕೂಟ ಸಾಮ್ರಾಟರಲ್ಲೆಲ್ಲ ಅತ್ಯಂತ ಪರಾಕ್ರಮಿ ಎಂದು ಪರಿಗಣಿಸಲ್ಪಟ್ಟಿದ್ದಾನೆ. ಒಬ್ಬ ದಕ್ಷ ರಾಜನಿಗೆ ಒಬ್ಬ ದಕ್ಷ ಉತ್ತರಾಧಿಕಾರಿ ಎಂದೆನಿಸಿಕೊಂಡಿದ್ದಾನೆ. ಅವನು ಪಟ್ಟಾಭಿಷೇಕ್ತನಾದಾಗ ಯಾವ ತೊಂದರೆಯೂ ಕಾಣಿಸಲಿಲ್ಲ.

### 15.5.1 ಸ್ತಂಭನ ದಂಗೆ

ಮೂರನೆಯ ಗೋವಿಂದನು ಒಂದು ಅಥವಾ ಎರಡು ವರ್ಷಗಳವರೆಗೆ ಶಾಂತಿಯಿಂದ ರಾಜ್ಯಭಾರ ಮಾಡಿದನು. ಆದರೆ ಅವನು ನಿರೀಕ್ಷಿಸಿದಂತೆ ಗಂಗವಾಡಿಯ ಪ್ರಾಂತ್ಯಧಿಕಾರಿಯಾಗಿದ್ದ ತನ್ನ ಹಿರಿಯ ಸಹೋದರ ಸ್ತಂಭನಿಂದ ಅಪಾಯ ತಲೆದೋರಿತು.

ಧ್ರುವನು ಉತ್ತರಾಧಿಕಾರತ್ವಕ್ಕೆ ಸಂಬಂಧಿಸಿದ ಕಲಹವನ್ನು ತಪ್ಪಿಸುವ ದೃಷ್ಟಿಯಿಂದ ಮಾಡಿದ್ದ ವ್ಯವಸ್ಥೆ ಬಹಳ ದಿನಗಳ ಕಾಲ ಮುಂದುವರಿಯಲಿಲ್ಲ. ಸ್ತಂಭನು ತನ್ನ ಹಕ್ಕಿಗಾಗಿ ಹೋರಾಟ ನಡೆಸಲು ನಿರ್ಧರಿಸಿ ಸಿದ್ಧತೆಗಳನ್ನು ಮಾಡಿಕೊಂಡನು. ಈ ರೀತಿಯಾಗಿ ಯಾದವಿ ಕಲಹ ಪ್ರಾರಂಭವಾಯಿತು. ಗೋವಿಂದನು ಕೂಡ ಈ ಅಪಾಯವನ್ನು ನಿರೀಕ್ಷಿಸಿದ್ದ. ಅದರಂತೆ ಈ ಅಪಾಯವನ್ನು ಎದುರಿಸಲು ಸಿದ್ಧತೆ ಮಾಡಿಕೊಂಡಿದ್ದನು. ಸ್ತಂಭನು ಹನ್ನೆರಡು ರಾಜರ ಒಂದು ಒಕ್ಕೂಟವನ್ನು ರಚಿಸಿಕೊಂಡಿದ್ದನೆಂದು ಶಾಸನಗಳು ತಿಳಿಸುತ್ತವೆ. ಈ ರಾಜರುಗಳು ಯಾರೆಂಬ ವಿವರಣೆಯನ್ನು ನೀಡುವುದು ಕಷ್ಟ. ಬಹುಶಃ ಈ ಒಕ್ಕೂಟದಲ್ಲಿ ವೆಂಗಿ ಮತ್ತು ಪಲ್ಲವ ಅರಸರು ಪ್ರಮುಖವಾದ ಪಾತ್ರ ವಹಿಸಿರಬಹುದೆಂದು ಹೇಳಬಹುದು.

ಮೂರನೆಯ ಗೋವಿಂದನು ತನ್ನ ಸೈನ್ಯದ ಬಲವರ್ಧನೆಯನ್ನು ಕೈಗೊಂಡನು. ಗಂಗವಾಡಿಗೆ ಸಂಬಂಧಿಸಿದಂತೆ ಒಂದು ರಾಜತಾಂತ್ರಿಕ ನಿರ್ಣಯವನ್ನು ತೆಗೆದುಕೊಂಡನು. ರಾಷ್ಟ್ರಕೂಟ ಸೆರೆಮನೆಯಿಂದ ಎರಡನೆಯ ಶಿವಮಾರನನ್ನು ಬಿಡುಗಡೆ ಮಾಡಿ ಗಂಗವಾಡಿಯ ರಾಜನನ್ನಾಗಿ ಮಾಡಿದನು. ತನ್ನ ಸಹೋದರ ಸ್ತಂಭನ ವಿರುದ್ಧ ಪ್ರತಿಸ್ಪರ್ಧಿಯನ್ನು ಸೃಷ್ಟಿಸುವ ದೃಷ್ಟಿಯಿಂದ ಇಂತಹ ಕ್ರಮವನ್ನು ಮೂರನೆಯ ಗೋವಿಂದನು ಕೈಗೊಂಡನು. ಆದರೆ ಎರಡನೆಯ ಶಿವಮಾರನು ಗಂಗವಾಡಿಯನ್ನು ತಲುಪಿದ ನಂತರ ಮೂರನೆಯ ಗೋವಿಂದನ ನಿರೀಕ್ಷೆಯನ್ನು ಹುಸಿಗೊಳಿಸಿ ಸ್ತಂಭನ ಪರವಾಗಿ ನಿಂತನು. ಆದಾಗ್ಯೂ ಮೂರನೆಯ ಗೋವಿಂದನು ಧೈರ್ಯಗುಂದದೆ ಗಂಗವಾಡಿಯ ಮೇಲೆ ಧಾಳಿ ಮಾಡಿ ಇವರಿಬ್ಬರನ್ನು ಹಾಗೂ ಅವರ ಸಹಾಯಕ್ಕೆ ಬಂದಿದ್ದವರನ್ನು ಸದೆಬಡಿಯಲು ಸೈನ್ಯದೊಂದಿಗೆ ಹೊರಟನು. ಗೋವಿಂದನಿಗೂ ಮತ್ತು ಸ್ತಂಭನಿಗೂ ಅನೇಕ ಕದನಗಳು ನಡೆದವು. ಅಂತಿಮವಾಗಿ ಸ್ತಂಭನ ಒಕ್ಕೂಟ ಸಂಪೂರ್ಣವಾಗಿ ಕರಗಿ ಹೋಯಿತು. ಸ್ತಂಭನು ಸೋಲಿಸಲ್ಪಟ್ಟು ಸೆರೆಯಾಳಾದನು. ಅದೇ ರೀತಿ ಎರಡನೆಯ ಶಿವಮಾರನು ಕೂಡ ಸೋಲಿಸಲ್ಪಟ್ಟು ಬಂಧಿಸಲ್ಪಟ್ಟನು. ಗೋವಿಂದನು ತನ್ನ ಸಹೋದರನನ್ನು ಕೊಲ್ಲುವ ಅಥವಾ ಶಿಕ್ಷಿಸುವ ಮನಸ್ಸು ಮಾಡಲಿಲ್ಲ. ಉದಾರತೆಯಿಂದ ಅವನನ್ನು ಮನ್ನಿಸಿ ಪುನಃ ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದನು. ಸ್ತಂಭನು ತಾನು ಮರಣ ಹೊಂದುವವರೆಗೂ ತನ್ನ ಕಿರಿಯ ಸಹೋದರನಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿದನು. ಆದರೆ ಎರಡನೆಯ ಶಿವಮಾರನನ್ನು ಪುನಃ ಎರಡನೆಯ ಬಾರಿಗೆ ಸೆರೆಮನೆಗೆ ತಳ್ಳಿದನು.

### 15.5.2 ಕಂಚಿಯ ಪಲ್ಲವರು ಮತ್ತು ವೆಂಗಿಯ ಚಾಲುಕ್ಯರ ವಿರುದ್ಧದ ಹೋರಾಟ

ಸ್ತಂಭ ಮತ್ತು ಶಿವಮಾರನನ್ನು ಸದೆಬಡಿದ ನಂತರ ಪಲ್ಲವರ ಅರಸ ಎರಡನೆಯ ನಂದಿ ವರ್ಮನ ವಿರುದ್ಧ ದಂಡೆತ್ತಿಹೋದನು. ಆತನು ಕಪ್ಪ ಕಾಣಿಕೆಯನ್ನು ನಿಗದಿಯಾಗಿ ಸಲ್ಲಿಸಲಿರಲಿಲ್ಲ ಹಾಗೂ ಅವನು ಸ್ತಂಭನ ಪರವಾಗಿ ಯುದ್ಧದಲ್ಲಿ ಸಹಾಯ ಮಾಡಿದ್ದನು. ಗೋವಿಂದನು ನಂದಿವರ್ಮನನ್ನು ಸೋಲಿಸಿ ರಾಷ್ಟ್ರಕೂಟರ ಅಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದನು.

ಮೂರನೆಯ ಗೋವಿಂದನು ವೆಂಗಿಯ ರಾಜ್ಯದ ಮೇಲೂ ಕೂಡ ಅನೇಕ ದಂಡಯಾತ್ರೆಗಳನ್ನು ಕೈಗೊಂಡನು. ಒಂದನೆಯ ಧ್ರುವನು ವೆಂಗಿಯ ಅರಸ ನಾಲ್ಕನೆಯ ವಿಷ್ಣುವರ್ಧನನ್ನು ಸೋಲಿಸಿ ರಾಷ್ಟ್ರಕೂಟರ ಪ್ರಭುತ್ವವನ್ನು ಸ್ಥಾಪಿಸಿದ್ದನು. ತನ್ನ ಆಳ್ವಿಕೆಯ ಅಂತ್ಯದವರೆಗೂ ರಾಷ್ಟ್ರಕೂಟರಿಗೆ ವಿಧೇಯನಾಗಿದ್ದನು. ಆದರೆ ಅವರ ಉತ್ತರಾಧಿಕಾರಿ ಎರಡನೆಯ ವಿಜಯಾದಿತ್ಯನು ರಾಷ್ಟ್ರಕೂಟರ ಅಧಿಕಾರವನ್ನು ಕಿತ್ತೊಗೆದು ಸ್ವತಂತ್ರನಾದನು. ಅನೇಕ ವರ್ಷಗಳವರೆಗೆ ಮೂರನೆಯ ಗೋವಿಂದನಿಗೂ ಮತ್ತು ಎರಡನೆಯ ವಿಜಯಾದಿತ್ಯನಿಗೂ ಯುದ್ಧಗಳು ನಡೆದವು. ಅಂತಿಮವಾಗಿ ಗೋವಿಂದನು ವಿಜಯಾದಿತ್ಯನನ್ನು ಸೋಲಿಸಿ ವೆಂಗಿಯ ಸಿಂಹಾಸನದಿಂದ ಪದಚ್ಯುತಿಗೊಳಿಸಿದನು. ಅನಂತರ ಅವನ ಸೋದರ ಸಂಬಂಧಿ ಭೀಮ ಸಲುಕಿಯನ್ನು ವೆಂಗಿಯ ರಾಜನನ್ನಾಗಿ ನೇಮಿಸಿದನು. ಹೀಗೆ ಪುನಃ ವೆಂಗಿಯ ಮೇಲೆ ರಾಷ್ಟ್ರಕೂಟರ ಪರಮಾಧಿಕಾರವನ್ನು ಮೂರನೆಯ ಗೋವಿಂದನು ಸ್ಥಾಪಿಸುವುದರಲ್ಲಿ ಯಶಸ್ವಿಯಾದನು.

### 15.5.3 ಉತ್ತರ ಭಾರತದ ದಿಗ್ವಿಜಯಗಳು

ಈ ರೀತಿಯಾಗಿ ಇಡೀ ದಕ್ಷಿಣ ಭಾರತದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿದ ಮೇಲೆ ತನ್ನ ತಂದೆಯ ರೀತಿಯೆ ಉತ್ತರ ಭಾರತದ ಮೇಲೆ ದಂಡಯಾತ್ರೆ ಕೈಗೊಳ್ಳಲು ನಿರ್ಧರಿಸಿದನು. ಧ್ರುವನು ಉತ್ತರ ಭಾರತದ ದಂಡಯಾತ್ರೆಯಿಂದ ಹಿಂದಿರುಗಿದ ನಂತರ ಅಲ್ಲಿನ ರಾಜಕೀಯ ಸ್ಥಿತಿಗಳು ಬದಲಾಯಿಸಿದ್ದವು. ಗೂರ್ಜರ ಪ್ರತೀಹಾರ ಮತ್ತು ಪಾಲರ ನಡುವೆ ಕನೂಜನ್ನು ವಶಪಡಿಸಿಕೊಳ್ಳಲು ಪೈಪೋಟಿ ಮುಂದುವರಿದಿತ್ತು. ಈ ಬಾರಿ ಧರ್ಮಪಾಲನು ಕನೂಜನ್ನು ಮೊದಲು ಗೆದ್ದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದನು.

ಚಕ್ರಾಯುಧನನ್ನು ತನ್ನ ಮಾಂಡಳಿಕನನ್ನಾಗಿ ಕನೂಜಿನಲ್ಲಿ ನೇಮಕ ಮಾಡಿದನು. ಆದರೆ ಧರ್ಮಪಾಲನ ಈ ಯಶಸ್ಸನ್ನು ವತ್ಸರಾಜನ ಮಗನಾದ ನಾಗಭಟ್ಟನು ಸಹಿಸಲಿಲ್ಲ. ಅವನು ಕನೂಜಿನ ಮೇಲೆ ದಂಡೆತ್ತಿ ಹೋಗಿ ಚಕ್ರಾಯುಧನನ್ನು ಸೋಲಿಸಿ ಕನೂಜನ್ನು ವಶಪಡಿಸಿಕೊಂಡನು. ಚಕ್ರಾಯುಧನ ಸಹಾಯಕ್ಕೆ ಧಾವಿಸಿದ ಧರ್ಮಪಾಲನು ನಾಗಭಟ್ಟನಿಂದ ಸೋಲನ್ನನುಭವಿಸಿ ಪಲಾಯನ ಮಾಡಬೇಕಾಯಿತು. ಮೂರನೆಯ ಗೋವಿಂದನು ಉತ್ತರ ಭಾರತದ ಮೇಲೆ ದಾಳಿ ಮಾಡುವುದಕ್ಕೆ ಮುಂಚೆ ಇದ್ದಂತ ರಾಜಕೀಯ ಪರಿಸ್ಥಿತಿ ಇದಾಗಿತ್ತು.

ಮೂರನೆಯ ಗೋವಿಂದನು ಎಚ್ಚರಿಕೆಯಿಂದ ಉತ್ತರ ಭಾರತದ ದಂಡಯಾತ್ರೆಯನ್ನು ಯೋಜಿಸಿದನು. ದಕ್ಷಿಣ ಗುಜರಾತ್ ಮತ್ತು ಮಾಳವದ ಪ್ರಾಂತ್ಯಾಧಿಕಾರಿಯಾಗಿದ್ದ ಇಂದ್ರನಿಗೆ ಶತ್ರುಗಳು ಉತ್ತರದ ಗಡಿಗಳ ಮೇಲೆ ದಾಳಿ ಮಾಡದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಆಜ್ಞಾಪಿಸಿದ್ದನು. ಅನಂತರ ಒಂದು ಪ್ರಬಲ ಸೈನ್ಯದೊಂದಿಗೆ ಉತ್ತರ ಭಾರತದ ಮೇಲೆ ದಾಳಿ ಮಾಡಿದನು.

ಎರಡನೆಯ ನಾಗಭಟನು ಈ ದಾಳಿಯನ್ನು ಎದುರಿಸಲು ತನ್ನ ಸೈನ್ಯ ಸಮೇತ ಧಾವಿಸಿದನು. ಮೂರನೆಯ ಗೋವಿಂದನಿಗೂ ಹಾಗೂ ಎರಡನೆಯ ನಾಗಭಟನಿಗೂ ನಡೆದ ಯುದ್ಧದಲ್ಲಿ ಗೂರ್ಜರ ಪ್ರತೀಹಾರ ರಾಜನು ಸೋಲನ್ನನುಭವಿಸಿದನು. ಅನಂತರ ಚಕ್ರಾಯುಧನು ಕನೂಜಿನಿಂದ ಬಂದು ಗೋವಿಂದನಿಗೆ ಶರಣಾದನು. ಧರ್ಮಪಾಲನು ಕೂಡ ಗೋವಿಂದನ ಪರಾಕ್ರಮವನ್ನು ಅರಿತು ಶರಣಾಗತನಾದನು. ಗೋವಿಂದನು ಅವರಿಂದ ಕಪ್ಪ ಕಾಣಿಕೆಯನ್ನು ಪಡೆದನು. ಅನಂತರ ಗಂಗಾ ಯಮುನಾ ನದಿಗಳ ಬಯಲುಗಳನ್ನು ದಾಟಿ ಹಿಮಾಲಯ ಪರ್ವತದ ತಪ್ಪಲಿನವರೆಗೂ ದಂಡಯಾತ್ರೆಯನ್ನು ಕೈಗೊಂಡನು. ಅನಂತರ ಗಂಗಾ ನದಿಯ ತೀರದಲ್ಲಿ ಸ್ವಲ್ಪ ಕಾಲ ತಂಗಿದ್ದು, ತರುವಾಯ ತನ್ನ ರಾಜಧಾನಿಯತ್ತ ಪ್ರಯಾಣ ಬೆಳೆಸಿದನು.

"ಅವನ ತುರಗಗಳು ಹಿಮಾಲಯ ತಪ್ಪಲಿನ ಜರಿಗಳನ್ನು ಮಂಜುಗಡ್ಡೆಗಳ ಮೇಲೆ ಹರಿಯುತ್ತಿದ್ದ ನೀರನ್ನು ಕುಡಿದವೆಂದೂ ಅವನ ಗಜಗಳು ಗಂಗಾ ಪುಣ್ಯ ಜಲವನ್ನು ಪಾನಮಾಡಿದವೆಂದೂ ಮತ್ತು ಅವನ ರಣ ಕಹಳೆ ಗಿರಿ ಕಂದರಗಳಲ್ಲಿ ಮಾರ್ದನಿಯಿಂದ ಮೊಳಗಿತೆಂದೂ" ಅಮೋಘವರ್ಷನು ಹೊರಡಿಸಿದ ಸಂಜನ ತಾಮ್ರ ಪತ್ರಗಳು ಮೂರನೆಯ ಗೋವಿಂದನ ಉತ್ತರ ಭಾರತದ ದಂಡಯಾತ್ರೆಯ ಬಗ್ಗೆ ವಿವರಿಸುತ್ತವೆ. ಕ್ರಿ.ಶ. 800 ರ ವೇಳೆಗೆ ಈ ದಂಡಯಾತ್ರ ನಡೆದಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ಧ್ರುವನ ರೀತಿಯೇ ಈ ದೂರ ಪ್ರದೇಶಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಕೊಳ್ಳಲು ಪ್ರಯತ್ನಿಸಲಿಲ್ಲ.

ಉತ್ತರದ ದಂಡಯಾತ್ರೆಯಿಂದ ಹಿಂದಿರುಗಿ ಬರುತ್ತಿದ್ದ ಸಮಯದಲ್ಲಿ ವಿಂಧ್ಯ ಪರ್ವತದ ತಪ್ಪಲಿನಲ್ಲಿದ್ದ ಸರ್ವ ಅಥವ ಮಾರಸರ್ವನು ತನ್ನ ರಾಜಧಾನಿ ಶ್ರೀಭವನಕ್ಕೆ ಗೋವಿಂದನನ್ನು ಆಹ್ವಾನಿಸಿದನು. ಮಳೆಗಾಲವನ್ನು ಗೋವಿಂದನು ಇಲ್ಲಿ ಕಳೆದನು. ಇಲ್ಲಿ ನೆಲೆಸಿದ್ದ ಸಮಯದಲ್ಲಿಯೇ ಅವನಿಗೆ ಪುತ್ರೋತ್ಸವವಾಯಿತು. ಈ ಮಗುವೇ ಸರ್ವ (ಅಮೋಘವರ್ಷ ನೃಪತುಂಗ).

### *15.5.4 ಮೂರನೆಯ ಗೋವಿಂದನ ವಿರುದ್ಧ ರಚಿಸಿದ ದಕ್ಷಿಣ ಭಾರತದ ರಾಜರುಗಳ ಒಕ್ಕೂಟ*

ಉತ್ತರ ಭಾರತದ ಮೇಲೆ ದಂಡೆತ್ತಿ ಹೋಗಿದ್ದ ಸಮಯದಲ್ಲಿ ದಕ್ಷಿಣ ಭಾರತದ ಹಲವು ರಾಜ ಮನೆತನಗಳು ಒಕ್ಕೂಟ ರಚಿಸಿಕೊಂಡು ರಾಷ್ಟ್ರಕೂಟರ ಪ್ರಭುತ್ವವನ್ನು ಕೊನೆಗೊಳಿಸಲು ಸಂಚು ರೂಪಿಸಿದ್ದರು. ಈ ಸಂಚನ್ನು ತಿಳಿದ ಮೂರನೆಯ ಗೋವಿಂದನು ರಾಜಧಾನಿಗೆ ಹಿಂದಿರುಗಿದ ತಕ್ಷಣವೇ ಈ ಒಕ್ಕೂಟದ ವಿರುದ್ಧ ಯುದ್ಧ ಸಾರಿದನು. ಶಾಸನಗಳು ಗಂಗವಾಡಿ, ಕೇರಳ, ಪಾಂಡ್ಯ, ಚೋಳ ಮತ್ತು ಪಲ್ಲವ ಅರಸರುಗಳು ಈ ಒಕ್ಕೂಟವನ್ನು ರಚಿಸಿದ್ದರೆಂದು ವಿವರಿಸುತ್ತವೆ. ಆದರೆ ಹೆಚ್ಚಿನ ವಿವರಣೆ ನೀಡಲು ಸಾಧ್ಯವಿಲ್ಲ. ಈ ಒಕ್ಕೂಟವನ್ನು ಮೂರನೆಯ ಗೋವಿಂದನು ಛಿದ್ರಗೊಳಿಸಿದನೆಂದು ತಿಳಿಸುತ್ತವೆ. ಬಹುಶಃ ಈ ಒಕ್ಕೂಟದ ಪ್ರಮುಖ ವ್ಯಕ್ತಿ ಕಂಚಿಯ ಅರಸ ದಂಡಿಗ ಅಥವಾ ದಂತಿವರ್ಮನ್ ಆಗಿರಬಹುದೆಂದು ಶಾಸನಗಳ ಆಧಾರದಿಂದ ತೀರ್ಮಾನಿಸಬಹುದು. ಪಲ್ಲವ ಅರಸನನ್ನು ಸೋಲಿಸಿ ಕಂಚಿಯನ್ನು ಗೆದ್ದುಕೊಂಡನು ಎಂಬುದಾಗಿ ಶಾಸನಗಳು ವಿವರಿಸುತ್ತವೆ. ಅನಂತರ ಚೋಳ ಮತ್ತು ಪಾಂಡ್ಯರ ರಾಜ್ಯಗಳ ಮೇಲೂ ಧಾಳಿ ಮಾಡಿದನೆಂದು ತಿಳಿದು ಬರುತ್ತದೆ. ಈ ದಂಡಯಾತ್ರೆಯನ್ನು ಕೈಗೊಳ್ಳುವ ಸಮಯದಲ್ಲಿ ಕ್ರಿ.ಶ. 803 ರಲ್ಲಿ ಅಲಂಪುರದಲ್ಲಿ ಮತ್ತು ಕ್ರಿ.ಶ. 804 ರಲ್ಲಿ ತುಂಗಭದ್ರ ನದಿಯ ದಂಡೆಯ ಮೇಲಿದ್ದ ರಾಮೇಶ್ವರ ತೀರ್ಥದಲ್ಲಿ ಬೀಡು ಬಿಟ್ಟಿದ್ದನೆಂದು ತಿಳಿದು ಬರುತ್ತದೆ. ಕಂಚಿಯಲ್ಲಿ ಗೋವಿಂದನು ತಂಗಿದ್ದಾಗ ಸಿಂಹಳ ರಾಜನು ಗೋವಿಂದನ ಮನ್ನಣೆಯನ್ನು ಪಡೆಯಲು ರಾಜದೂತರ ಮೂಲಕ ಅವನಿಗೆ ಅನೇಕ ಕಾಣಿಕೆಗಳನ್ನು ಕಳುಹಿಸಿದನು. ಅವನು ಕಳುಹಿಸಿದ ಅಮೂಲ್ಯ ಕಾಣಿಕೆಯಲ್ಲಿ ಸಿಂಹಳ ರಾಜನ ಮತ್ತು

ಮಂತ್ರಿಯ ಪ್ರತಿಮೆಗಳು ಇದ್ದವು. ಗೋವಿಂದನು ಈ ಪ್ರತಿಮೆಗಳಲ್ಲಿ ಒಂದನ್ನು ಕಂಚಿಯ ಈಶ್ವರ ದೇವಾಲಯದಲ್ಲಿ ತನ್ನ ದಿಗ್ವಿಜಯದ ಕುರುಹಾಗಿ ಸ್ಥಾಪಿಸಿದನು. ಮತ್ತೊಂದನ್ನು ತನ್ನ ರಾಜಧಾನಿಗೆ ತೆಗೆದುಕೊಂಡು ಬಂದನು. ಈ ದಂಡಯಾತ್ರೆಯ ನಂತರ ತನ್ನ ಕೊನೆಗಾಲದವರೆಗೂ ಶಾಂತಿಯಿಂದ ಆಳ್ವಿಕೆ ನಡೆಸಿದನು.

### 15.5.5 ಮೂರನೆಯ ಗೋವಿಂದನ ಆಳ್ವಿಕೆಯ ಮೌಲ್ಯಮಾಪನ

ಯುದ್ಧಗಳಲ್ಲಿ ಪ್ರಚಂಡ ವಿಜಯಿಯಾಗಿದ್ದಂತೆ ಮೂರನೇ ಗೋವಿಂದನು ರಾಜ್ಯ ತಂತ್ರ ಪರಿಣತನೂ ದೂರದೃಷ್ಟಿಯುಳ್ಳವನೂ ಆಗಿದ್ದನು. ತಾನುಗೆದ್ದ ರಾಜ್ಯಗಳಲ್ಲಿ ಯಾವೊಂದು ಮನೆತನವನ್ನು ಅಂತ್ಯಗೊಳಿಸಲಿಲ್ಲ. ತನಗೆ ವಿರುದ್ಧವಾಗಿ ಸಿಂಹಾಸನಕ್ಕಾಗಿ ದಂಗೆಯೆದ್ದಿದ ತನ್ನ ಸಹೋದರ ಸ್ತಂಭನನ್ನು ಉದಾರವಾಗಿ ಮನ್ನಿಸಿ ಗಂಗ ರಾಜ್ಯದ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ್ದನು. ಸ್ತಂಭನ ಮರಣಾನಂತರ ಸೈಗೊಟ್ಟ ಶಿವಮಾರನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿ ಪುನಃ ಗಂಗ ರಾಜ್ಯದ ರಾಜನನ್ನಾಗಿ ಮಾಡಿದನು. ಧ್ರುವನ ಕಾಲದಲ್ಲಿ ಇಂದ್ರನು ದಕ್ಷಿಣ ಗುಜರಾತ್ ಮತ್ತು ಮಾಳವದ ಪ್ರಾಂತ್ಯಾಧಿಕಾರಿಯಾಗಿ ನೇಮಕಗೊಂಡಿದ್ದನು. ಇಂದ್ರನ ಮರಣಾನಂತರ ಅವನ ಮಗ ಕರ್ಕಸುವರ್ಣವರ್ಷನನ್ನು ಗುಜರಾತಿನ ರಾಜ್ಯಪಾಲನನ್ನಾಗಿ ನೇಮಿಸಿದನು. ಉತ್ತರಾಧಿಕಾರಿಯಾಗಲಿದ್ದ ಅಮೋಘವರ್ಷನು ಇನ್ನೂ ಬಾಲಕನಾಗಿದ್ದುದರಿಂದ ಗೋವಿಂದನು ಕರ್ಕ ಸುವರ್ಣವರ್ಷನನ್ನು ತನ್ನ ಕುಮಾರನು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಅವನಿಗೆ ಸಹಾಯ ಮಾಡಲು ರಾಜಪ್ರತಿನಿಧಿಯನ್ನಾಗಿ ನೇಮಕ ಮಾಡಿದನು. ಈ ವ್ಯವಸ್ಥೆಯು ಅಮೋಘವರ್ಷನಿಗೆ ಬಹಳ ಅನುಕೂಲವಾಯಿತು. ಗೋವಿಂದನು ಕ್ರಿ.ಶ. 814 ರಲ್ಲಿ ಮರಣ ಹೊಂದಿದನು.

ಮೂರನೆಯ ಗೋವಿಂದನು ಪರಾಕ್ರಮಿಯಾಗಿದ್ದಂತೆ ಕವಿಗಳಿಗೂ ಮತ್ತು ವಿದ್ವಾಂಸರಿಗೂ ಪ್ರೋತ್ಸಾಹ ನೀಡಿದನು. 'ಲಿಂಗಾನುಶಾಸನ' ಗ್ರಂಥದ ಕರ್ತೃ ವಾಮನನು ಗೋವಿಂದನ ಆಸ್ಥಾನವನ್ನು 'ಜಗತ್ತುಂಗಸಭ' ಎಂಬುದಾಗಿ ಸಂಬೋಧಿಸಿರುವನು. 'ಅಪಭ್ರಂಶ ಮಹಾಪುರಾಣ' ದ ಕರ್ತೃ ಪುಷ್ಪದಂತನು ತನ್ನ ಗ್ರಂಥವನ್ನು ರಾಜಧಾನಿ ಮಾನ್ಯಖೇಟದಲ್ಲಿ ಪೂರ್ಣಗೊಳಿಸಿದನು. ಮಹಾತಾರ್ಕಿಕ ವಿದ್ಯಾನಂದಿನ್ ಪುತ್ರ ಕೇಸರಿ ಮಾನ್ಯಖೇಟದಲ್ಲಿ ವಾಸಿಸುತ್ತಿದ್ದನೆಂದು ತಿಳಿದು ಬರುತ್ತದೆ. ಒಂದನೇ ಜಿನಸೇನ, ಲೋಕದೇವ, ಮೊದಲಾದ ಇತರ ಜೈನ ವಿದ್ವಾಂಸರು ಮೂರನೆ ಗೋವಿಂದನ ಸಮಕಾಲೀನರಾಗಿದ್ದರು. ಗೋವಿಂದನು ವೈದಿಕ ಮತಾವಲಂಬಿಯಾದರೂ ಸಹ ಜೈನ ಧರ್ಮೀಯರಿಗೆ ವಿಶೇಷ ಪ್ರೋತ್ಸಾಹ ನೀಡಿದನು.

ಮೂರನೆಯ ಗೋವಿಂದನು ಶ್ರೀ ವಲ್ಲಭ, ನರೇಂದ್ರ ಜಗತ್ತುಂಗ, ಪ್ರಭೂತವರ್ಷ, ಕೀರ್ತಿನಾರಾಯಣ ಎಂಬ ಇನ್ನು ಅನೇಕ ಬಿರುದುಗಳನ್ನು ಹೊಂದಿದ್ದನು. "ಮೂರನೆಯ ಗೋವಿಂದನು ರಾಷ್ಟ್ರಕೂಟ ಸಾಮ್ರಾಟರಲ್ಲೆಲ್ಲ ಅತ್ಯಂತ ಸಮರ್ಥನಾಗಿದ್ದು ಅವನ ಸೈನ್ಯ ಕನೂಜ್‌ನಿಂದ ಕನ್ಯಾಕುಮಾರಿಯವರೆಗೆ ಮತ್ತು ಬ್ರೋಚ್‌ನಿಂದ ಬನಾರಸ್‌ವರೆಗೆ ಇದ್ದ ಎಲ್ಲಾ ಪ್ರದೇಶಗಳನ್ನು ಗೆದ್ದುಕೊಂಡಿತು. ಸಿಂಹಳದ ರಾಜನು ಕೂಡ ಭಯ ಪಟ್ಟು ಶರಣಾದನು. ಇನ್ನೆಂದೂ ರಾಷ್ಟ್ರಕೂಟ ಸಾಮ್ರಾಜ್ಯದ ಪ್ರತಿಷ್ಠೆ ಇಂತಹ ಉಚ್ಛ್ರಾಯ ಸ್ಥಿತಿಯನ್ನು ತಲುಪಲಿಲ್ಲ" ಎಂಬುದಾಗಿ ಆಲ್ತೇಕರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## 15.6 ಒಂದನೆಯ ಅಮೋಘವರ್ಷ (ಕ್ರಿ.ಶ. 814 - 878)

ಇತಿಹಾಸದಲ್ಲಿ ಅಮೋಘವರ್ಷ ನೃಪತುಂಗನೆಂದು ಪ್ರಸಿದ್ಧನಾಗಿರುವ ಮೂರನೆಯ ಗೋವಿಂದನ ಮಗನಾದ ಸರ್ವನು ಕ್ರಿ.ಶ. 814 ರಲ್ಲಿ ಪಟ್ಟಾಬಿಷಕ್ತನಾದನು. ಅವನು ಸಾಮ್ರಾಜ್ಯದ ಅಧಿಕಾರ ಸೂತ್ರ ಹಿಡಿದಾಗ ಕೇವಲ ಹದಿನಾಲ್ಕು ವರ್ಷಗಳು. ಅವನ ಸಹಾಯಕ್ಕೆ ಕರ್ಕ ಸುವರ್ಣ ವರ್ಷನು ರಾಜಪ್ರತಿನಿಧಿಯಾಗಿ ನೇಮಕಗೊಂಡಿದ್ದನು. ಅಮೋಘವರ್ಷನು 64 ವರ್ಷಗಳ ಕಾಲ ದೀರ್ಘ ಆಳ್ವಿಕೆ ನಡೆಸಿದನು. ಆದರೆ ಅವನ ಆಳ್ವಿಕೆಯ ಪೂರ್ವಾರ್ಧ ಅನೇಕ ಸಮಸ್ಯೆಗಳಿಂದ ಕೂಡಿತ್ತು. ಅವನು ತನ್ನ ಆಳ್ವಿಕೆಯ ಉತ್ತರಾರ್ಧದಲ್ಲಿ ಮಾತ್ರ ಸಾಮ್ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಯಿತು. ಅಮೋಘವರ್ಷನು ಶಾಂತಿ ಪ್ರಿಯ ಚಕ್ರವರ್ತಿಯೆಂದೇ ಪ್ರಸಿದ್ಧನಾಗಿದ್ದಾನೆ. ಧರ್ಮ ಮತ್ತು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಅಮೋಘವರ್ಷನ ಕಾಲ ಪ್ರಮುಖವೆಂದೆನಿಸಿಕೊಂಡಿದೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಒಂದು ಪ್ರಮುಖ ಘಟ್ಟವಾಗಿದೆ.

### 15.6.1 ವೆಂಗಿಯ ಚಾಲುಕ್ಯರ ವಿರುದ್ಧ ನಡೆದ ಹೋರಾಟ

ಆದರೆ ಅಮೋಘವರ್ಷನು ಶಾಂತಿಯುತವಾಗಿ ಆಡಳಿತವನ್ನು ನಡೆಸುವಂತಹ ಅದೃಷ್ಟ ಪಡೆದಿರಲಿಲ್ಲ. ಬಾಲಕ ಚಕ್ರವರ್ತಿ ರಾಷ್ಟ್ರಕೂಟ ಸಿಂಹಾಸನದಲ್ಲಿರುವುದನ್ನು ಅರಿತ ಅನೇಕ ಶತ್ರುಗಳು ಅವನ ವಿರುದ್ಧ ದಂಗೆ ಏಳಲು ನಿರ್ಧರಿಸಿದರು. ಸಾಮ್ರಾಜ್ಯದ ಒಳಗಡೆ ಹಾಗೂ ಸಾಮ್ರಾಜ್ಯದ ಹೊರಗಡೆಯಿಂದಲೂ ಶತ್ರುಗಳು ಅಮೋಘವರ್ಷನನ್ನು ಪದಚ್ಯುತಗೊಳಿಸಲು ಸಂಚು ಹೂಡಿದರು. ಸಂಜನ ತಾಮ್ರ ಪತ್ರಗಳು ಶತ್ರುಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ.

ಈ ಶತ್ರುಗಳ ಪೈಕಿ ಮೊಟ್ಟ ಮೆದಲನೆಯದಾಗಿ ವೆಂಗಿಯ ಅರಸನಿಂದ ಅಪಾಯ ಬಂದೊದಗಿತು. ವೆಂಗಿಯ ಎರಡನೆಯ ವಿಜಯಾದಿತ್ಯನು ಮೂರನೆಯ ಗೋವಿಂದನ ಕಾಲದಲ್ಲಿ ನಾನಾ ರೀತಿಯ ತೊಂದರೆಗೊಳಗಾಗಿದ್ದನು. ಈಗ ಪುನಃ ವೆಂಗಿಯಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿ ರಾಷ್ಟ್ರಕೂಟರ ವಿರುದ್ಧ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದನು. ಅವನು ರಾಷ್ಟ್ರಕೂಟ ಸಾಮ್ರಾಜ್ಯವನ್ನು ಮುತ್ತಿದನು. ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸೇರಿದ್ದ ಅನೇಕ ಪ್ರದೇಶಗಳನ್ನು ಗೆದ್ದುಕೊಂಡನು. ಅನಂತರ ಆತನ ಸೈನ್ಯ ರಾಜಧಾನಿಯವರೆಗೂ ದಂಡೆತ್ತಿ ಹೋಗಿ ಅದಕ್ಕೆ ಮುತ್ತಿಗೆ ಹಾಕಿತು. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಕರ್ಕಸುವರ್ಣಾವರ್ಷನು ವೀರಾವೇಶದಿಂದ ಹೋರಾಡಿ ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸಿ ಅಮೋಘವರ್ಷನ ಅಧಿಕಾರ ಮುಂದುವರಿಯುವಂತೆ ಮಾಡಿದನು. ಅನಂತರ ಎರಡನೆಯ ವಿಜಯಾದಿತ್ಯನ ಸೈನ್ಯವನ್ನು ರಾಷ್ಟ್ರಕೂಟ ಪ್ರದೇಶಗಳಿಂದ ಹೊಡೆದೋಡಿಸಿದನು. ಕ್ರಿ.ಶ. 820 ರ ವೇಳೆಗೆ ಕರ್ಕಸುವರ್ಣಾವರ್ಷನು ಶತ್ರುಗಳನ್ನು ಸದೆಬಡಿದು, ಗುಜರಾತಿಗೆ ಹಿಂದಿರುಗಿದನು. ಅಮೋಘವರ್ಷನೇ ಸಾಮ್ರಾಜ್ಯದ ಆಡಳಿತವನ್ನು ಸ್ವತಃ ನಿರ್ವಹಿಸಲು ಪ್ರಾರಂಭಿಸಿದನು.

ಅಮೋಘವರ್ಷನು ವೆಂಗಿಯ ರಾಜ ಎರಡನೆಯ ವಿಜಯಾದಿತ್ಯನ ವಿರುದ್ಧ ಯುದ್ಧವನ್ನು ಮುಂದುವರಿಸಿದನು. ಸುಮಾರು ಹನ್ನೆರಡು ವರ್ಷಗಳವರೆಗೆ ಯುದ್ಧ ಮುಂದುವರಿಯಿತು. ಅಂತಿಮವಾಗಿ ವಿಂಗವಳ್ಳಿ ಎಂಬ ಸ್ಥಳದಲ್ಲಿ ನಡೆದ ನಿರ್ಣಾಯಕ ಯುದ್ಧದಲ್ಲಿ ಅಮೋಘವರ್ಷನು ವಿಜಯಾದಿತ್ಯನನ್ನು ಸೋಲಿಸಿದನು. ಈ ಯುದ್ಧದಲ್ಲಿ ವಿಜಯಾದಿತ್ಯನು ಅಮೋಘವರ್ಷನಿಂದ ಕೊಲ್ಲಲ್ಪಟ್ಟನು. ಅನಂತರ ಅವನ ಮಗ ಗುಣಗ ವಿಜಯಾದಿತ್ಯನು ಅಧಿಕಾರಕ್ಕೆ ಬಂದನು. ಅಮೋಘವರ್ಷನು ವೆಂಗಿಯನ್ನು ಆಕ್ರಮಿಸಿಕೊಂಡನು.

### 15.6.2 ತಲಕಾಡಿನ ಗಂಗರು ಮತ್ತು ಕಂಚಿಯ ಪಲ್ಲವರೊಡನೆ ಸಂಬಂಧ

ಗಂಗರ ವಿರುದ್ಧವು ಕೂಡ ಅಮೋಘವರ್ಷನು ಅನೇಕ ವರ್ಷಗಳವರೆಗೆ ಕಾದಾಡಬೇಕಾಯಿತು. ತಲಕಾಡಿನ ಗಂಗರು ಅಮೋಘವರ್ಷನು ಅಧಿಕಾರಕ್ಕೆ ಬಂದ ಮೇಲೆ ಸ್ವತಂತ್ರರಾಗಲು ಹೋರಾಟ ಪ್ರಾರಂಭಿಸಿದರು. ಮೂರನೆಯ ಗೋವಿಂದನು ತನ್ನ ಕೊನೆಯ ವರ್ಷಗಳಲ್ಲಿ ಎರಡನೆಯ ಶಿವಮಾರನನ್ನು ಬಿಡುಗಡೆ ಮಾಡಿ ಗಂಗವಾಡಿಯ ರಾಜನನ್ನಾಗಿ ನೇಮಿಸಿದ್ದನು. ಅಮೋಘವರ್ಷ ಅಧಿಕಾರಕ್ಕೆ ಕೇವಲ ಒಂದು ಅಥವಾ ಎರಡು ವರ್ಷಗಳ ಕಾಲ ಮಾತ್ರ ಅವನು ಬದುಕಿದ್ದನು. ಅವನು ಅಮೋಘವರ್ಷನ ವಿರುದ್ಧ ದಂಗೆ ಏಳಲು ಪ್ರಯತ್ನ ನಡೆಸಲಿಲ್ಲ. ಅನಂತರ ಅವನ ಸಹೋದರ ವಿಜಯಾದಿತ್ಯನು ಕೇವಲ ಕೆಲವೇ ತಿಂಗಳುಗಳ ಕಾಲ ಅಧಿಕಾರದಲ್ಲಿದ್ದನು. ಅನಂತರ ಕ್ರಿ.ಶ. 818 ರಲ್ಲಿ ಒಂದನೆಯ ರಾಜಮಲ್ಲನು ಗಂಗವಾಡಿಯ ಅರಸನಾದನು. ಅವನು ಅಮೋಘ ವರ್ಷನ ವಿರುದ್ಧ ದಂಗೆ ಎದ್ದನು. ಗಂಗವಾಡಿಯನ್ನು ರಾಷ್ಟ್ರಕೂಟರಿಂದ ಬಿಡುಗಡೆಮಾಡಿದನು. ಆದರೆ ಇನ್ನೂ ಕೆಲವು ಭಾಗಗಳು ರಾಷ್ಟ್ರಕೂಟರ ಹಿಡಿತದಲ್ಲಿದ್ದವು. ಅದಕ್ಕೋಸ್ಕರ ಸತತವಾಗಿ ಅಮೋಘವರ್ಷ ಮತ್ತು ಗಂಗರ ನಡುವೆ ಯುದ್ಧಗಳು ಮುಂದುವರಿದವು. ಆದರೆ ಬಂಕೇಶನು ಬನವಾಸಿ 12,000 ಪ್ರಾಂತ್ಯದ ಗವರ್ನರ್ ಆಗಿರುವವರೆಗೂ ಒಂದನೆಯ ರಾಚಮಲ್ಲನ ಆಸೆ ಈಡೇರಲಿಲ್ಲ. ಬಂಕೇಶ ಮತ್ತು ರಾಚಮಲ್ಲನ ನಡುವೆ ಅನೇಕ ಭೀಕರ ಕದನಗಳು ನಡೆದವು. ಆದರೂ ಕೂಡ ರಾಚಮಲ್ಲನು ರಾಷ್ಟ್ರಕೂಟರ ಹಿಡಿತದಲ್ಲಿದ್ದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಯಶಸ್ವಿಯಾಗಲಿಲ್ಲ.

ಒಂದನೆಯ ರಾಚಮಲ್ಲನ ನಂತರ ಒಂದನೆಯ ನೀತಿಮಾರ್ಗನು ಗಂಗವಾಡಿಯ ರಾಜನಾಗಿ ಕ್ರಿ.ಶ. 853 ರಿಂದ ಕ್ರಿ.ಶ. 869 ರವರೆಗೆ ಆಳ್ವಿಕೆ ನಡೆಸಿದನು. ಅವನು ಕೂಡ ರಾಷ್ಟ್ರಕೂಟರ ವಿರುದ್ಧ ಯುದ್ಧ ಮುಂದುವರಿಸಿದನು. ಅಮೋಘವರ್ಷನು ಗಂಗರನ್ನು ಸದೆಬಡಿಯಬೇಕೆಂದು ನಿರ್ಧರಿಸಿ ಒಂದು ದೊಡ್ಡ ಸೈನ್ಯದೊಡನೆ ಹೊರಟನು. ಪ್ರಾರಂಭದಲ್ಲಿ ಅಮೋಘವರ್ಷನು ಯಶಸ್ವಿಯಾದನು. ಗಂಗವಾಡಿಯ ಗಡಿಯನ್ನು ದಾಟಿ ಅನೇಕ ಪ್ರದೇಶಗಳ ಮೇಲೆ ದಾಳಿ ಮಾಡಿದನು. ಆದರೆ ಅಂತಿಮವಾಗಿ ಕೋಲಾರ ಜಿಲ್ಲೆಯ ರಾಜರಮಡುವಿನಲ್ಲಿ ಅಮೋಘವರ್ಷನು ನೀತಿಮಾರ್ಗನಿಂದ ಕ್ರಿ.ಶ. 868 ರಲ್ಲಿ ಸೋಲನ್ನನುಭವಿಸಿದನು. ಈ ಯುದ್ಧದ ನಂತರ

ಅಮೋಘವರ್ಷನು ಗಂಗರೊಡನೆ ಶಾಂತಿ ಒಪ್ಪಂದ ಮಾಡಿಕೊಂಡನು. ತನ್ನ ಮಗಳು ಚಂದ್ರೋಬಲಬ್ಬೆಯನ್ನು ನೀತಿ ಮಾರ್ಗನ ಮಗನಾದ ಒಂದನೆಯ ಭೂತುಗನಿಗೆ ವಿವಾಹ ಮಾಡಿಕೊಟ್ಟನು. ಗಂಗರ ಸ್ವಾತಂತ್ರ್ಯಕ್ಕೆ ಮನ್ನಣೆ ನೀಡಿದನು. ಈ ಯುದ್ಧವು ರಾಷ್ಟ್ರಕೂಟರು ಮತ್ತು ತಲಕಾಡಿನ ಗಂಗರ ಸಂಬಂಧಗಳ ವಿಷಯದಲ್ಲಿ ಒಂದು ಹೊಸ ತಿರುವನ್ನು ನೀಡಿತು. ಈ ಎರಡು ರಾಜಮನೆತನಗಳ ನಡುವೆ ಇದ್ದ ವೈರತ್ವ ಕೊನೆಗೊಂಡು ಮಿತ್ರತ್ವದ ಯುಗ ಪ್ರಾರಂಭವಾಯಿತು.

ಅಮೋಘವರ್ಷನು ಕಂಚಿಯ ಪಲ್ಲವರೊಡನೆಯು ಕೂಡ ಅನೇಕ ವರ್ಷಗಳಿಂದ ಇದ್ದ ವೈರತ್ವವನ್ನು ಕೊನೆಗೊಳಿಸಿ ಶಾಂತಿ ಒಪ್ಪಂದವನ್ನು ಮಾಡಿಕೊಂಡನು. ಮೂರನೆಯ ನಂದಿ ವರ್ಮನಿಗೆ ಅಮೋಘವರ್ಷನು ತನ್ನ ಮತ್ತೊಬ್ಬ ಮಗಳು ಸಂಖಳನ್ನು ವಿವಾಹ ಮಾಡಿಕೊಟ್ಟನು.

### *15.6.3 ಗುಜರಾತಿನ ರಾಷ್ಟ್ರಕೂಟರ ಹಾಗೂ ಎರಡನೆಯ ಕೃಷ್ಣನ ದಂಗೆಗಳು*

ಗುಜರಾತಿನ ಆಳ್ವಿಕೆ ನಡೆಸುತ್ತಿದ್ದ ಸೋದರ ಸಂಬಂಧಿಗಳಾದ ರಾಷ್ಟ್ರಕೂಟರು ಕೂಡ ಅಮೋಘವರ್ಷನ ಕಾಲದಲ್ಲಿ ದಂಗೆ ಎದ್ದರು. ಕರ್ಕಸುವರ್ಣಾವರ್ಷನು ಗುಜರಾತಿನ ಪ್ರಾಂತ್ಯಾಧಿಕಾರಿಯಾಗಿರುವವರೆಗೆ ಎರಡು ಮನೆತನಗಳ ನಡುವೆ ಯಾವುದೇ ರೀತಿಯಾದ ವೈಮನಸ್ಸಿಗೆ ಅವಕಾಶವಿರಲಿಲ್ಲ. ಕರ್ಕನು ಸುಮಾರು ಕ್ರಿ.ಶ. 830 ರಲ್ಲಿ ಮರಣ ಹೊಂದಿದನು. ಅನಂತರ ಒಂದನೆಯ ಧೃವ (ಧರಾವರ್ಷ) ನು ಗುಜರಾತಿನ ಪ್ರಾಂತ್ಯಾಧಿಕಾರಿಯಾದನು. ಧರಾವರ್ಷನ ಶಾಸನಗಳು ತನ್ನ ಪ್ರಾಂತ್ಯವನ್ನು ವಲ್ಲಭ ಎಂಬ ಪ್ರಬಲ ಅರಸ ಧಾಳಿ ಮಾಡಿದನೆಂದು ವಿವರಿಸುತ್ತವೆ. 'ವಲ್ಲಭ' ಎಂಬುದು ರಾಷ್ಟ್ರಕೂಟ ಅರಸರ ಬಿರುದು. ಈ ಬಿರುದು ಅಮೋಘ ವರ್ಷನಿಗೂ ಅನ್ವಯಿಸುವುದರಿಂದ, ಬಹುಶಃ ಅವನೇ ದಾಳಿ ಮಾಡಿರಬಹುದೆಂದು ಇತಿಹಾಸಕಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಧೃವನು ದಾಳಿಕಾರನ ವಿರುದ್ಧ ಹೋರಾಟ ನಡೆಸುವಾಗ ಮರಣ ಹೊಂದಿದನು. ಅನಂತರ ಅವನ ಮಗ ಅಕಲಾವರ್ಷ ಕೃಷ್ಣನು ಹೋರಾಟವನ್ನು ಮುಂದುವರಿಸಿದನು. ಆದರೆ ಅವನು ಬಹಳ ಕಾಲ ಬದುಕಿರಲಿಲ್ಲ. ಅವನ ಮಗ ಎರಡನೆಯ ಧೃವನು ಅಧಿಕಾರಕ್ಕೆ ಬಂದನು. ಅವನು ಕೂಡ ವಲ್ಲಭನ ವಿರುದ್ಧ ಯುದ್ಧ ಮುಂದುವರಿಸಿದನು. ಆದರೆ ಇದೇ ಸಮಯದಲ್ಲಿ ಉತ್ತರದಲ್ಲಿ ಗೂರ್ಜರ ಪ್ರತಿಹಾರ ಅರಸ ಒಂದನೆಯ ಮಿಹಿರ ಭೋಜನು ಗುಜರಾತಿನ ಮೇಲೆ ಆಕ್ರಮಣ ನಡೆಸಿದನು. ಎರಡನೆಯ ಧೃವನು ಏಕಕಾಲಕ್ಕೆ ಇಬ್ಬರ ವಿರುದ್ಧ ಹೋರಾಟ ನಡೆಸುವಷ್ಟು ಸಮರ್ಥನಾಗಿರಲಿಲ್ಲ. ಮಿಹಿರ ಭೋಜನ ವಿರುದ್ಧ ಹೋರಾಟ ಮುಂದುವರಿಸಲು ಅಮೋಘವರ್ಷನ ಸಹಾಯ ಬೇಕಾಗಿತ್ತು. ಅಂತಿಮವಾಗಿ ಎರಡನೆಯ ಧೃವನು ಅಮೋಘವರ್ಷನಿಗೆ ಶರಣಾದನು. ಈ ರೀತಿಯಾಗಿ ಎರಡು ಮನೆತನಗಳ ನಡುವಣದ ಕಲಹ ಕ್ರಿ.ಶ. 867 ರ ವೇಳೆಗೆ ಕೊನೆಗೊಂಡಿತು.

ಅಮೋಘವರ್ಷನ ಕಾಲದಲ್ಲಿ ನಡೆದ ಮತ್ತೊಂದು ಪ್ರಮುಖ ಘಟನೆಯೆಂದರೆ ಅವನ ಮಗ ಎರಡನೆಯ ಕೃಷ್ಣನ ದಂಗೆ. ಈ ದಂಗೆಗೆ ಕಾರಣವೇನೆಂಬುದು ತಿಳಿದು ಬರುವುದಿಲ್ಲ. ಅಂತಿಮವಾಗಿ ಬಂಕೇಶನು ಕೃಷ್ಣನ ದಂಗೆಯನ್ನಡಗಿಸಿ ತಂದೆ ಮತ್ತು ಮಗನ ನಡುವೆ ಇದ್ದಂತಹ ವಿರಸವನ್ನು ಕೊನೆಗೊಳಿಸುವುದರಲ್ಲಿ ಯಶಸ್ವಿಯಾದನು.

ಅಮೋಘವರ್ಷನು 64 ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಯುದ್ಧ ರಂಗದಲ್ಲಿ ಅವನ ತಂದೆ ಅಥವಾ ತಾತನಷ್ಟು ಖ್ಯಾತಿಗಳಿಸಲಿಲ್ಲ. ಅವನು ವೆಂಗಿಯ ಅರಸರೊಡನೆ ನಡೆದ ಯುದ್ಧದಲ್ಲಿ ಮಾತ್ರ ವಿಜಯ ಸಾಧಿಸುತ್ತಾನೆ. ಆದರೆ ವಿಶಾಲ ಸಾಮ್ರಾಜ್ಯವನ್ನು ರಕ್ಷಿಸುವುದಕ್ಕೆ ಸತತ ಹೋರಾಟ ನಡೆಸುತ್ತಾನೆ. ಯುದ್ಧ ರಂಗದಲ್ಲಿ ಖ್ಯಾತಿಗಳಿಸದೆ ಇದ್ದರೂ. ಸಾಂಸ್ಕೃತಿಕ ಬೆಳವಣಿಗೆಯ ದೃಷ್ಟಿಯಿಂದ ಅವನ ಕಾಲ ಒಂದು ಪರ್ವಕಾಲವೆಂದು ಹೇಳಬಹುದು.

### *15.6.4 ಸಾಹಿತ್ಯ ಮತ್ತು ಧರ್ಮಕ್ಕೆ ಅಮೋಘವರ್ಷನ ಕೊಡುಗೆ*

ಅಮೋಘವರ್ಷನು ವಿಕ್ರಮಾದಿತ್ಯನನ್ನು ಮೀರಿಸುವಂತಹ ಪ್ರೋತ್ಸಾಹವನ್ನು ಸಾಹಿತ್ಯಕ್ಕೆ ನೀಡಿದನು. ಅವನು ಸ್ವತಃ ವಿದ್ವಾಂಸನಾಗಿದ್ದು ಕವಿರಾಜಮಾರ್ಗವನ್ನು ರಚಿಸಿದನೆಂದು ಹೇಳಲಾಗಿದೆ. ಇದು ಕನ್ನಡದಲ್ಲಿ ದೊರಕತಕ್ಕ ಮೊಟ್ಟ ಮೊದಲನೆಯ ಮೇರು ಕೃತಿ. ಸಂಸ್ಕೃತದಲ್ಲಿ ರತ್ನಮಾಲಿಕ ಅಥವಾ ಪ್ರಶ್ನೋತ್ತರ - ರತ್ನಮಾಲಿಕ ವನ್ನು ರಚಿಸಿದನು. ಆದಿಪುರಾಣ, ಜಯಧವಳ, ವೀರಧವಳ ಮತ್ತು ಪಾರ್ಶ್ವಾಭ್ಯುದಯ ಗ್ರಂಥಗಳನ್ನು ರಚಿಸಿದ ಎರಡನೆಯ ಜಿನಸೇನಾಚಾರ್ಯ, ಗಣಿತ ಸಾರಸಂಗ್ರಹವನ್ನು ರಚಿಸಿದ ಮಹವೀರಾಚಾರ್ಯ, ಅಮೋಘವೃತ್ತಿಯನ್ನು ರಚಿಸಿದ ಸಾಕತಯನ ಮೊದಲಾದ ವಿದ್ವಾಂಸರುಗಳು ಅಮೋಘವರ್ಷನ ಆಸ್ಥಾನವನ್ನು ಅಲಂಕರಿಸಿದ್ದರು.

ಅಮೋಘವರ್ಷನ ಧರ್ಮ ಸಮನ್ವಯ ನೀತಿಯು ಕೂಡ ಎಲ್ಲರ ಮೆಚ್ಚುಗೆಯನ್ನು ಗಳಿಸಿದೆ. ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ನೀಡಿದನು. ಆದರೆ ವೈಯುಕ್ತಿಕವಾಗಿ ಜೈನಧರ್ಮದ ತತ್ವಗಳಿಗೆ ಮಾರುಹೋದನು. ಅವನು ಜೈನಧರ್ಮಕ್ಕೆ ಮತಾಂತರಗೊಂಡನು. ಅವನು ಎರಡನೆಯ ಜಿನಸೇನಾಚಾರ್ಯನ ಶಿಷ್ಯ. ಆದರೆ ಸಂಜನ ತಾಮ್ರ ಪತ್ರಗಳು ವಿವರಿಸುವಂತೆ ವೈದಿಕ ಧರ್ಮದಲ್ಲೂ ಅಷ್ಟೇ ನಂಬಿಕೆ ಇಟ್ಟಿದ್ದನು. ಅವನು ಕೊಲ್ಲಾಪುರದ ಮಹಾಲಕ್ಷ್ಮಿಯ ಪರಮಭಕ್ತನಾಗಿದ್ದನು. ತನ್ನ ರಾಜ್ಯದಲ್ಲಿ ಯಾವುದೋ ಉಪದ್ರವ ತಲೆದೋರುವುದೆಂದು ತಿಳಿದು ಪ್ರಜೆಗಳ ಕಲ್ಯಾಣಕ್ಕಾಗಿ ಅದರ ನಿವಾರಣಾರ್ಥವಾಗಿ ತನ್ನ ಕೈಬೆರಳೊಂದನ್ನು ಛೇದಿಸಿ ಕೊಲ್ಲಾಪುರದ ಮಹಾಲಕ್ಷ್ಮೀ ದೇವತೆಗೆ ಅರ್ಪಿಸಿದನು. ಶಾಸನಗಳಲ್ಲಿ ಬಲಿ ಚಕ್ರವರ್ತಿ, ಧದಿಚಿ ಮತ್ತು ಜೀಮುತವಾಹನನೊಡನೆ ಹೋಲಿಸುತ್ತವೆ. ಜೈನ ಬಸದಿಗಳನ್ನು ಸ್ಥಾಪಿಸಲು ವಿಶೇಷವಾಗಿ ದತ್ತಿಗಳನ್ನು ನೀಡಿದನು. ಚಂದನ ಪುರಿಯಲ್ಲಿ ಸ್ಥಾಪಿತವಾದ ಜೈನ ಬಸದಿಗೆ ಅಮೋಘವರ್ಷನ ಹೆಸರನ್ನಿಡಲಾಯಿತು.

ಮಾನ್ಯಖೇಟವು ಅಮೋಘವರ್ಷನ ಕಾಲದಲ್ಲಿ ಅತ್ಯಂತ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿತ್ತು. ಭವ್ಯ ಕಟ್ಟಡಗಳನ್ನು ನಿರ್ಮಿಸಿ ಅಮೋಘವರ್ಷನು ಅದನ್ನು ಸುಂದರ ನಗರವನ್ನಾಗಿ ಮಾಡಿದನು. ಇಂದು ಗುಲ್ಬರ್ಗ ಜಿಲ್ಲೆಯಲ್ಲಿರುವ ಮಾಳ್ಕೇಡ ರಾಷ್ಟ್ರಕೂಟರ ಕಾಲದ ಭವ್ಯ ಮಾನ್ಯಖೇಟವಾಗಿತ್ತು.

ಕ್ರಿ.ಶ. 851 ರಲ್ಲಿ ಅಮೋಘವರ್ಷನ ಆಸ್ಥಾನಕ್ಕೆ ಭೇಟಿ ನೀಡಿದ್ದ ಅರೇಬಿಯಾದ ವರ್ತಕ ಸುಲೇಮಾನನು ರಾಜಧಾನಿಯ ವೈಭವ ಹಾಗೂ ಚಕ್ರವರ್ತಿಯ ಉದಾರ ಗುಣಗಳಿಗೆ ಮಾರುಹೋದನು. ಸುಲೇಮಾನನು ಅಮೋಘವರ್ಷ ನೃಪತುಂಗನನ್ನು ಬೇರೆ ಬೇರೆ ಸಾಮ್ರಾಜ್ಯಗಳ ಪ್ರತಾಪಶಾಲಿ ಚಕ್ರವರ್ತಿಗಳಾದ ಬಾಗ್ದಾದಿನ ಖಲೀಫ, ಚೀಣಾ ಮತ್ತು ಕಾನ್‌ಸ್ಟ್ಯಾಂಟಿನೋಪಲ್ ಸಾಮ್ರಾಟರೊಡನೆ ಹೋಲಿಸಿರುವನು. ಅರೇಬಿಯಾದ ವರ್ತಕರಿಗೆ ಅಮೋಘವರ್ಷನು ಮಾಡಿಕೊಟ್ಟಿದ್ದ ಸೌಕರ್ಯಗಳ ಬಗ್ಗೆ ಪ್ರಶಂಸಿಸಿರುವನು.

64 ವರ್ಷಗಳ ದೀರ್ಘ ಕಾಲ ಆಳ್ವಿಕೆಯ ನಂತರ ಕ್ರಿ.ಶ. 878 ರಲ್ಲಿ ಮರಣಹೊಂದಿದನು. ಅನಂತರ ಅವನ ಏಕೈಕ ಪುತ್ರನಾದ ಎರಡನೆಯ ಕೃಷ್ಣನು ರಾಷ್ಟ್ರಕೂಟ ಸಿಂಹಾಸನವನ್ನಲಂಕರಿಸಿದನು.

## 15.7 ಎರಡನೆಯ ಕೃಷ್ಣ (ಕ್ರಿ.ಶ. 878 -914)

ಎರಡನೆಯ ಕೃಷ್ಣನು ತನ್ನ ಅನೇಕ ಸಮಕಾಲೀನ ರಾಜಮನೆತನಗಳೊಡನೆ ಯುದ್ಧ ಮಾಡಬೇಕಾಯಿತು. ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಗುರ್ಜರ ಪ್ರತೀಹಾರ ರಾಜ ಭೋಜನು ದಾಳಿ ಮಾಡಿದನು. ಅತಿ ಪ್ರಯಾಸದಿಂದ ಈ ದಾಳಿಯನ್ನು ಹಿಮ್ಮೆಟ್ಟಿಸಿದನು. ಅದೇ ರೀತಿ ವೆಂಗಿಯ ಚಾಳುಕ್ಯರ ಅರಸ ಗುಣಗ ವಿಜಯಾದಿತ್ಯನು (ಮೂರನೆಯ ವಿಜಯಾದಿತ್ಯ) ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದನು. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಅವನ ಸಂಬಂಧಿ ಚೇದಿಯ ಅರಸ ಶಂಕರಗಣನು ಇವನ ಸಹಾಯಕ್ಕೆ ಧಾವಿಸಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ರಕ್ಷಿಸಿದನು. ಈ ಮಧ್ಯೆ ಕ್ರಿ.ಶ. 891 ರಲ್ಲಿ ಮೂರನೆಯ ವಿಜಯಾದಿತ್ಯನು ಮರಣ ಹೊಂದಿದನು. ಅನಂತರ ಭೀಮನು ಸಿಂಹಾಸನಕ್ಕೆ ಬಂದನು. ಅವನು ರಾಷ್ಟ್ರಕೂಟರ ವಿರುದ್ಧ ಯುದ್ಧ ಮುಂದುವರಿಸಿದನು. ಕೃಷ್ಣನು ಪ್ರಾರಂಭದಲ್ಲಿ ಭೀಮನನ್ನು ಸದೆಬಡಿದುವುದರಲ್ಲಿ ಯಶಸ್ವಿಯಾದನು. ಎಷ್ಟೇ ಹೋರಾಟ ನಡೆಸಿದರೂ, ಕೃಷ್ಣನು ಭೀಮನನ್ನು ಸದೆಬಡಿದು ವೆಂಗಿಯನ್ನು ತನ್ನ ಅಧೀನಕ್ಕೊಳಪಡಿಸುವುದರಲ್ಲಿ ಯಶಸ್ವಿಯಾಗಲಿಲ್ಲ.

ಎರಡನೆಯ ಕೃಷ್ಣನು ಚೋಳರ ವಿರುದ್ಧವು ಕೂಡ ಹೋರಾಟ ನಡೆಸಬೇಕಾಯಿತು. ಚೋಳ ಯುವರಾಜ ಒಂದನೆಯ ಆದಿತ್ಯನಿಗೆ ತನ್ನ ಮಗಳನ್ನು ಕೃಷ್ಣನು ವಿವಾಹ ಮಾಡಿಕೊಟ್ಟಿದ್ದನು. ಕನ್ನರ ಎಂಬ ಮೊಮ್ಮಗನಿದ್ದನು. ಆದಿತ್ಯನ ಮರಣಾನಂತರ ಆತನ ಮತ್ತೊಬ್ಬ ರಾಣಿಯ ಮಗನಾದ ಒಂದನೆಯ ಪರಾಂತಕನು ಚೋಳ ರಾಜನಾದನು. ಇದರಿಂದ ಸಿಟ್ಟಿಗೆದ್ದ ಕೃಷ್ಣನು ಸಿಂಹಾಸನವನ್ನು ತನ್ನ ಮೊಮ್ಮಗನಿಗೆ ಪಡೆಯಲು ಚೋಳರ ಮೇಲೆ ಯುದ್ಧ ಹೂಡಿದನು. ಕ್ರಿ.ಶ. 911 ರಲ್ಲಿ ಉತ್ತರ ಆರ್ಕಾಟ್‌ನ ಜಿಲ್ಲೆಯ ತಿರುವುಳ್ಳಮ್ (ವಲ್ಲಾಳ) ಎಂಬಲ್ಲಿ ರಾಷ್ಟ್ರಕೂಟ ಸೈನ್ಯ ಸೋತು ಹಿಂದಿರುಗಿತು. ಆದ್ದರಿಂದ ಕೃಷ್ಣನು ಚೋಳರೊಡನೆ ಸ್ಥಾಪಿಸಿಕೊಂಡ ರಕ್ತ ಸಂಬಂಧ ಈ ಎರಡು ಸಂತತಿಗಳ ಮೈತ್ರಿಗೆ ಸಹಕಾರಿಯಾಗಲಿಲ್ಲ.

ಹೀಗೆ ಕೃಷ್ಣನು ಶತ್ರುಗಳ ಸತತ ವಿರೋಧವನ್ನು ಎದುರಿಸಬೇಕಾಯಿತು. ಅವನು ಶತ್ರುಗಳನ್ನು ನಿಗ್ರಹಿಸಲಾಗದಿದ್ದರೂ ಸಾಮ್ರಾಜ್ಯವ:ನ್ನು ದಾಳಿಗಳಿಂದ ರಕ್ಷಿಸಿದನು.

ಎರಡನೆಯ ಕೃಷ್ಣನ ಏಕೈಕ ಪುತ್ರ ಜಗತ್ತುಂಗನು ಕೃಷ್ಣನಿಗಿಂತ ಮೊದಲೆ ತೀರಿಕೊಂಡಿದ್ದನು. ಆದ್ದರಿಂದ ಕೃಷ್ಣನ ಮೊಮ್ಮಗ ಮೂರನೆಯ ಇಂದ್ರನು ಉತ್ತರಾಧಿಕಾರಿಯಾದನು.

## 15.8 ಮೂರನೆಯ ಇಂದ್ರ, ಎರಡನೆಯ ಅಮೋಘವರ್ಷ ಮತ್ತು ನಾಲ್ಕನೆಯ ಗೋವಿಂದ

ಮೂರನೆಯ ಇಂದ್ರನು (ಕ್ರಿ.ಶ. 915- 929) ಧೃವ ಮತ್ತು ಮೂರನೆಯ ಗೋವಿಂದನ ರೀತಿಯೇ ಉತ್ತರ ಭಾರತದ ಮೇಲೆ ದಂಡೆತ್ತಿ ಹೋದನು. ಪಾರಮಾರ ಒಂದನೆ ಬೋಜನ ನಂತರ ಅವನ ಉತ್ತರಾಧಿಕಾರಿ ಮಹೇಂದ್ರಪಾಲ ಹಲವು ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಆದರೆ ಅನಂತರ ಅವನ ಮಕ್ಕಳಾದ ಎರಡನೆಯ ಭೋಜ ಮತ್ತು ಮಹಿಪಾಲರ ನಡುವೆ ಸಿಂಹಾಸನಕ್ಕಾಗಿ ಕಲಹ ಪ್ರಾರಂಭವಾಯಿತು. ಮೊದಲನೆಯದಾಗಿ ಎರಡನೆಯ ಭೋಜನು ಕನೂಜಿನಲ್ಲಿ ಸಿಂಹಾಸನವನ್ನು ವಶಪಡಿಸಿಕೊಂಡು ಆಳ್ವಿಕೆ ಪ್ರಾರಂಭಿಸಿದನು. ಅನಂತರ ಮಹಿಪಾಲ ಭೋಜನನ್ನು ಪದಚ್ಯುತಿಗೊಳಿಸಿ ಪರಮಾರ ಸಿಂಹಾಸನವನ್ನು ಆಕ್ರಮಿಸಿಕೊಂಡನು. ಈ ಸಮಯದಲ್ಲೇ ಮೂರನೆಯ ಇಂದ್ರನು ಉತ್ತರ ಭಾರತದ ಮೇಲೆ ದಾಳಿ ಮಾಡಿದನು. ಮೊದಲು ಉಜ್ಜಯಿನಿಯ ಮೇಲೆ ದಾಳಿ ಮಾಡಿದನು. ಅನಂತರ ಕನೂಜಿನ ಕಡೆ ದಂಡೆತ್ತಿ ಹೋದನು. ಈ ದಂಡಯಾತ್ರೆಯ ಸಮಯದಲ್ಲಿ ಆತನ ಮಹಮಾಂಡಳಿಕನಾದ ವೆಮುಲವಾಡದ ಇಮ್ಮಡಿ ನರಸಿಂಹನು ಪ್ರಮುಖ ಪಾತ್ರ ವಹಿಸಿದನು. ಇಂದ್ರನು ಕನೂಜಿನ ಮೇಲೆ ದಾಳಿ ಮಾಡಿ ಅದನ್ನು ಆಕ್ರಮಿಸಿಕೊಂಡನು. ಮಹಿಪಾಲನು ಸೋತು ಪಲಾಯನ ಮಾಡಿದನು. ಪಲಾಯನ ಮಾಡಿದ ಮಹಿಪಾಲನನ್ನು ಇಮ್ಮಡಿ ನರಸಿಂಹನು ಬೆನ್ನಟ್ಟಿ ಹೋದನು. ಪಂಪನಿಂದ ರಚಿಸಲ್ಪಟ್ಟ ವಿಕ್ರಮಾರ್ಜುನ ವಿಜಯ ಕಾವ್ಯವು ನರಸಿಂಹನು ಮಹಿಪಾಲನನ್ನು ಗಂಗಾ ನದಿಯವರೆಗೂ ಬೆನ್ನಟ್ಟಿ ಹೋದನು ಎಂಬುದಾಗಿ ವಿವರಿಸುತ್ತದೆ. ಈ ದಿಗ್ವಿಜಯದ ನಂತರ ಮೂರನೆಯ ಇಂದ್ರನು ರಾಜಧಾನಿಗೆ ಹಿಂದಿರುಗಿದನು. ಎ.ಪಿ. ಮದನ್ ರವರು ಈ ದಂಡಯಾತ್ರೆಗಳನ್ನು ಕ್ರಿ.ಶ. 916-917 ರಲ್ಲಿ ಇಂದ್ರನು ಕೈಗೊಂಡನೆಂದು ಅಭಿಪ್ರಾಯಪಟ್ಟಿರುವರು.

ಮೂರನೆಯ ಇಂದ್ರನು ವೆಂಗಿಯ ರಾಜ್ಯದ ಮೇಲೂ ಕೂಡ ಅನೇಕ ಯುದ್ಧಗಳನ್ನು ಕೈಗೊಂಡನು. ಆದರೆ ರಾಜ್ಯದ ಮೇಲೆ ರಾಷ್ಟ್ರಕೂಟರ ಪರಮಾಧಿಕಾರವನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ.

ಮೂರನೆಯ ಇಂದ್ರನಿಗೆ ಎರಡನೆಯ ಅಮೋಘವರ್ಷ ಮತ್ತು ನಾಲ್ಕನೆಯ ಗೋವಿಂದ ಎಂಬ ಇಬ್ಬರು ಗಂಡುಮಕ್ಕಳಿದ್ದರು. ಹಿರಿಯ ಮಗನಾದ ಎರಡನೆಯ ಅಮೋಘವರ್ಷನು ಮೂರನೆಯ ಇಂದ್ರನ ನಂತರ ರಾಷ್ಟ್ರಕೂಟ ಸಾಮ್ರಾಜ್ಯದ ಚಕ್ರವರ್ತಿಯಾದನು.

ಎರಡನೆಯ ಅಮೋಘವರ್ಷನ (ಕ್ರಿ.ಶ. 929-930) ಆಳ್ವಿಕೆಯ ಅವಧಿ ಒಂದು ವರ್ಷಕ್ಕೂ ಕಡಿಮೆ. ಅವನ ಕಿರಿಯ ಸಹೋದರ ನಾಲ್ಕನೆಯ ಗೋವಿಂದನು ಅವನನ್ನು ಪದಚ್ಯುತಿಗೊಳಿಸಿ ಅರಸನಾದನು.

ನಾಲ್ಕನೆಯ ಗೋವಿಂದನು (ಕ್ರಿ.ಶ. 930-935) ಚಕ್ರವರ್ತಿಯಾದ ಮೇಲೆ ಸುಖಲೋಲುಪನಾಗಿ ಸಾಮ್ರಾಜ್ಯದ ಆಡಳಿತವನ್ನು ಮರೆತನು. ಸಾಮಂತರು ಅವನ ವಿರುದ್ಧ ದಂಗೆ ಎದ್ದು ಅವನನ್ನು ಪದಚ್ಯುತಿಗೊಳಿಸಿದರು. ಮೂರನೆಯ ಅಮೋಘವರ್ಷನು ಚಕ್ರಾಧಿಪತಿಯಾದನು.

## 15.9 ಮೂರನೆಯ ಅಮೋಘವರ್ಷ ಮತ್ತು ಮೂರನೆಯ ಕೃಷ್ಣ

ಮೂರನೆಯ ಅಮೋಘವರ್ಷನು (ಕ್ರಿ.ಶ. 935-939) ಚಕ್ರವರ್ತಿಯಾದಾಗ ವಯೋವೃದ್ಧನಾಗಿದ್ದುದರಿಂದ ಆಡಳಿತದಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲ. ಆದ್ದರಿಂದ ಅವನ ಮಗ ಮೂರನೆಯ ಕೃಷ್ಣನು ರಾಷ್ಟ್ರಕೂಟ ಸಾಮ್ರಾಜ್ಯದ ಆಡಳಿತವನ್ನು ನಿರ್ವಹಿಸಿದನು. ಈ ವೇಳೆಗೆ ಮೂರನೆಯ ಅಮೋಘವರ್ಷನ ಮಗಳಾದ ರೇವಕ ನಿಮ್ಮಡಿಯನ್ನು ಗಂಗರಾಜ ಕುಮಾರ ಎರಡನೆಯ ಭೂತಗನು ವಿವಾಹವಾಗಿದ್ದನು. ಭೂತಗನು ತನ್ನ ಹಿರಿಯ ಸಹೋದರ ಮೂರನೆಯ ರಾಚಮಲ್ಲನನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬರಲು ಸಂಚು ನಡೆಸಿದನು. ಮೂರನೆಯ ಕೃಷ್ಣನು ಅವನ ಸಹಾಯಕ್ಕೆ ಧಾವಿಸಿದನು. ಅಂತಿಮವಾಗಿ ಭೂತುಗನು ಮೂರನೆಯ ರಾಚಮಲ್ಲನನ್ನು ಪದಚ್ಯುತಿಗೊಳಿಸಿ ಗಂಗವಾಡಿಯ ರಾಜನಾದನು. ಕ್ರಿ.ಶ. 939 ರಲ್ಲಿ ಅಮೋಘವರ್ಷನು ಕಾಲವಾದನು. ಮೂರನೆಯ ಕೃಷ್ಣನು ಚಕ್ರವರ್ತಿಯಾದನು.

ಮೂರನೆಯ ಕೃಷ್ಣನು (ಕ್ರಿ.ಶ. 939-967) ರಾಷ್ಟ್ರಕೂಟ ಸಂತತಿಯ ಕೊನೆಯ ಪ್ರಮುಖ ಚಕ್ರವರ್ತಿ. ಅವನ ಆಳ್ವಿಕೆಯ ಪ್ರಾರಂಭದಲ್ಲಿ ಲಲ್ಲೇಯ ಎಂಬ ದಂಡನಾಯಕನು ದಂಗೆ ಎದ್ದನು. ಈ ದಂಗೆಯ ಸಮಯದಲ್ಲಿ ಕೃಷ್ಣನ ಸಹಾಯಕ್ಕೆ ಎರಡನೆಯ ಭೂತುಗನು ಶತ್ರುವನ್ನು ಸದೆಬಡಿಯುವುದರಲ್ಲಿ ಸಹಾಯ ಮಾಡಿದನು.

### *15.9.1 ಮೂರನೆಯ ಕೃಷ್ಣ ನತ್ತು ಎರಡನೆಯ ಭೂತುಗ*

ಈ ವೇಳೆಗೆ ತಮಿಳು ನಾಡಿನಲ್ಲಿ ಪಲ್ಲವರ ಆಳ್ವಿಕೆ ಕೊನೆಗೊಂಡು ಚೋಳರು ಪ್ರಬಲರಾಗಿದ್ದರು. ಆದಿತ್ಯ ಚೋಳನ ನಂತರ ಒಂದನೆಯ ಪರಾಂತಕನು ಚೋಳರಾಜನಾದನು. ಅವನು ಚೋಳ ರಾಜ್ಯವನ್ನು ವಿಸ್ತರಿಸಲು ಪ್ರಯತ್ನ ನಡೆಸಿದನು. ಮಧುರೆಯ ಪಾಂಡ್ಯರನ್ನು ಸಿಂಹಳದ ಅರಸನನ್ನು ಪರಾಂತಕನು ಸೋಲಿಸಿದನು. ಅವನ ರಾಜ್ಯ ಗಂಗ ಮತ್ತು ರಾಷ್ಟ್ರಕೂಟ ಗಡಿಗಳವರೆಗೂ ವಿಸ್ತರಿಸಿತು. ಗಂಗವಾಡಿ ಮತ್ತು ರಾಷ್ಟ್ರಕೂಟ ರಾಜ್ಯಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸಿದನು. ಆದ್ದರಿಂದ ಎರಡನೆಯ ಭೂತುಗನು ಮತ್ತು ಮೂರನೆಯ ಕೃಷ್ಣನು ಜಂಟಿಯಾಗಿ ಚೋಳರ ವಿರುದ್ಧ ಯುದ್ಧ ಸಾರಿದರು. ರಾಷ್ಟ್ರಕೂಟ ಮತ್ತು ಗಂಗರ ಸೈನ್ಯಗಳನ್ನು ತಡೆಗಟ್ಟಲು ಪರಾಂತಕನು ತನ್ನ ಹಿರಿಯ ಮಗನೂ ಯುವರಾಜನೂ ಆದ ರಾಜಾದಿತ್ಯನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಳುಹಿಸಿದನು. ಕ್ರಿ.ಶ. 949 ರಲ್ಲಿ ಅರಕೋಣಂನ ಹತ್ತಿರವಿದ್ದ ತಕ್ಕೋಲಂನಲ್ಲಿ ಒಂದು ನಿರ್ಣಾಯಕ ಯುದ್ಧ ನಡೆಯಿತು. ಎರಡನೆಯ ಭೂತುಗನು ಈ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದನು. ಅವನು ಚೋಳರ ಯುವರಾಜ ರಾಜಾದಿತ್ಯನನ್ನು ಕೊಂದು ಹಾಕಿದನು. ರಾಜಾದಿತ್ಯನ ಮರಣದಿಂದ ದಿಕ್ಕೆಟ್ಟ ಚೋಳ ಸೈನ್ಯ ದಿಕ್ಕಾಪಾಲಾಗಿ ಓಡತೊಡಗಿತು. ತಕ್ಕೋಲಂ ಕದನ ಚೋಳ ಪ್ರಭುತ್ವದ ಮೇಲೆ ಭೀಕರ ಪರಿಣಾಮವನ್ನುಂಟು ಮಾಡಿತು. ಮೂರನೇ ಕೃಷ್ಣನು ಮುಂದುವರಿದು ಕಂಚಿ ಮತ್ತು ಚೋಳ ರಾಜಧಾನಿ ತಂಜಾವೂರನ್ನು ಆಕ್ರಮಿಸಿದನು. ಅವನು ಕಂಚಿ ಮತ್ತು ತಂಜಾವೂರುಗಳನ್ನು ಗೆದ್ದು ವೀರನೆಂಬ ಬಿರುದನ್ನು ಧರಿಸಿದನು. ಪರಾಂತಕನು ರಾಜಧಾನಿಯಿಂದ ದಕ್ಷಿಣದತ್ತ ಓಡಿಹೋಗಿ ತಲೆಮರೆಸಿಕೊಂಡನು. ಕಂಚಿ ಹಲವು ದಶಕಗಳ ಕಾಲ ರಾಷ್ಟ್ರಕೂಟರ ವಶದಲ್ಲಿತ್ತು. ಕೃಷ್ಣನು ಪಾಂಡ್ಯರನ್ನು ಚೇರರನ್ನು ಸೋಲಿಸಿ ಅವರಿಂದ ಕಪ್ಪ ಕಾಣಿಕೆಯನ್ನು ಪಡೆದನು. ಅವನು ರಾಮೇಶ್ವರದವರೆಗೂ ದಂಡೆತ್ತಿ ಹೋಗಿ ಅಲ್ಲಿ ವಿಜಯ ಸ್ತಂಭವನ್ನು ಸ್ಥಾಪಿಸಿದನು.

ಗಂಗ ಮನೆತನಕ್ಕೆ ಸೇರಿದ್ದ ಪಾರವಿ ಶಾಖೆ ಈ ಯುದ್ಧದಲ್ಲಿ ಚೋಳರ ಪರವಾಗಿ ಕಾದಾಡಿತು. ಅವರನ್ನು ಕೂಡ ಸೋಲಿಸಲಾಯಿತು. ಕೃಷ್ಣ ಮತ್ತು ಭೂತುಗರ ಆಕ್ರಮಣದಿಂದ ಚೋಳರ ಪ್ರಭುತ್ವ ಕ್ಷೀಣಿಸಿ ಅದು ಪುನಶ್ಚೇತನಗೊಳ್ಳಲು ಸುಮಾರು ಮೂರು ದಶಕಗಳು ಬೇಕಾಯಿತು. ಭೂತುಗನ ಸಾಹಸ ಮತ್ತು ಸಹಕಾರಗಳ ಮೆಚ್ಚುಗೆಯ ಕುರುಹಾಗಿ ಕೃಷ್ಣನು ಅವನಿಗೆ ಬನವಾಸಿ 12000, ಬೆಳವೊಲ 300 ಮತ್ತು ಪುಲಿಗೆರೆ 300 ಪ್ರಾಂತ್ಯಗಳನ್ನು ನೀಡಿದನು.

### *15.9.2 ಮೂರನೆಯ ಕೃಷ್ಣ ಮತ್ತು ಮೂರನೆಯ ಮಾರಸಿಂಹ*

ರಾಷ್ಟ್ರಕೂಟ ಸಾಮ್ರಾಜ್ಯದ ಉತ್ತರ ಗಡಿಗಳ ಮೇಲೆ ಪರಮಾರರು ದಾಳಿ ಮಾಡಿದರು. ಆದ್ದರಿಂದ ಮೂರನೆಯ ಕೃಷ್ಣನು ಉತ್ತರ ಭಾರತದ ಕಡೆ ದಂಡೆತ್ತಿ ಹೋಗಲು ನಿರ್ಧರಿಸಿದನು. ಆದರೆ ಇದೇ ವೇಳೆಗೆ ಎರಡನೆಯ ಭೂತುಗನು ಮರಣ ಹೊಂದಿದನು. ಅವನ ಮಗ ಮರುಳದೇವನು ಕೇವಲ ಕೆಲವೇ ದಿವಸಗಳು ಆಳ್ವಿಕೆ ನಡೆಸಿ ಮರಣ ಹೊಂದಿದನು ಆದ್ದರಿಂದ ಅವನ ಉತ್ತರಾಧಿಕಾರಿ ಮೂರನೆ ಮಾರಸಿಂಹನ ಪಟ್ಟಾಭಿಷೇಕ ಸಮಾರಂಭದಲ್ಲಿ ಭಾಗವಹಿಸಲು ಮೂರನೆಯ ಕೃಷ್ಣನು ತಲಕಾಡಿಗೆ ಧಾವಿಸಿದನು. ಪಟ್ಟಾಭಿಷೇಕ ಸಮಾರಂಭದ ನಂತರ ಮೂರನೆಯ ಕೃಷ್ಣನು ಮಾರಸಿಂಹನಿಗೆ ಉತ್ತರದ ಪರಮಾರರ ಮೇಲೆ ದಂಡೆತ್ತಿ ಹೋಗಲು ನಿರ್ದೇಶಿಸಿದನು.

ಕ್ರಿ.ಶ. 963 ರಲ್ಲಿ ಮಾರಸಿಂಹನು ಗಂಗ ಮತ್ತು ರಾಷ್ಟ್ರಕೂಟ ಸೈನ್ಯಗಳ ಸಮೇತನಾಗಿ ಉತ್ತರ ಭಾರತದ ಮೇಲೆ ದಂಡೆತ್ತಿ ಹೋದನು. ಅವನು ಉಜ್ಜೈನಿಯನ್ನು ವಶಪಡಿಸಿಕೊಂಡು ಪರಮಾರಸೀಯಕನನ್ನು ಸೋಲಿಸಿದನು. ಈ ಸೋಲಿನಿಂದ ಸೀಯಕನು ರಾಷ್ಟ್ರಕೂಟರ ಪರಮಾಧಿಕಾರವನ್ನು ಒಪ್ಪಿಕೊಂಡು ಸಾಮಂತನಾದನು. ಮಾರಸಿಂಹನು ಗೂರ್ಜಧಿರಾಜ ಎಂಬ ಬಿರುದನ್ನು ಧರಿಸಿದನು. ಜಬ್ಬಲ್‌ಪುರದ ಬಳಿಯ ಜೂರಾ ಎಂಬಲ್ಲಿ ದೊರೆತಿರುವ ಮೂರನೆ ಕೃಷ್ಣನ ಕನ್ನಡ ಶಾಸನ ಮೇಲ್ಕಂಡ ವಿಷಯಗಳನ್ನು ಕುರಿತು ಸ್ಪಷ್ಟ ವಿವರಣೆಯನ್ನೊಳಗೊಂಡಿದೆ. ಮೂರನೆಯ ಮಾರಸಿಂಹನು ಈ ದಿಗ್ವಿಜಯಗಳ ನಂತರ ತಲಕಾಡಿಗೆ ಹಿಂದಿರುಗಿದನು.

ಮೂರನೆಯ ಕೃಷ್ಣನು ವೆಂಗಿ ರಾಜ್ಯದ ವ್ಯವಹಾರಗಳಲ್ಲಿ ಯಾವ ಹಸ್ತಕ್ಷೇಪ ಮಾಡಿದನು. ಬಡಪ ಎಂಬುವವನನ್ನು ವೆಂಗಿಯ ರಾಜನನ್ನಾಗಿ ನೇಮಿಸಿದನು. ಆದರೆ ಎರಡನೆಯ ಅಮ್ಮನು ಅವನನ್ನು ಪದಚ್ಯುತಿಗೊಳಿಸಿದನು. ಮೂರನೆಯ ಕೃಷ್ಣನು ಪುನಃ ವೆಂಗಿಯ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಎರಡನೆಯ ಅಮ್ಮನನ್ನು ಸೋಲಿಸಿದನು. ಅವನು ಕಳಿಂಗ ದೇಶಕ್ಕೆ ಓಡಿಹೋದನು. ಕೃಷ್ಣನು ಅಮ್ಮನಿಂದ ಅಧಿಕಾರ ವಂಚಿತನಾದ ಅವನ ಹಿರಿಯ ಸಹೋದರ ದನಾರ್ಣವನಿಗೆ ಪಟ್ಟ ಕಟ್ಟಿದನು. ದನಾರ್ಣವನು ಕೃಷ್ಣನ ಸಾಮಂತನಾದನು.

### 15.9.3 ಮೂರನೆಯ ಕೃಷ್ಣನ ವ್ಯಕ್ತಿತ್ವ

ಮೂರನೆಯ ಕೃಷ್ಣನು ಸಾಹಿತ್ಯ ಮತ್ತು ಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದನು. ಇವನು ಅನೇಕ ಕವಿಗಳಿಗೆ ಉದಾರ ಸಹಾಯ ನೀಡಿದನು. ಅವನ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅನೇಕ ಶ್ರೇಷ್ಠ ಗ್ರಂಥಗಳು ರಚನೆಯಾದವು. 'ಶಾಂತಿಪುರಾಣ'ದ ಕರ್ತೃ ಪೊನ್ನನು ಕೃಷ್ಣನ ಆಸ್ಥಾನ ಕವಿಯಾಗಿದ್ದನು. ಸಾಮ್ರಾಟನು ಅವನಿಗೆ 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿದನು.

ರಾಷ್ಟ್ರಕೂಟ ಸಂತತಿಯ ಅತ್ಯಂತ ದಕ್ಷ ಸಾಮ್ರಾಟರಲ್ಲಿ ಮೂರನೆಯ ಕೃಷ್ಣನು ಕೊನೆಯವನು. ರಾಷ್ಟ್ರಕೂಟ ಸಂತತಿಯ ಕೀರ್ತಿ ಪ್ರತಿಷ್ಠೆಯನ್ನು ಪುನರ್ ಸ್ಥಾಪಿಸಿ ಮೂರನೆ ಕೃಷ್ಣನು ಕ್ರಿ.ಶ. 967 ರಲ್ಲಿ ಮರಣ ಹೊಂದಿದನು. ಕೃಷ್ಣನ ಮೊಮ್ಮಗ ಇಂದ್ರನು ಇನ್ನು ಬಾಲಕನಾಗಿದ್ದುದರಿಂದ ಅವನ ತರುವಾಯ ಅವನ ತಮ್ಮ ಖೊಟ್ಟಿಗನು ರಾಜನಾದನು.

## 15.10 ರಾಷ್ಟ್ರಕೂಟ ಮನೆತನದ ಪತನ (ಕ್ರಿ.ಶ. 967-972)

ಖೊಟ್ಟಿಗನು (ಕ್ರಿ.ಶ. 967-972 )ಸಮರ್ಥ ಚಕ್ರವರ್ತಿಯಾಗಿರಲಿಲ್ಲ. ರಾಷ್ಟ್ರಕೂಟರ ಶತ್ರುಗಳಿಗೆ ತಮ್ಮ ಹಿಂದಿನ ಪರಾಭವಗಳಿಗೆ ಸೇಡು ತೀರಿಸಿಕೊಳ್ಳಲು ಅನುಕೂಲವಾಯಿತು. ಮೂರನೆಯ ಕೃಷ್ಣನ ಕಾಲದಲ್ಲಿ ಪರಾಜಿತನಾಗಿದ್ದ ಪರಮಾರ ಎರಡನೆಯ ಸೀಯಕನು ರಾಷ್ಟ್ರಕೂಟ ರಾಜಧಾನಿಯನ್ನು ಕ್ರಿ.ಶ. 972 ರಲ್ಲಿ ಮುತ್ತಿದನು. ತನ್ನ ರಾಜಧಾನಿಯನ್ನು ರಕ್ಷಿಸುವುದರಲ್ಲಿ ವಿಫಲನಾದನು. ಇಂತಹ ಸಮಯದಲ್ಲಿ ತಲಕಾಡಿನ ಗಂಗರ ಮೂರನೆಯ ಮಾರಸಿಂಹನು ಖೊಟ್ಟಿನ ಸಹಾಯಕ್ಕೆ ಧಾವಿಸಿ ಬಂದನು. ಪರಮಾರ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಈ ರೀತಿಯಾಗಿ ಮಾರಸಿಂಹನು ರಾಷ್ಟ್ರಕೂಟ ಸಾಮ್ರಾಜ್ಯವನ್ನು ರಕ್ಷಿಸಿದನು. ಆದರೆ ಖೊಟ್ಟಿಗನು ಸೋಲಿನ ಅಪಮಾನವನ್ನು ತಾಳಲಾರದೆ ಮರಣ ಹೊಂದಿದನು.

ಎರಡನೆಯ ಕರ್ಕ (ಕ್ರಿ.ಶ. 972-973) ಕೃಷ್ಣನ ಮತ್ತೊಬ್ಬ ಸಹೋದರ ನಿರುಪಮನ ಮಗ. ಈತನು ರಾಷ್ಟ್ರಕೂಟ ಸಾಮ್ರಾಜ್ಯದ ಚಕ್ರವರ್ತಿಯಾದನು. ಆದರೆ ಈ ವೇಳೆಗೆ ಸಾಮಂತನಾದ ಎರಡನೆಯ ತೈಲನು ಪ್ರಬಲನಾಗಿದ್ದನು. ಅವನು ತರ್ದವಾಡಿ ಪ್ರದೇಶದ ಮೇಲೆ ಆಳ್ವಿಕೆ ನಡೆಸುತ್ತಿದ್ದನು. ಅವನು ಕರ್ಕನ ವಿರುದ್ಧ ದಂಗೆಯೆದ್ದು ಅವನನ್ನು ಸೋಲಿಸಿದನು. ಕರ್ಕನು ರಾಜಧಾನಿಯಿಂದ ಪಲಾಯನ ಮಾಡಿದನು. ಈ ಸಮಯದಲ್ಲಿ ಮೂರನೆಯ ಮಾರಸಿಂಹನು ತನ್ನ ಮಗಳ ಮಗನಾದ ನಾಲ್ಕನೆಯ ಇಂದ್ರನನ್ನು ರಾಷ್ಟ್ರಕೂಟರ ಅರಸನೆಂದು ಘೋಷಿಸಿದನು. ಆದರೆ ಈ ವೇಳೆಗೆ ಸಂಪೂರ್ಣವಾಗಿ ಎರಡನೆಯ ತೈಲಪನು ರಾಷ್ಟ್ರಕೂಟರ ಎಲ್ಲಾ ಪ್ರದೇಶಗಳ ಮೇಲೂ ತನ್ನ ಪರಮಾಧಿಕಾರವನ್ನು ಸ್ಥಾಪಿಸಿದನು.

ನಾಲ್ಕನೆಯ ಇಂದ್ರನು ಗಂಗ ರಾಜ್ಯಕ್ಕೆ ಬಂದು ಶ್ರವಣಬೆಳಗೊಳದಲ್ಲಿ ಹಲವು ವರ್ಷಗಳ ಕಾಲ ಬದುಕಿದ್ದನು. ಕ್ರಿ.ಶ. 975 ರಲ್ಲಿ ಸಲ್ಲೇಖನ ವಿಧಿಯಿಂದ ಅಸುನೀಗಿದನು. ಇನ್ನೂರು ವರ್ಷಗಳಿಗೂ ಹೆಚ್ಚು ಕಾಲ ಪ್ರತಾಪ ಮತ್ತು ವೈಭವದಿಂದ ಕರ್ನಾಟಕದ ಕೀರ್ತಿಯನ್ನು ಮೆರೆಸಿದ ರಾಷ್ಟ್ರಕೂಟ ಸಾರ್ವಭೌಮರ ಆಳ್ವಿಕೆ ಕೊನೆಗೊಂಡಿತು.

## 15.11 ಆಡಳಿತ ಪದ್ಧತಿ

ರಾಷ್ಟ್ರಕೂಟರ ಆಡಳಿತವನ್ನು ತಿಳಿದುಕೊಳ್ಳಲು ಅನೇಕ ಶಾಸನಗಳು ಸಹಾಯ ಮಾಡುತ್ತವೆ. ಆದಾಗ್ಯೂ ಒಂದು ಸಂಪೂರ್ಣ ಹಾಗೂ ಸಮಗ್ರ ಚಿತ್ರವನ್ನು ನೀಡುವುದು ಕಷ್ಟದ ಕೆಲಸ. ರಾಷ್ಟ್ರಕೂಟರು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ಆಡಳಿತ ಪದ್ಧತಿಯನ್ನು ಹಲವು ಮಾರ್ಪಾಟುಗಳೊಂದಿಗೆ ಅನುಷ್ಠಾನಕ್ಕೆ ತಂದರು. ಪ್ರಜೆಗಳ ಕಲ್ಯಾಣವೇ ಅವರ ಮುಖ್ಯ ಧ್ಯೇಯವಾಗಿತ್ತು. ಪ್ರಾಚೀನ ಕಾಲದಲ್ಲಿ ದಖನ್ ಪ್ರಸ್ಥಭೂಮಿಯಲ್ಲಿ ಬೇರೆ ಯಾವ ಕಾಲದಲ್ಲೂ ಅಂತಹ ಸಮರ್ಥ ಆಡಳಿತ ಸ್ಥಾಪಿತವಾಗಿರಲಿಲ್ಲವೆಂದು ಆಲ್ಟೇಕರ್‌ರವರು ಅಭಿಪ್ರಾಯ ಪಟ್ಟಿದ್ದಾರೆ.

### 15.11.1 ರಾಜ ಮತ್ತು ಅವನ ಆಸ್ಥಾನ

ಚಕ್ರವರ್ತಿ ಸರ್ವೋತ್ಕೃಷ್ಟ ಅಧಿಕಾರಿಯಾಗಿದ್ದನು. ಆಡಳಿತಕ್ಕೆ ಸಂಬಂಧಿಸಿದಂತೆ ಅವನ ನಿರ್ಧಾರವೇ ಅಂತಿಮ. ಆದರೂ ಅವನು ನಿರಂಕುಶಾಧಿಕಾರಿಯಾಗಿರಲಿಲ್ಲ. ಇಂತಹ ನಿರ್ಧಾರ ತೆಗೆದುಕೊಳ್ಳುವಾಗ ಮಂತ್ರಾಲೋಚನೆಯ ಸಭೆಯಲ್ಲಿ ಚರ್ಚೆ ಮಾಡಲಾಗುತ್ತಿತ್ತು. ಪ್ರಾಚೀನ ಕಾಲದಿಂದಲೂ ಪರಂಪರಾನುಗತವಾಗಿ ಬಂದ ಧರ್ಮವನ್ನು ಅವರು ಉಪೇಕ್ಷಿಸಲಿಲ್ಲ. ಸಚಿವರು, ದಂಡನಾಯಕ, ಭಂಡಾರಿ, ಪುರೋಹಿತ ಮೊದಲಾದ ಅಧಿಕಾರಿಗಳು ಮಂತ್ರಾಲೋಚನೆಯ ಸಭೆಯ ಸದಸ್ಯರಾಗಿದ್ದರು.

ರಾಜಧಾನಿಯಲ್ಲಿ ವೈಭವದಿಂದ ಕೂಡಿದ್ದ ಒಂದು ಆಸ್ಥಾನವಿತ್ತು. ರಾಜಧಾನಿಯಲ್ಲಿ ಕೇಂದ್ರ ಸರ್ಕಾರದ ಕಛೇರಿಯು ಕೂಡ ಸ್ಥಾಪಿತವಾಗಿತ್ತು. ಸಭಾಭವನದಲ್ಲಿ ಯುವಾರಜ, ಸಚಿವರು, ದಂಡ ನಾಯಕರು, ಸಾಮಂತ ರಾಜರು ಮತ್ತು ರಾಜಧೂತರು ಉಪಸ್ಥಿತಿತರಾಗಿರುತ್ತಿದ್ದರು. ಸಭಾ ಭವನದ ಹೊರವಲಯದಲ್ಲಿ ಸೈನ್ಯಗಳು ನಿಲ್ಲುತ್ತಿದ್ದವು. ಸಾಮ್ರಾಟರು ರಾಜಧಾನಿಯಲ್ಲಿರುವಾಗ ಸಾಮಾನ್ಯವಾಗಿ ದಿನಂಪ್ರತಿ ರಾಜಸಭೆ ಸೇರುತ್ತಿತ್ತು.

### 15.11.2 ಯುವರಾಜ

ಪ್ರಭುತ್ವ ವಂಶಪಾರಂಪರ್ಯವಾಗಿತ್ತು. ಹಿರಿಯ ಮಗನು ಸಾಮಾನ್ಯವಾಗಿ ಉತ್ತರಾಧಿಕಾರಿಯಾಗಿರುತ್ತಿದ್ದನು. ಅವನನ್ನು ಯುವರಾಜನನ್ನಾಗಿ ಪ್ರತಿಷ್ಠಾಪಿಸಲಾಗುತ್ತಿತ್ತು. ಆದರೆ ಕೆಲವು ಸಂದರ್ಭಗಳಲ್ಲಿ ಅತ್ಯಂತ ದಕ್ಷನಾದವನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಲಾಗುತ್ತಿತ್ತು. ಧೃವನು ಹಿರಿಯ ಮಗನನ್ನು ಬಿಟ್ಟು ಮೂರನೇ ಗೋವಿಂದನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದನು. ಅಂತಹ ಸಂದರ್ಭದಲ್ಲಿ ಸಿಂಹಾಸನಕ್ಕಾಗಿ ಸಹೋದರರಲ್ಲಿ ಅಂತಕಲಹಗಳು ನಡೆಯುತ್ತಿದ್ದವು. ಒಂದೆರಡು ಸಂದರ್ಭಗಳನ್ನು ಹೊರತುಪಡಿಸಿದರೆ ಹಿರಿಯ ಮಗನು ಉತ್ತರಾಧಿಕಾರಿಯಾಗುವುದು ಪದ್ಧತಿಯಾಗಿತ್ತು. ಉತ್ತರಾಧಿಕಾರಿಯಾಗಲಿದ್ದ ಕುಮಾರನಿಗೆ ಸೂಕ್ತ ಸಮಯದಲ್ಲಿ ಯುವರಾಜ ಪಟ್ಟವನ್ನು ಕಟ್ಟಲಾಗುತ್ತಿತ್ತು. ಯುವರಾಜನಿಗೆ ಯುದ್ಧ, ರಾಜನೀತಿ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ತರಬೇತಿ ಕೊಡುವ ಪದ್ಧತಿಯಿತ್ತು. ಪ್ರಾಪ್ತ ವಯಸ್ಕನಾದ ಮೇಲೆ ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದನು. ಸಾಮಾನ್ಯವಾಗಿ ರಾಜನಿಗೆ ಆಡಳಿತದಲ್ಲಿ ಸಹಾಯ ಮಾಡುವುದು ಅವನು ಮುಖ್ಯ ಕರ್ತವ್ಯವಾಗಿತ್ತು. ಅವನು ಒಂದು ಪ್ರಾಂತ್ಯದ ಪ್ರಾಂತ್ಯಾಧಿಕಾರಿಯಾಗಿಯೂ ಸೇವೆ ಸಲ್ಲಿಸಬೇಕಾಗಿತ್ತು. ಕೆಲವು ಯುದ್ಧಗಳಲ್ಲಿ ಯುವಾರಜನೇ ರಾಜನ ಪರವಾಗಿ ದಂಡಯಾತ್ರೆಯನ್ನು ಕೈಗೊಳ್ಳುತ್ತಿದ್ದನು.

### 15.11.3 ಮಂತ್ರಿಮಂಡಲ

ಚಕ್ರವರ್ತಿಗೆ ಸಾಮ್ರಾಜ್ಯದ ಆಡಳಿತವನ್ನು ನಿರ್ವಹಿಸಲು ಮಂತ್ರಿಮಂಡಲದ ಬೆಂಬಲವಿತ್ತು. ಈ ಮಂತ್ರಿಮಂಡಲದ ಬಗ್ಗೆ ಶಾಸನಗಳು ಹೆಚ್ಚು ಮಾಹಿತಿಯನ್ನು ನೀಡುವುದಿಲ್ಲ. ಸಾಮಾನ್ಯವಾಗಿ ಮಂತ್ರಿ ಮಂಡಲವು ಪ್ರಧಾನ ಮಂತ್ರಿ, ವಿದೇಶಾಂಗ ಮಂತ್ರಿ, ಕಂದಾಯ ಮಂತ್ರಿ, ಕೋಶಾಧಿಕಾರಿ, ಮುಖ್ಯನ್ಯಾಯಾಧೀಶ, ದಂಡನಾಯಕ ಮತ್ತು ಪುರೋಹಿತರಿಂದ ಕೂಡಿರುತ್ತಿತ್ತು. ಆ ಕಾಲದಲ್ಲಿ ಸಾಮಾನ್ಯವಾಗಿ ದಂಡನಾಯಕರುಗಳು ಮಂತ್ರಿಗಳಾಗಿರುತ್ತಿದ್ದರು.

### 15.11.4 ಕೇಂದ್ರದ ಕಛೇರಿ

ರಾಷ್ಟ್ರಕೂಟ ಶಾಸನಗಳು ಕೇಂದ್ರದಲ್ಲಿದ್ದ ಕಛೇರಿಯ ಬಗ್ಗೆ ಯಾವ ಮಾಹಿತಿಯನ್ನು ಕೂಡ ನೀಡುವುದಿಲ್ಲ. ಮೌರ್ಯರ ಕಾಲದಲ್ಲಿ ಅಮಾತ್ಯರು ಮತ್ತು ಗುಪ್ತರ ಕಾಲದಲ್ಲಿ ಕುಮಾರಾಮತ್ಯರು ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದರ ಬಗ್ಗೆ ಮಾಹಿತಿ ಇದೆ. ಆದರೆ ಇಂತಹ ವ್ಯವಸ್ಥೆಯ ಬಗ್ಗೆ ಶಾಸನಗಳು ಬೆಳಕು ಚೆಲ್ಲುವುದಿಲ್ಲ. ಆದರೆ ಶಾಸನಗಳು ಮಾಹಿತಿ ನೀಡದೆ ಇದ್ದರೂ ಕೂಡ ಕೇಂದ್ರದಲ್ಲಿ ಒಂದು ಸಮರ್ಥ ಅಧಿಕಾರ ವರ್ಗವಿತ್ತೆಂದು ಹೇಳಬಹುದು. ಕೇಂದ್ರದ ಅಧಿಕಾರಿಗಳು ಸಾಮ್ರಾಜ್ಯದಲ್ಲೆಲ್ಲಾ ಪ್ರವಾಸ ಕೈಗೊಂಡು ಆಡಳಿತದ ಬಗ್ಗೆ ಮಾಹಿತಿಯನ್ನು ರಾಜನಿಗೆ ಸಲ್ಲಿಸುತ್ತಿದ್ದರು. ಸಾಮಂತರು ಆಗಿಂದ್ದಾಗ್ಗೆ ಬಂದು ಚಕ್ರವರ್ತಿಗೆ ತಮ್ಮ ಆಡಳಿತದ ಬಗ್ಗೆ ವರದಿ ನೀಡಬೇಕಾಗಿತ್ತು. ಗೂಡಾಚಾರರನ್ನು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ನೇಮಿಸಿದ್ದರು. ಅವರು ಪ್ರಾಂತ್ಯಾಧಿಕಾರಿಗಳ ಮತ್ತು ಇನ್ನುಳಿದ ಅಧಿಕಾರಿಗಳ ಚಟುವಟಿಕೆಗಳ ಬಗ್ಗೆ ವರದಿಯನ್ನು ಚಕ್ರವರ್ತಿಗಳಿಗೆ ಸಲ್ಲಿಸುತ್ತಿದ್ದರು.

### 15.11.5 ಸಾಮಂತರು

ರಾಷ್ಟ್ರಕೂಟ ಸಾಮ್ರಾಜ್ಯ ಪ್ರಭುತ್ವದ ನೇರ ಆಡಳಿತಕ್ಕೊಳಪಟ್ಟಿದ್ದ ಮತ್ತು ಸಾಮಂತ ರಾಜರ ಆಳ್ವಿಕೆಗೊಳಪಟ್ಟಿದ್ದ ಪ್ರದೇಶಗಳಿಂದ ಕೂಡಿತ್ತು. ಪ್ರಮುಖ ಸಾಮಂತ ರಾಜರುಗಳಾದ ಗುಜರಾತ್ ಮತ್ತು ಇನ್ನುಳಿದ ಕೆಲವು ಸಾಮಂತ ರಾಜರು ಸಂಪೂರ್ಣ ಸ್ವಾಯತತ್ತೆಯನ್ನು ಹೊಂದಿದ್ದರು. ಅಂತಹ ಸಾಮಂತ ರಾಜರುಗಳು ಚಕ್ರವರ್ತಿಯ ಅನುಮತಿಯನ್ನು ಪಡೆಯದೆ ಹಳ್ಳಿಗಳನ್ನು ಧಾನವಾಗಿ ನೀಡಬಹುದಿತ್ತು. ಅವರು ತಮ್ಮ ಕೈಕೆಳಗೆ ಹಲವು ಸಣ್ಣಪುಟ್ಟ ಸಾಮಂತರುಗಳನ್ನು ಕೂಡ ಹೊಂದಿದ್ದರು. ಸಾಮಂತ ರಾಜರುಗಳು ಚಕ್ರವರ್ತಿಗಳ ಆಜ್ಞೆಗಳನ್ನು ಪರಿಪಾಲಿಸಬೇಕಾಗಿತ್ತು. ಅವರು ಚಕ್ರವರ್ತಿಯ ಆಜ್ಞೆಯ ಮೇರೆಗೆ ಆಸ್ಥಾನಕ್ಕೆ ಆಗಿಂದಾಗ್ಗೆ ಬರಬೇಕಾಗಿತ್ತು. ಯುದ್ಧಗಳ ಸಮಯದಲ್ಲೂ ಅವರುಗಳು ತಮ್ಮ ಸೈನ್ಯ ಸಮೇತ ಬರಬೇಕಾಗಿತ್ತು. ಕಪ್ಪ ಕಾಣಿಕೆಯನ್ನು ನಿಗಧಿಯಾಗಿ ಚಕ್ರವರ್ತಿಗೆ ಸಲ್ಲಿಸಬೇಕಾಗಿತ್ತು ಮತ್ತು ಒಪ್ಪಿಕೊಂಡಷ್ಟು ಸೈನ್ಯವನ್ನು ಕೂಡ ಪ್ರತಿವರ್ಷ ಕಳುಹಿಸಿ ಕೊಡಬೇಕಾಗಿತ್ತು.

### 15.11.6 ನೇರ ಆಡಳಿತಕ್ಕೊಳಪಟ್ಟ ಪ್ರದೇಶಗಳು

ಸಾಮ್ರಾಜ್ಯದ ನೇರ ಆಡಳಿತಕ್ಕೊಳಪಟ್ಟ ಪ್ರದೇಶಗಳನ್ನು ಆಡಳಿತಕ್ಕನುಗುಣವಾಗಿ ರಾಷ್ಟ್ರಗಳು ಅಥವಾ ವಿಷಯಗಳು ಎಂದು ವಿಭಾಗ ಮಾಡಲಾಗಿತ್ತು. ಒಂದು ರಾಷ್ಟ್ರವು ಆಧುನಿಕ ಕಾಲದ ನಾಲ್ಕು ಅಥವಾ ಐದು ಜಿಲ್ಲೆಗಳಿಗೆ ಸಮಾನವಾಗಿತ್ತು. ರಾಷ್ಟ್ರಪತಿಯು ರಾಷ್ಟ್ರದ ಮುಖ್ಯಸ್ಥನಾಗಿದ್ದನು. ಅವನು ರಾಷ್ಟ್ರದ ನಾಗರಿಕ ಮತ್ತು ಸೈನಿಕ ಅಧಿಕಾರಗಳೆರಡನ್ನು ತನ್ನ ರಾಷ್ಟ್ರದಲ್ಲಿ ಹೊಂದಿದ್ದನು. ರಾಷ್ಟ್ರದಲ್ಲಿ ಶಾಂತಿ ಮತ್ತು ಕಾನೂನನ್ನು ಪಾಲನೆ ಮಾಡುವುದು ಅವನ ಕರ್ತವ್ಯವಾಗಿತ್ತು. ರಾಷ್ಟ್ರಪತಿಯು ತನ್ನ ರಾಷ್ಟ್ರದಲ್ಲಿರುವ ಸಣ್ಣಪುಟ್ಟ ಸಾಮಂತರು ಹಾಗೂ ಇನ್ನಿತರ ಅಧಿಕಾರಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕಾಗಿತ್ತು. ರಾಷ್ಟ್ರಪತಿಯು ಒಬ್ಬ ದಂಡನಾಯಕನಾಗಿದ್ದು ಅವನ ಅಧೀನದಲ್ಲಿ ಸಾಕಷ್ಟು ಸೈನ್ಯವನ್ನು ಹೊಂದಿದ್ದನು. ಇದರ ಜೊತೆಗೆ ಹಣಕಾಸಿನ ಆಡಳಿತವನ್ನು ನಿರ್ವಹಿಸಬೇಕಾಗಿತ್ತು. ರಾಷ್ಟ್ರದಲ್ಲಿ ಕಂದಾಯವನ್ನು ವಸೂಲಿ ಮಾಡಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿತ್ತು.

ರಾಷ್ಟ್ರಗಳನ್ನು ಮತ್ತೆ ವಿಷಯಗಳನ್ನಾಗಿ ವಿಂಗಡಿಸಲಾಗಿತ್ತು. ಈ ವಿಷಯವನ್ನು ಆಧುನಿಕ ಕಾಲದ ಜಿಲ್ಲೆಗೆ ಹೋಲಿಸಬಹುದಾಗಿದೆ. ಈ ವಿಷಯದ ಮುಖ್ಯಸ್ಥನಾಗಿದ್ದವನು ವಿಷಯಪತಿ.

ವಿಷಯಗಳನ್ನು ಭುಕ್ತಿಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಭುಕ್ತಿಯು 50 ರಿಂದ 70 ಹಳ್ಳಿಗಳನ್ನು ಹೊಂದಿತ್ತು. ಭುಕ್ತಿಯ ಮುಖ್ಯಸ್ಥ ಭೋಗಪತಿ. ಭೋಗಪತಿಯು ಕೂಡ ಅನೇಕ ಕೆಲಸಗಳನ್ನು ನಿರ್ವಹಿಸಬೇಕಾಗಿತ್ತು. ಆದರೆ ಅವನ ಮುಖ್ಯ ಕೆಲಸ ಪ್ರಮುಖವಾಗಿ ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ತನ್ನ ಅಧೀನದಲ್ಲಿದ್ದ ಅಧಿಕಾರಿಗಳ ಸಹಾಯದಿಂದ ಕೆಲಸ ನಿರ್ವಹಿಸಬೇಕಾಗಿತ್ತು. ಅವನ ಅಧೀನದಲ್ಲಿದ್ದ ಅಧಿಕಾರಿಗಳೆಂದರೆ ನಾಲಗೌಂಡರು ಅಥವಾ ದೇಶಗ್ರಾಮಕೂಟರು. ಅವರ ಸೇವೆಗೆ ಭೂಕಂದಾಯ ರಹಿತ ಭೂಮಿಯನ್ನು ನೀಡುತ್ತಿದ್ದರು.

### 15.11.7 ಸ್ಥಳೀಯ ಆಡಳಿತ

ಗ್ರಾಮದ ಆಡಳಿತವನ್ನು ನಿರ್ವಹಿಸುತ್ತಿದ್ದವರು ಗ್ರಾಮದ ಮುಖ್ಯಸ್ಥ. ಅವನ ಸಹಾಯಕ್ಕೆ ಕರಣಿಕನಿರುತ್ತಿದ್ದನು. ಈ ಹುದ್ದೆಗಳು ಸಾಮಾನ್ಯವಾಗಿ ವಂಶ ಪಾರಂಪರ್ಯವಾಗಿದ್ದವು. ಗ್ರಾಮದ ಗಾವುಂಡನು ಗ್ರಾಮದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾಗಿತ್ತು. ಅವನು ಕೂಡ ಒಂದು ಸಣ್ಣ ದಳವನ್ನು ಹೊಂದಿರುತ್ತಿದ್ದನು.

ಸ್ಥಳೀಯ ಸಂಸ್ಥೆಗಳು ಪ್ರಗತಿ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಗ್ರಾಮ ಸಂಸ್ಥೆಗಳು ಗ್ರಾಮದ ಆಡಳಿತವನ್ನು ನಿರ್ವಹಿಸುತ್ತಿದ್ದವು. ಪ್ರತಿಯೊಂದು ಗ್ರಾಮದಲ್ಲೂ ಗ್ರಾಮ ಸಭೆಯಿತ್ತು. ಗ್ರಾಮ ಸಭೆಯ ಸದಸ್ಯರನ್ನು ಆಯ್ಕೆ ಮಾಡಲು ತಮಿಳು ನಾಡಿನಲ್ಲಿ ಆಚರಣೆಯಲ್ಲಿದ್ದ ಚುನಾವಣಾ ಪದ್ಧತಿಯಿರಲಿಲ್ಲ. ಸಾಮಾನ್ಯವಾಗಿ ವಯೋವೃದ್ಧರನ್ನು, ಅನುಭವಿಗಳನ್ನು, ಸದಸ್ಯರಾಗಿ ಆರಿಸಲಾಗುತ್ತಿತ್ತು. ಗ್ರಾಮ ಸಭೆ ಸದಸ್ಯರನ್ನು ಗ್ರಾಮ ಮಹತ್ತರ ಅಥವಾ ಗ್ರಾಮದ ಮಹಾಜನರು ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಗ್ರಾಮ ಸಭೆಗಳು ದೇವಾಲಯಗಳ ರಸ್ತೆ ಮತ್ತು ಕೆರೆ ಕುಂಟೆಗಳ ದುರಸ್ತು, ಆದಾಯ ವೆಚ್ಚಗಳ ಹಾಗೂ ನ್ಯಾಯದ ನಿರ್ವಹಣೆ ಮೊದಲಾದ ಜವಾಬ್ದಾರಿಯುತ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಸರ್ಕಾರಕ್ಕೆ ಸಲ್ಲಬೇಕಾಗಿದ್ದ ತೆರಿಗೆಯನ್ನು ಸಂಗ್ರಹಿಸಿ ಕಳುಹಿಸಿಕೊಡುವ ಮತ್ತು ಸ್ಥಳೀಯ ವ್ಯವಹಾರದ ಲೆಕ್ಕ ಪತ್ರ ದಾಖಲೆಗಳನ್ನು ಕ್ರಮಬದ್ಧವಾಗಿ ಇಡುವ ಜವಾಬ್ದಾರಿಯನ್ನು ಗ್ರಾಮ ಮುಖಂಡರು

ನಿರ್ವಹಿಸುತ್ತಿದ್ದರು. ಗ್ರಾಮ ಮುಖಂಡರನ್ನು ಗವುಂಡ, ಹೆಗ್ಗಡೆ, ಪಟೇಲ, ಕುಲಕರ್ಣಿ ಎಂಬ ಹೆಸರುಗಳಿಂದ ಕರೆಯಲಾಗಿತ್ತು. ಗ್ರಾಮಾಧಿಕಾರಿಗಳನ್ನು ಸರ್ಕಾರದ ಅಧಿಕಾರಿಗಳೆಂದು ಪರಿಗಣಿಸಲಾಗಿತ್ತು. ಅವರ ಸೇವೆಗಾಗಿ ಭೂಮಿಯನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆ ದತ್ತಿ ನೀಡುವ ಪದ್ಧತಿಯಿತ್ತು.

### 15.11.8 *ಸೈನ್ಯದ ಆಡಳಿತ*

ಸಾಮ್ರಾಜ್ಯಕ್ಕೆ ಒಂದು ಪ್ರಬಲ ಹಾಗೂ ಸುಸಂಘಟಿತ ಸೈನ್ಯದ ಅವಶ್ಯಕತೆ ಸದಾ ಇತ್ತು. ರಾಷ್ಟ್ರಕೂಟರು ಹೆಚ್ಚು ಸಾಮರ್ಥ್ಯದಿಂದ ಕೂಡಿದ್ದ ಒಂದು ದೊಡ್ಡ ಸೈನ್ಯವನ್ನು ಹೊಂದಿದ್ದರು. ಆದರೆ ಅವರ ಸೈನ್ಯದ ಸಂಖ್ಯೆ ಎಷ್ಟಿತ್ತೆಂಬುದರ ಬಗ್ಗೆ ಮಾಹಿತಿ ದೊರಕುವುದಿಲ್ಲ. ಅವರ ಸೈನ್ಯವು ಕಾಲ್ದಳ, ಅಶ್ವದಳ ಮತ್ತು ಆನೆಗಳಿಂದ ಕೂಡಿತ್ತು. ಆಲ್ತೇಕರ್ ಅವರು ರಾಷ್ಟ್ರಕೂಟ ಸೈನ್ಯ ಐದು ಲಕ್ಷಕ್ಕಿಂತ ಕಡಿಮೆ ಇರಲಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಸೈನ್ಯದ ಬಹುಭಾಗ ರಾಜಧಾನಿಯಲ್ಲಿ ಬೀಡುಬಿಟ್ಟಿರುತ್ತಿತ್ತು. ಇದರ ಜೊತೆಗೆ ಸಾಮ್ರಾಜ್ಯದ ಇನ್ನುಳಿದ ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಸೈನ್ಯವನ್ನಿಡಲಾಗಿತ್ತು. ದಕ್ಷಿಣದಲ್ಲಿ ಬನವಾಸಿಯ ಪ್ರಾಂತಾಧಿಕಾರಿಯ ನಾಯಕತ್ವದಲ್ಲಿತ್ತು. ಅದೇ ರೀತಿ ಉತ್ತರದಲ್ಲಿ ಗುಜರಾತಿನ ಪ್ರಾಂತಾಧಿಕಾರಿಯ ನೇತೃತ್ವದಲ್ಲಿ ಒಂದು ಭಾಗ ಸೈನ್ಯವಿತ್ತು. ಸೈನ್ಯದಲ್ಲಿ ಎಲ್ಲಾ ಧರ್ಮದವರು ಸೇವೆ ಸಲ್ಲಿಸುತ್ತಿದ್ದರು. ಬ್ರಾಹ್ಮಣರು ಮತ್ತು ಜೈನಧರ್ಮದವರು ಕೂಡ ಇದ್ದರು. ಪ್ರಸಿದ್ಧ ದಂಡ ನಾಯಕರುಗಳಾದ ಬಂಕೇಶ ಮತ್ತು ಶ್ರೀ ವಿಜಯ ಜೈನಧರ್ಮದವರಾಗಿದ್ದರು.

ಸಮಕಾಲೀನ ಮುಸ್ಲಿಮ್ ಬರಹಗಾರರು ರಾಷ್ಟ್ರಕೂಟರು, ಪಾಲರು ಮತ್ತು ಗೂರ್ಜರ -ಪ್ರತಿಹಾರರು ಪ್ರಬಲ ಕಾಲ್ದಳ, ಅಶ್ವದಳ ಮತ್ತು ಗಜದಳಗಳನ್ನು ಹೊಂದಿದ್ದರೆಂದು ವಿವರಿಸಿದ್ದಾರೆ. ಬಲ್ಹರನ (ರಾಷ್ಟ್ರಕೂಟ ಚಕ್ರವರ್ತಿ)ಬಗ್ಗೆ ಅಲ್-ಮಸೂದಿಯು ಈ ರೀತಿ ವಿವರಿಸಿದ್ದಾನೆ; "ಅವನು ಬೇಕಾದಷ್ಟು ಕುದುರೆಗಳು ಮತ್ತು ಆನೆಗಳನ್ನು ಹೊಂದಿದ್ದನು ಆದರೆ ಅವನ ಪ್ರಮುಖ ಬಲ ಕಾಲ್ದಳದಿಂದ ಕೂಡಿತ್ತು".

## 15.12 ಆರ್ಥಿಕ ಪರಿಸ್ಥಿತಿ

ರಾಷ್ಟ್ರಕೂಟರು ಒಂದು ವಿಶಾಲವಾದ ಸಾಮ್ರಾಜ್ಯವನ್ನು ನಿರ್ಮಿಸಿದರು. ಸಾಮ್ರಾಜ್ಯದ ಸುಭದ್ರತೆ ಯಾವಾಲೂ ಆರ್ಥಿಕ ಸಮೃದ್ಧಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ರಾಷ್ಟ್ರಕೂಟರ ಕಾಲದ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ.

### 15.12.1 *ವ್ಯವಸಾಯ*

ರಾಷ್ಟ್ರಕೂಟ ಸಾಮ್ರಾಜ್ಯದ ಕಾಲದಲ್ಲಿ ಪ್ರಮುಖವಾಗಿ ಆದಾಯ ರಾಜ್ಯದ ಬೊಕ್ಕಸಕ್ಕೆ ರೈತರು ನೀಡುತ್ತಿದ್ದ ಕಂದಾಯದ ರೂಪದಲ್ಲಿ ಬರುತ್ತಿತ್ತು. ವ್ಯವಸಾಯದ ಜೊತೆ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯದಿಂದಲೂ ಸಾಕಷ್ಟು ಆದಾಯ ಬರುತ್ತಿತ್ತು. ದಖನ್ನಿನಲ್ಲಿ ಈ ಕಾಲದಲ್ಲಿ ವ್ಯವಸಾಯ ಜನರ ಮುಖ್ಯ ಕಸುಬಾಗಿತ್ತು. ಪ್ರಮುಖವಾಗಿ ಜೋಳ, ಬಾಜ್ರ, ಎಣ್ಣೆ ಕಾಳುಗಳನ್ನು ರೈತರು ಬೆಳೆಯುತ್ತಿದ್ದರು. ಹತ್ತಿಯು ಪ್ರಮುಖವಾದ ವಾಣಿಜ್ಯ ಬೆಳೆಯಾಗಿತ್ತು. ಹತ್ತಿಯನ್ನು ದಕ್ಷಿಣ ಗುಜರಾತ್, ಖಾಂದೇಶ ಮತ್ತು ದಖನ್ನಿನ ಇನ್ನೂ ಹಲವು ಸ್ಥಳಗಳಲ್ಲಿ ಪ್ರಮುಖವಾಗಿ ಬೆಳೆಯುತ್ತಿದ್ದರು. ಕೊಂಕಣದಲ್ಲಿ ಅಡಿಕೆ, ತೆಂಗು ಮತ್ತು ಭತ್ತವನ್ನು ಯಥೇಚ್ಛವಾಗಿ ಬೆಳೆಯುತ್ತಿದ್ದರು. ಪಶ್ಚಿಮ ತೀರದ ಘಟ್ಟ ಪ್ರದೇಶ ಮತ್ತು ಕರ್ನಾಟಕದ ಅನೇಕ ಭಾಗಗಳಲ್ಲಿ ಎಬೊನಿ, ತೇಗ ಮತ್ತು ಗಂಧದ ಮರಗಳು ಹೇರಳವಾಗಿ ಬೆಳೆದಿದ್ದು ಸಾಮ್ರಾಜ್ಯಕ್ಕೆ ಹೆಚ್ಚಿನ ಸಂಪತ್ತನ್ನು ಒದಗಿಸುತ್ತಿದ್ದವು. ಈ ಮರಗಳನ್ನು ಹೊರದೇಶಗಳಿಗೆ ರಫ್ತು ಮಾಡುವುದರ ಜೊತೆಗೆ ಸಾಂಬಾರ ಪದಾರ್ಥಗಳು, ಸುಗಂಧ ದ್ರವ್ಯಗಳು, ಉತ್ತಮ ದರ್ಜೆಯ ಮಸ್ಲಿನ್ ಬಟ್ಟೆಯನ್ನು ರಫ್ತು ಮಾಡುತ್ತಿದ್ದರು. ನೀರಾವರಿ ವ್ಯವಸ್ಥೆಯ ಬಗ್ಗೆ ನಮಗೆ ಶಾಸನಗಳು ಹೆಚ್ಚು ಮಾಹಿತಿಯನ್ನು ಒದಗಿಸುವುದಿಲ್ಲ. ಆದರೂ ಕೂಡ ಈ ಕಾಲದ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಕೆರೆಗಳನ್ನು ನಿರ್ಮಾಣ ಮಾಡಿದುದರ ಬಗ್ಗೆ ವಿವರಿಸುತ್ತವೆ. ದನ-ಕುರಿ ಸಾಕಾಣಿಕೆಯು ಕೂಡ ಮುಖ್ಯ ಕಸುಬಾಗಿತ್ತು.

### 15.12.2 *ಕೈಗಾರಿಕೆ*

ಅನೇಕ ಜನರು ಕುಂಬಾರಿಕೆ, ನೆಯ್ಗೆ, ಮರ ಕೆಲಸ, ಕಬ್ಬಿಣದ ಕೆಲಸ, ದಂತ ಕೆತ್ತುವ ಕೆಲಸ ಮೊದಲಾದ ಕಸುಬುಗಳಲ್ಲಿ ತೊಡಗಿದ್ದರು. ಅದೇ ರೀತಿ ಎಣ್ಣೆ ಉತ್ಪಾದನೆಯು ಮತ್ತೊಂದು ಪ್ರಮುಖ ಉದ್ದಿಮೆಯಾಗಿತ್ತು. ಪ್ರಶಸ್ತ ಲೋಹಗಳ ಗಣಿಗಳು ಕೂಡ

ಇದ್ದವು. ತಾಮ್ರ ಮತ್ತು ಚಿನ್ನದ ಅದಿರು ತೆಗೆಯುವ ಗಣಿಗಳು ಇದ್ದವು. ಈ ಗಣಿಗಳು ಸಾಮ್ರಾಜ್ಯದ ಬೊಕ್ಕಸಕ್ಕೆ ಅಧಿಕ ಲಾಭವನ್ನು ತರುತ್ತಿದ್ದವು. ಕಡಪ, ಬಳ್ಳಾರಿ, ಕರ್ನೂಲು ಮತ್ತು ಗೋಲ್ಕೊಂಡದ ಹತ್ತಿರವಿದ್ದ ಕಣಿವೆಯಲ್ಲಿ ಉತ್ತಮ ಮಟ್ಟದ ವಜ್ರಗಳು ದೊರಕುತ್ತಿದ್ದವು. ಮಾನ್ಯಖೇಟವು ಚಿನ್ನದ ಆಭರಣಗಳ ಮತ್ತು ಅಮೂಲ್ಯ ಲೋಹಗಳ ವ್ಯಾಪಾರದ ಪ್ರಮುಖ ಕೇಂದ್ರವಾಗಿತ್ತು.

### *15.12.3 ವ್ಯಾಪಾರ ಮತ್ತು ವಾಣಿಜ್ಯ*

ರಾಷ್ಟ್ರಕೂಟರ ಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯವು ಕೂಡ ಅತ್ಯಂತ ಹೆಚ್ಚಿನ ಬಿರುಸಿನಿಂದ ಕೂಡಿತ್ತು. ತೆರಿಗೆಯ ರೂಪದಲ್ಲಿ ಹೆಚ್ಚು ಆದಾಯವನ್ನೂ ಸರ್ಕಾರ ಪಡೆಯುತ್ತಿತ್ತು. ಬ್ರೋಚ್, ತೊಣಾರ, ಕಲ್ಯಾಣ, ಸೇಪರಿ, ಮಿನ್ನಾಗರ, ಥಾಣ ಮತ್ತು ಇನ್ನೂ ಅನೇಕ ಸ್ಥಳಗಳು ವಿದೇಶಿ ವ್ಯಾಪಾರದ ಕೇಂದ್ರಗಳಾಗಿದ್ದವು. ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಬಿರುಸಿನ ವ್ಯಾಪಾರ ನಡೆಯುತ್ತಿತ್ತು. ಅದರಲ್ಲೂ ರಾಷ್ಟ್ರಕೂಟರ ಕಾಲದಲ್ಲಿ ಅರಬ್ ದೇಶಗಳೊಡನೆ ಹೆಚ್ಚು ವ್ಯಾಪಾರ ಸಂಬಂಧವಿತ್ತು. ಪ್ರಶಸ್ತ ಲೋಹಗಳು. ಚಾಪೆ, ಚರ್ಮ, ನೀಲಿ, ಸುಗಂಧ ದ್ರವ್ಯಗಳು, ಅಡಿಕೆ, ಸಾಂಬಾರ ಪದಾರ್ಥಗಳು ಉತ್ತಮ ಗುಣಮಟ್ಟದ ತೇಗ, ಗಂಧದ ಮರ, ದಂತ ಮತ್ತು ಸಾಸಿವೆ ಎಣ್ಣೆಯನ್ನು ರಾಷ್ಟ್ರಕೂಟ ಸಾಮ್ರಾಜ್ಯದಿಂದ ಅರಬ್ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಖರ್ಜೂರ, ಇಟಲಿಯ ದ್ರಾಕ್ಷಾರಸ, ಚಿನ್ನದ ನಾಣ್ಯಗಳು, ತವರ, ಸೀಸ ಮೊದಲಾದ ವಸ್ತುಗಳನ್ನು ದಕ್ಷಿಣ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತಿತ್ತು. ಉತ್ತಮ ತಳಿಯ ಕುದುರೆಯನ್ನು ರಾಷ್ಟ್ರಕೂಟರು ಆಮದು ಮಾಡಿಕೊಳ್ಳುತ್ತಿದ್ದರು. ಸುಲೈಮಾನನು ಅಂದಿನ ದಿನಗಳಲ್ಲಿ ಭಾರತದಲ್ಲಿ ತಯಾರಾಗುತ್ತಿದ್ದ ಉತ್ತಮ ಗುಣಮಟ್ಟದ ಹತ್ತಿ ಬಟ್ಟೆಯ ಬಗ್ಗೆ ಪ್ರಶಂಸಿಸಿ ಬರೆದಿದ್ದಾನೆ. ಇಡೀ ಅರಬ್ ದೇಶಗಳಲ್ಲೆಲ್ಲ ಈ ಬಟ್ಟೆಯನ್ನು ಮಾರಾಟ ಮಾಡಲಾಗುತ್ತಿತ್ತು.

ಅರಬ್ಬರು ಆಮದು ಮಾಡಿಕೊಳ್ಳುತ್ತಿದ್ದ ತೇಗದ ಮರವನ್ನು ಮನೆಕಟ್ಟುವುದಕ್ಕೋಸ್ಕರ ಬಳಸಿಕೊಳ್ಳುತ್ತಿದ್ದುದಲ್ಲದೆ ಹಡಗು ನಿರ್ಮಾಣಕ್ಕೂ ಬಳಸುತ್ತಿದ್ದರು. ಅಲ್‌ಇಸ್ತಕ್ರಿ ಭಾರತದಿಂದ ಅರಬ್ಬರು ಆಮದು ಮಾಡಿಕೊಳ್ಳುತ್ತಿದ್ದ ಔಷಧಿ, ಸುಗಂಧ ದ್ರವ್ಯ ಮತ್ತು ಸಾಂಬಾರ ಪದಾರ್ಥಗಳ ಬಗ್ಗೆ ವಿವರಿಸಿರುವನು. ಅರಬ್ಬರು ಭಾರತದಿಂದ ಕಪ್ಪು ಉಪ್ಪನ್ನು ಕೂಡ ಆಮದು ಮಾಡಿಕೊಳ್ಳುತ್ತಿದ್ದರು. ಕ್ಯಾಂಬೆಯಲ್ಲಿ ತಯಾರಾಗುತ್ತಿದ್ದ ಉತ್ತಮ ದರ್ಜೆಯ ಪಾದರಕ್ಷೆಗಳಿಗೆ ಅರಬ್ಬರಿಂದ ಅಪಾರ ಬೇಡಿಕೆ ಇತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ ಅರಬ್ ದೇಶಗಳಲ್ಲಿ ಭಾರತದಲ್ಲಿ ತಯಾರಾಗುತ್ತಿದ್ದ ವಸ್ತುಗಳಿಗೆ ಅಪಾರ ಬೇಡಿಕೆ ಇತ್ತು.

ದೇಶಿಯ ವ್ಯಾಪಾರದಲ್ಲಿ ಸಂತೆಗಳ ಪಾತ್ರ ಬಹಳ ಮುಖ್ಯವಾದುದು. ಹಳ್ಳಿಗಳಲ್ಲಿ ಸಂತೆಗಳು ನಿಗದಿತ ದಿನಗಳಲ್ಲಿ ನಡೆಯುತ್ತಿದ್ದ ರೈತರಿಗೆ ಬಹಳ ಉಪಯುಕ್ತವಾಗಿತ್ತು. ಅವರು ತಾವು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡುವುದರ ಜೊತೆಗೆ ತಮಗೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಈ ಸಂತೆಗಳು ಒಂದು ಅವಕಾಶವನ್ನು ಒದಗಿಸಿಕೊಡುತ್ತಿದ್ದವು. ಧಾರ್ಮಿಕ ಕ್ಷೇತ್ರಗಳಲ್ಲೂ ಈ ಸಂತೆಗಳು ನಡೆಯುತ್ತಿದ್ದವು. ದನದ ಜಾತ್ರೆಗಳು ಕೂಡ ನಡೆಯುತ್ತಿದ್ದವು.

ಸಾಮಾನ್ಯವಾಗಿ ಈ ಕಾಲದಲ್ಲಿ ವಸ್ತು ವಿನಿಮಯ ಪದ್ಧತಿ ಸರ್ವೇ ಸಾಮಾನ್ಯವಾಗಿತ್ತು. ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯವನ್ನು ಕೂಡ ಬಹುತೇಕ ವಸ್ತುವಿನ ರೂಪದಲ್ಲಿ ನೀಡಲಾಗುತ್ತಿತ್ತು. ರಾಷ್ಟ್ರಕೂಟರ ಅನೇಕ ಶಾಸನಗಳು ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳ ಬಗ್ಗೆ ಉಲ್ಲೇಖಿಸುತ್ತವೆ. ಡ್ರಮ್ಮ, ಸುವರ್ಣ, ಗದ್ಯಾಣ ಮತ್ತು ಕಲಾಂಜುಗಳ ಬಗ್ಗೆ ಉಲ್ಲೇಖಿಸುತ್ತವೆ. ನಾಲ್ಕನೆಯ ಗೋವಿಂದನ ಕ್ಯಾಂಬೆ ತಾಮ್ರ ಪತ್ರಗಳು ಏಳು ಲಕ್ಷ ರೂ ಸುವರ್ಣಗಳ ಕಂದಾಯವನ್ನು ನೀಡುತ್ತಿದ್ದ 1400 ಹಳ್ಳಿಗಳ ಬಗ್ಗೆ ವಿವರಿಸುತ್ತವೆ. ಶಾಸನಗಳು ಈ ನಾಣ್ಯಗಳ ಬಗ್ಗೆ ಉಲ್ಲೇಖಿಸಿದ್ದರು ಕೂಡ ರಾಷ್ಟ್ರಕೂಟರ ಯಾವ ನಾಣ್ಯಗಳು ನಮಗೆ ದೊರಕಿಲ್ಲ.

### *15.12.4 ಶ್ರೇಣಿಗಳು*

ರಾಷ್ಟ್ರಕೂಟರ ಕಾಲದ ಶಾಸನಗಳು ಶ್ರೇಣಿಗಳ ಬಗ್ಗೆ ಮಾಹಿತಿಯನ್ನು ನೀಡುವುದಿಲ್ಲ. ಆದರೆ ನಮಗೆ ದೊರಕತಕ್ಕ ಸಮಕಾಲೀನ ಆಧಾರಗಳ ಮೇಲೆ ಶ್ರೇಣಿಗಳ ಚಟುವಟಿಕೆಗಳ ಬಗ್ಗೆ ವಿವರಿಸಬಹುದು. ಈ ಶ್ರೇಣಿಗಳು ಆಧುನಿಕ ಬ್ಯಾಂಕ್‌ಗಳ ರೀತಿ ಕೆಲಸ ನಿರ್ವಹಿಸುತ್ತಿದ್ದವು. ಪ್ರತಿಯೊಂದು ವೃತ್ತಿಯ ಕಸುಬುದಾರರು ತಮ್ಮದೇ ಆದ ಶ್ರೇಣಿಯನ್ನು ಹೊಂದಿದ್ದರು. ಈ ಶ್ರೇಣಿಗಳು ಕೈಗಾರಿಕೆ ಮತ್ತು ವ್ಯಾಪಾರವನ್ನು ನಿಯಂತ್ರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಈ ಶ್ರೇಣಿಗಳು ಠೇವಣಿಯನ್ನು ಪಡೆಯುತ್ತಿದ್ದವು. ಮತ್ತು ಅದೇ ರೀತಿ ಸಾಲವನ್ನು ಕೂಡ ನೀಡುತ್ತಿದ್ದವು. ಕ್ರಿ.ಶ. 775 ರ ಒಂದು ಶಾಸನ ನೇಯ್ಗೆದಾರರ ಶ್ರೇಣಿಗೆ ಸಂಬಂಧಿಸಿದಂತೆ

ವಿವರಿಸುತ್ತದೆ. ಕ್ರಿ.ಶ. 880 ರ ಮೂಲಗುಂದ ಶಾಸನ ಶ್ರೇಣಿಗಳ ಮುಖ್ಯಸ್ಥರು ಮಾಡಿದ ದತ್ತಿಗಳ ಬಗ್ಗೆ ವಿವರಿಸುತ್ತವೆ. ವ್ಯಾಪಾರಿಗಳ, ಹೂವುಕಟ್ಟುವವರ, ಎಣ್ಣೆ ಉತ್ಪಾದಿಸುವವರ, ಬುಟ್ಟಿ ತಯಾರಿಸುವವರ, ಚಾಪೆ ಎಣೆಯುವವರ, ಇನ್ನು ಮೊದಲಾದ ವೃತ್ತಿಯವರ ಶ್ರೇಣಿಗಳು ಇದ್ದವು.

ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ದಖನ್‌ನಲ್ಲಿ ಆರ್ಥಿಕ ಸುಭಿಕ್ಷೆ ಇತ್ತೆಂಬುದು ಮೇಲಿನ ಅಂಶಗಳಿಂದ ತಿಳಿದು ಬರುತ್ತದೆ. ರಾಷ್ಟ್ರಕೂಟರ ರಾಜಕೀಯ ಸ್ಥಿರತೆಯನ್ನು ಸ್ಥಾಪಿಸಿ ಆರ್ಥಿಕ ಅಭಿವೃದ್ಧಿಯ ಕಡೆಗೂ ಗಮನಹರಿಸಿದ್ದರು. ಆದ್ದರಿಂದ ಸಾಮ್ರಾಜ್ಯದ ಎಲ್ಲ ಕ್ಷೇತ್ರಗಳಲ್ಲೂ ಬೆಳವಣಿಗೆ ಉಂಟಾಗಲು ಸಾಧ್ಯವಾಯಿತು.

## 15.13 ಸಂಕ್ಷಿಪ್ತ ಅವಲೋಕನ

ಕ್ರಿ.ಶ. 757 ರಲ್ಲಿ ಬಾದಾಮಿ ಚಾಲುಕ್ಯರ ಅಧಿಕಾರವನ್ನು ಅಂತ್ಯಗೊಳಿಸಿ ದಖನ್‌ನಲ್ಲಿ ರಾಷ್ಟ್ರಕೂಟರು ತಮ್ಮ ಅಧಿಕಾರವನ್ನು ಸ್ಥಾಪಿಸಿ ಕ್ರಿ.ಶ. 973 ರವರೆಗೆ ಆಳ್ವಿಕೆ ನಡೆಸಿದರು. ರಾಷ್ಟ್ರಕೂಟ ಚಕ್ರವರ್ತಿಗಳು ಒಂದು ಪ್ರಬಲ ಹಾಗೂ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಧ್ರುವ, ಮೂರನೆಯ ಗೋವಿಂದ, ಅಮೋಘವರ್ಷ, ಮೂರನೆಯ ಇಂದ್ರ ಮತ್ತು ಮೂರನೆಯ ಕೃಷ್ಣ ರಾಷ್ಟ್ರಕೂಟರ ಪ್ರಮುಖ ಚಕ್ರವರ್ತಿಗಳು. ರಾಷ್ಟ್ರಕೂಟರು ದಕ್ಷಿಣ ಭಾರತದ ಎಲ್ಲ ಸಮಕಾಲೀನ ರಾಜಮನೆತನಗಳನ್ನು ಸದೆಬಡಿದು ತಮ್ಮ ಪರಮಾಧಿಕಾರವನ್ನು ಸ್ಥಾಪಿಸಿದರು. ಅದೇ ರೀತಿ ಅವರು ಉತ್ತರ ಭಾರತದ ಮೇಲೂ ದಂಡೆತ್ತಿ ಹೋಗಿ ಗೂರ್ಜರ ಪ್ರತೀಹಾರ ಮತ್ತು ಪಾಲ ಮನೆತನದವರನ್ನು ಸದೆಬಡಿದು ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿದರು. ಆದರೆ ಉತ್ತರದಲ್ಲಿ ಗೆದ್ದ ರಾಜ್ಯವನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲಿಲ್ಲ. ನರ್ಮದಾ ನದಿಯಿಂದ ಕಾವೇರಿ ನದಿಯವರೆಗೂ ಅವರ ಸಾಮ್ರಾಜ್ಯ ವಿಸ್ತರಿಸಿತ್ತು. ಇಂತಹ ವಿಶಾಲವಾದ ಸಾಮ್ರಾಜ್ಯದಲ್ಲಿ ಸಮರ್ಥ ಆಡಳಿತವನ್ನು ಸ್ಥಾಪಿಸಿದರು. ಆಡಳಿತಕ್ಕೋಸ್ಕರ ರಾಷ್ಟ್ರಕೂಟ ಸಾಮ್ರಾಜ್ಯ ಪ್ರಭುತ್ವದ ನೇರ ಆಡಳಿತಕ್ಕೊಳಪಟ್ಟ ಪ್ರದೇಶ ಮತ್ತು ಸಾಮಂತ ರಾಜರ ಆಳ್ವಿಕೆಗೆ ಒಳಪಟ್ಟ ಪ್ರದೇಶ ಎಂಬುದಾಗಿ ವಿಭಾಗಿಸಲ್ಪಟ್ಟಿತ್ತು. ನೇರ ಆಡಳಿತಕ್ಕೊಳಪಟ್ಟ ಪ್ರದೇಶದಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವುದರ ಮೂಲಕ ಆಡಳಿತ ನಡೆಸುತ್ತಿದ್ದರು. ಇನ್ನುಳಿದ ಪ್ರದೇಶಗಳು ಸಾಮಂತರ ಹಿಡಿತದಲ್ಲಿದ್ದವು. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಅಭಿವೃದ್ಧಿ ಹೊಂದಿದ್ದವು. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಪ್ರಮುಖವಾಗಿ ಅರಬ್ ದೇಶಗಳೊಡನೆ ದಕ್ಷಿಣ ಭಾರತ ಹೆಚ್ಚಿನ ವ್ಯಾಪಾರ ಸಂಬಂಧವನ್ನು ಹೊಂದಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ ರಾಷ್ಟ್ರಕೂಟ ಸಾಮ್ರಾಜ್ಯ ಸುಭಿಕ್ಷೆಯಿಂದ ಕೂಡಿತ್ತು.

## 15.14 ಮಾದರಿ ಪ್ರಶ್ನೆಗಳು

1. ರಾಷ್ಟ್ರಕೂಟ ಚಕ್ರವರ್ತಿಗಳ ಉತ್ತರ ಭಾರತದ ದಂಡಯಾತ್ರೆಗಳನ್ನು ಕುರಿತು ಬರೆಯಿರಿ.
2. ಅಮೋಘವರ್ಷನ ಜೀವನ ಮತ್ತು ಸಾಧನೆಗಳನ್ನು ಕುರಿತು ವಿಶ್ಲೇಷಿಸಿ.
3. ರಾಷ್ಟ್ರಕೂಟರ ಆಡಳಿತದ ಪ್ರಮುಖ ಲಕ್ಷಣಗಳನ್ನು ಕುರಿತು ಚರ್ಚಿಸಿ.
4. ರಾಷ್ಟ್ರಕೂಟರ ಕಾಲದಲ್ಲಿ ದಖನ್ ಪ್ರದೇಶದ ಆರ್ಥಿಕ ಪರಿಸ್ಥಿತಿ ಹೇಗಿತ್ತೆಂಬುದನ್ನು ವಿವರಿಸಿ.

## 15.15 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Altekar .A.S. : Rashtrakutas and their Times
2. Madan .A.P. : The History of the Rashtrakutas
3. Gopal B.R. (Ed) : The Rashtrakutas of Malkhed, Mysore, 1994
4. Desai .P.B. (Ed) : A History of Karnataka, Dharwad 1981.
5. Prof. Sheik Ali .B. and Prof. Ranga swamaiah .G.R. : ದಕ್ಷಿಣ ಭಾರತದ ಇತಿಹಾಸ, ಮೈಸೂರು
6. Prof. Basavaraja .K.R. : History and Culture of Karnataka, Dharwad 1984.



ಪ್ರೊ. ಶಿವಣ್ಣ

## ಟಿಪ್ಪಣಿಗಳು

# ಘಟಕ - 16

# ರಾಷ್ಟ್ರಕೂಟರ ಕಾಲದ ಸಾಂಸ್ಕೃತಿಕ ಬೆಳವಣಿಗೆ

*ರಚನೆ*

16.0 ಉದ್ದೇಶಗಳು

16.1 ಪೀಠಿಕೆ

16.2 ಸಮಾಜ

16.3 ವಿದ್ಯಾಭ್ಯಾಸ

- 16.3.1 ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳು
- 16.3.2 ಮಠಗಳು ಮತ್ತು ದೇವಸ್ಥಾನಗಳು
- 16.3.3 ಘಟಿಕಗಳು

16.4 ಸಾಹಿತ್ಯ

- 16.4.1 ಸಂಸ್ಕೃತ ಸಾಹಿತ್ಯ
- 16.4.2 ಕನ್ನಡ ಸಾಹಿತ್ಯ

16.5 ಧರ್ಮ

- 16.5.1 ಬೌದ್ಧ ಧರ್ಮ
- 16.5.2 ಜೈನಧರ್ಮ
- 16.5.3 ಹಿಂದೂ ಧರ್ಮ
- 16.5.4 ಇಸ್ಲಾಂ

16.6 ಕಲೆ ಮತ್ತು ವಾಸ್ತು ಶಿಲ್ಪ

- 16.6.1 ಗುಹಾಲಯಗಳು
- 16.6.2 ಕಟ್ಟಡ ಶೈಲಿಯ ದೇವಾಲಯಗಳು

## 16.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ರಾಷ್ಟ್ರಕೂಟರ ಆಳ್ವಿಕೆಗೆ ಸಂಬಂಧಿಸಿದಂತೆ ತಿಳಿದುಕೊಳ್ಳುವ ಅಂಶಗಳೆಂದರೆ

* ಸಮಾಜದ ಮುಖ್ಯ ಲಕ್ಷಣಗಳು
* ವಿದ್ಯಾಭ್ಯಾಸದ ಕೇಂದ್ರಗಳು
* ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆ
* ಜೈನಧರ್ಮ, ಹಿಂದೂ ಧರ್ಮ ಮತ್ತು ಇನ್ನಿತರ ಧರ್ಮಗಳ ಬೆಳವಣಿಗೆ
* ಗುಹಾಲಯಗಳು ಮತ್ತು ಕಟ್ಟಡ ಶೈಲಿಯ ದೇವಸ್ಥಾನಗಳು

## 16.1 ಪೀಠಿಕೆ

ರಾಷ್ಟ್ರಕೂಟರು ತಮ್ಮ ವಿಶಾಲವಾದ ಸಾಮ್ರಾಜ್ಯದಲ್ಲಿ ಒಂದು ಸುಭದ್ರ ಆಡಳಿತವನ್ನು ಸ್ಥಾಪಿಸಿದರು. ಅವರ ಸಾಮ್ರಾಜ್ಯ ಶಾಂತಿ ಮತ್ತು ಸುಭಿಕ್ಷೆಯಿಂದ ಕೂಡಿತ್ತು. ರಾಷ್ಟ್ರಕೂಟ ಚಕ್ರವರ್ತಿಗಳು ಧರ್ಮ, ಸಾಹಿತ್ಯ ಮತ್ತು ಕಲೆಗೆ ವಿಶೇಷವಾದ ಪ್ರೋತ್ಸಾಹ ನೀಡಿದರು. ಎಲ್ಲಾ ಧರ್ಮಗಳ ಪುರೋಭಿವೃದ್ಧಿಗೆ ಕಾರಣರಾದರು. ಅವರು ಧರ್ಮಸಹಿಷ್ಣುಗಳಾಗಿ ಖ್ಯಾತಿಗಳಿಸಿದ್ದಾರೆ. ಅವರ ಕಾಲದಲ್ಲಿ ಜೈನ ಮತ್ತು ಹಿಂದೂ ಧರ್ಮಗಳೆರಡಕ್ಕೂ ಸಮನಾದ ಪ್ರೋತ್ಸಾಹ ನೀಡಿದರು. ಅದೇ ರೀತಿ ಸಾಹಿತ್ಯ ಕ್ಷೇತ್ರದಲ್ಲೂ ಕೂಡ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಸುಪ್ರಸಿದ್ಧ ಗ್ರಂಥಗಳು ರಚಿತವಾದವು. ಕನ್ನಡ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಪರ್ವಕಾಲ. ಭವ್ಯ ದೇವಸ್ಥಾನಗಳನ್ನು ಕೂಡ ರಾಷ್ಟ್ರಕೂಟರು ನಿರ್ಮಿಸಿದರು. ಪ್ರಮುಖವಾಗಿ ಅನೇಕ ಗುಹಾಂತರ ದೇವಾಲಯಗಳು ಈ ಕಾಲದಲ್ಲಿ ನಿರ್ಮಾಣವಾದವು.

## 16.2 ಸಮಾಜ

ರಾಷ್ಟ್ರಕೂಟರ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ಗಮನಿಸಬಹುದಾಗಿದೆ. ಸಾಂಪ್ರದಾಯಿಕವಾಗಿ ಬೆಳೆದು ಬಂದಿದ್ದ ನಾಲ್ಕು ಜಾತಿಗಳು ಈ ಕಾಲದಲ್ಲೂ ಮುಂದುವರಿದವು. ಆದರೆ ಈ ನಾಲ್ಕು ಜಾತಿಗಳಲ್ಲೇ ಒಳಪಂಗಡಗಳು ಹುಟ್ಟಿಕೊಂಡವು. ಹಲವು ಬ್ರಾಹ್ಮಣರು ತಮ್ಮ ವಂಶಪಾರಂಪರ್ಯ ವೃತ್ತಿಯನ್ನು ತ್ಯಜಿಸಿ ಬೇರೆ ಕ್ಷೇತ್ರಗಳಲ್ಲಿ ದುಡಿಯಲು ಪ್ರಾರಂಭಿಸಿದರು. ಅವರು ಸೈನಿಕ ಮತ್ತು ಆಡಳಿತದ ಕೆಲಸಗಳನ್ನು ನಿರ್ವಹಿಸಲು ಪ್ರಾರಂಭಿಸಿದರು. ಯಾವ ಬ್ರಾಹ್ಮಣರು ಅಧ್ಯಯನ, ಭೋದನೆ, ಯಜ್ಞಗಳ ಆಚರಣೆಯಲ್ಲಿ ತೊಡಗಿದ್ದರೊ ಅಂತಹವರನ್ನು ಬ್ರಾಹ್ಮಣರಲ್ಲಿ ಶ್ರೇಷ್ಠರೆಂದು ಪರಿಗಣಿಸಲಾಯಿತು. ಆದರೆ ಇನ್ನುಳಿದ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದ ಬ್ರಾಹ್ಮಣರನ್ನು ಈ ಮೇಲ್ವರ್ಗದ ಬ್ರಾಹ್ಮಣರು ಕೀಳರಿಮೆಯಿಂದ ಕಾಣಲು ಪ್ರಾರಂಭಿಸಿದರು. ಅದೇ ರೀತಿ ಕ್ಷತ್ರಿಯರಲ್ಲೂ ಎರಡು ಶ್ರೇಣಿಯ ಜನರನ್ನು ಕಾಣಬಹುದು. ಸತ್ ಕ್ಷತ್ರಿಯರು ಮತ್ತು ಸಾಮಾನ್ಯ ಕ್ಷತ್ರಿಯರು. ಸತ್ ಕ್ಷತ್ರಿಯರು ಆಳುವ ಮನೆತನಕ್ಕೆ ಮತ್ತು ಶ್ರೀಮಂತ ವರ್ಗಕ್ಕೆ ಸೇರಿದವರಾಗಿದ್ದರು. ಆದರೆ ಸಾಮಾನ್ಯ ಕ್ಷತ್ರಿಯರು ವೈಶ್ಯರ ಅಥವಾ ಶೂದ್ರರ ವೃತ್ತಿಗಳನ್ನು ಅವಲಂಬಿಸಿದ್ದರು. ಆದ್ದರಿಂದ ಸತ್ ಕ್ಷತ್ರಿಯರು ಸಾಮಾನ್ಯ ಕ್ಷತ್ರಿಯರನ್ನು ಕೀಳುಮಟ್ಟದವರೆಂದು ಭಾವಿಸಿದ್ದರು. ವೈಶ್ಯರು ಕೂಡ ಸಂಘಟಿತರಾಗಿ ಮುಂದುವರಿಯಲು ಸಾಧ್ಯವಾಗಲಿಲ್ಲ. ವೇದಾಧ್ಯಯನ ಮತ್ತು ಯಜ್ಞಗಳ ಆಚರಣೆಗಳನ್ನು ಕಡೆಗಣಿಸಿದರು. ಅವರು ಕೂಡ ತಮ್ಮ ವೃತ್ತಿಯಲ್ಲಿ ಬದಲಾವಣೆ ಮಾಡಿಕೊಂಡರು. ಈ ಮೂರು ವರ್ಗಗಳಲ್ಲಿ ಉಂಟಾದ ಬದಲಾವಣೆಗಳನ್ನು ಆ ಕಾಲದ ಸ್ಮೃತಿ ಬರಹಗಾರರು ಮಾನ್ಯ ಮಾಡಿದರು. ಹೊಸ ಸ್ಮೃತಿ ರಚನಾಕಾರರು ಈ ಮೂರು ವರ್ಗದವರು ತಮ್ಮ ವೃತ್ತಿಗಳನ್ನು ಬದಲಾವಣೆ ಮಾಡಿಕೊಳ್ಳಲು ಅನುಮತಿ ನೀಡಿದರು.

ರಾಷ್ಟ್ರಕೂಟರ ಕಾಲದಲ್ಲಿ ದಖನ್ನಿಗೆ ಭೇಟಿ ನೀಡಿದ ಅರಬ್ ಪ್ರವಾಸಿಗರು ಅನೇಕ ಜಾತಿಗಳ ವರ್ಣನೆಯನ್ನು ನೀಡಿದ್ದಾರೆ. ಭಕ್ತಿ ಪಂಥದ ಪ್ರಭಾವದಿಂದಾಗಿ ಶೂದ್ರರ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಬದಲಾವಣೆಗಳನ್ನು ಕಾಣಬಹುದು. ಆಳ್ವಾರರು ಮತ್ತು

ನಾಯನಾರರು ತಮಿಳು ನಾಡಿನಲ್ಲಿ ಭಕ್ತಿ ಪಂಥದ ಪ್ರಚಾರವನ್ನು ಕೈಗೊಂಡರು. ಇವರ ತತ್ವಗಳಿಂದಾಗಿ ಸಮಾಜದಲ್ಲಿದ್ದ ಜಾತಿಗಳ ನಡುವಣ ಅಂತರ ಕಡಿಮೆಯಾಗಲು ಪ್ರಾರಂಭಿಸಿತು. ಶೂದ್ರರ ಸ್ಥಿತಿಗತಿಗಳು ಸುಧಾರಿಸಿದವು. ಶೂದ್ರರು ವೇದಗಳ ಅಧ್ಯಯನ ಮಾಡುವ ಅವಕಾಶದಿಂದ ವಂಚಿತರಾದರು ಕೂಡ, ಕೆಲವು ಸ್ಮಾರ್ತ ಆಚರಣೆಗಳನ್ನು ಕೈಗೊಳ್ಳಲು ಅವಕಾಶ ದೊರಕಿತು. ಅವರು ವ್ಯವಸಾಯ, ವ್ಯಾಪಾರ ಮತ್ತು ಔದ್ಯೋಗಿಕ ವೃತ್ತಿಗಳನ್ನು ಕೈಗೊಳ್ಳಲು ಅವಕಾಸ ದೊರಕಿತು. ಶೂದ್ರರು ಸೈನ್ಯಗಳಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಕೂಡ ದೊರಕಿಸಿಕೊಂಡರು.

ರಾಷ್ಟ್ರಕೂಟ ಸಮಾಜವು ಕ್ರಿಯಾಶೀಲತೆಯಿಂದ ಕೂಡಿದ್ದು ಕಾಲಕ್ಕೆ ಅನುಗುಣವಾಗಿ ಬದಲಾವಣೆಗಳುಂಟಾದುದನ್ನು ಗಮನಿಸಬಹುದಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ದಕ್ಷಿಣ ಭಾರತಕ್ಕೆ ಹೊಸ ಧರ್ಮದ ಪರಿಚಯವಾಯಿತು. ಇಸ್ಲಾಂ ಧರ್ಮ ತೀರ ಪ್ರದೇಶದಲ್ಲಿ ಹರಡಿತು. ಇಸ್ಲಾಂ ಧರ್ಮದ ಅನುಯಾಯಿಗಳು ವ್ಯಾಪಾರಕ್ಕೆಂದು ಬಂದವರು ಇಲ್ಲೇ ನೆಲೆಸಲು ಪ್ರಾರಂಭಿಸಿದರು.

## 16.3 ವಿದ್ಯಾಭ್ಯಾಸ

ಅನೇಕ ಶಾಸನಗಳು ಮತ್ತು ಹಲವು ಗ್ರಂಥಗಳು ರಾಷ್ಟ್ರಕೂಟ ಆಳ್ವಿಕೆಯ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ನೀಡಿದ್ದ ಪ್ರೋತ್ಸಾಹದ ಬಗ್ಗೆ ಉಲ್ಲೇಖಿಸುತ್ತದೆ. ಈ ಆಕರಗಳು ಅಗ್ರಹಾರಗಳು, ಬ್ರಹ್ಮಪುರಿ, ಮಠಗಳು ಮತ್ತು ದೇವಸ್ಥಾನಗಳು ಹಾಗೂ ಘಟಿಕ ಸ್ಥಾನಗಳ ಬಗ್ಗೆ ವಿವರಿಸುತ್ತವೆ.

### *16.3.1 ಅಗ್ರಾಹಾರಗಳು ಮತ್ತು ಬ್ರಹ್ಮಪುರಿಗಳು*

ಅಗ್ರಹಾರಗಳಲ್ಲಿ ಬ್ರಾಹ್ಮಣರು ವಾಸ ಮಾಡುತ್ತಿದ್ದರು. ಅಗ್ರಹಾರಗಳ ಆಡಳಿತವನ್ನು ಮಹಾಜನರು ನಿರ್ವಹಿಸುತ್ತಿದ್ದರು. ಈ ಮಹಾಜನರು ಭೂದತ್ತಿಗಳನ್ನು ಮತ್ತು ಇನ್ನಿತರ ದತ್ತಿಗಳನ್ನು ಸ್ವೀಕರಿಸುವ ಹಕ್ಕನ್ನು ಹೊಂದಿದ್ದರು. ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿದ್ದವು. ಮೂರನೆಯ ಇಂದ್ರನ ಕೆರೆವೂರು ಮತ್ತು ತನಗುಂಡೂರು ಶಾಸನಗಳು ಪಲ್ತಿಯ ಮಲ್ಲೂರುವಿನಲ್ಲಿದ್ದ 120 ಮಹಾಜನರ ಬಗ್ಗೆ ವಿವರಣೆ ನೀಡುತ್ತವೆ. ನಾಲ್ಕನೆ ಗೋವಿಂದನ ಕಳಸ ಶಾಸನ ಕಡಿಯೂರಿನ 200 ಮಹಾಜನರ ಬಗ್ಗೆ ವಿವರಿಸುತ್ತದೆ. ಸಾಲೊತ್ಗಿ ಶಾಸನ ಪಾವಟಿಗೆ ಹಳ್ಳಿಯಲ್ಲಿದ್ದ ಅಗ್ರಹಾರದ ಬಗ್ಗೆ ವಿವರಣೆ ನೀಡುತ್ತದೆ. ಮೂರನೆಯ ಕೃಷ್ಣನ ಕಾಲದಲ್ಲಿ ಸಂಧಿ ವಿಗ್ರಹಿಯಾಗಿದ್ದ ನಾರಾಯಣ ಪಾವಟಿಗೆಯಲ್ಲಿ ಒಂದು ಶಾಲೆಯನ್ನು ನಿರ್ಮಿಸಿದನು. ಸಾಮ್ರಾಜ್ಯದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡಲು ಬರುತ್ತಿದ್ದರು. ಸಾಲೊತ್ಗಿಯು ಶಾಲೆ ಮತ್ತು ಪಾವಟಿಗೆ ಎಂಬ ಎರಡು ಪದಿಗಳಿಂದ ಕೂಡಿರುವ ಹೆಸರು. ಶಾಲೆಯು ವಿದ್ಯಾರ್ಥಿಗಳಿಗೋಸ್ಕರ ವಾಸಿಸಲು ಬೇಕಾದ ಎಲ್ಲ ರೀತಿಯ ಸೌಲಭ್ಯಗಳನ್ನು ಹೊಂದಿದ್ದ ಇಪ್ಪತ್ತೇಳು ಕಟ್ಟಡಗಳನ್ನು ಸಾಲೊತ್ಗಿಯಲ್ಲಿ ನಿರ್ಮಿಸಲಾಗಿತ್ತು. ದೀಪದ ವ್ಯವಸ್ಥೆಗೋಸ್ಕರ ಈ ಶಾಲೆಯು ಹನ್ನೆರಡು ನಿವರ್ತನ ಭೂಮಿಯನ್ನು ಹೊಂದಿತ್ತು. ಶಾಲೆಯ ಮುಖ್ಯಸ್ಥನು 50 ನಿವರ್ತನ ಭೂಮಿ ಮತ್ತು ಒಂದು ಮನೆಯನ್ನು ಹೊಂದಿದ್ದನು. ವಿದ್ಯಾರ್ಥಿಗಳ ಎಲ್ಲ ವೆಚ್ಚಗಳನ್ನು ಸರಿದೂಗಿಸಲು 500 ನಿವರ್ತಗಳ ಭೂಮಿಯನ್ನು ಶಾಲೆಯು ಹೊಂದಿತ್ತು.

ಬ್ರಹ್ಮಪುರಿ ಎಂದರೆ ಬ್ರಾಹ್ಮಣ ವಿದ್ವಾಂಸರು ನೆಲೆಸಿದ್ದ ಪಟ್ಟಣ ನಗರದ ಒಂದು ಭಾಗ. ಇಂತಹ ಬ್ರಹ್ಮಪುರಿಗಳಲ್ಲಿ ವಿದ್ಯಾಭ್ಯಾಸಕ್ಕೋಸ್ಕರ ವ್ಯವಸ್ಥೆಯನ್ನು ಮಾಡಲಾಗಿತ್ತು.

### *16.3.2 ಮಠಗಳು ಮತ್ತು ದೇವಸ್ಥಾನಗಳು*

ರಾಷ್ಟ್ರಕೂಟರ ಕಾಲದಲ್ಲಿ ಮಠಗಳು ಮತ್ತು ದೇವಸ್ಥಾನಗಳು ವಿದ್ಯಾಭ್ಯಾಸ ಪ್ರಚಾರದಲ್ಲಿ ತೊಡಗಿದ್ದವು. ಮಠಗಳಲ್ಲಿ ವಿದ್ಯಾರ್ಥಿಗಳು ನೆಲಸಿ ವಿದ್ಯಾರ್ಜನೆ ಮಾಡುತ್ತಿದ್ದರು. ಸಾಮಾನ್ಯವಾಗಿ ಈ ಮಠಗಳನ್ನು ದೇವಸ್ಥಾನಗಳಿಗೆ ವಹಿಸಿಕೊಡಲಾಗಿತ್ತು. ಧಾರವಾಡ ಜಿಲ್ಲೆಯ ಹೆಬ್ಬಾಳಿನಲ್ಲಿ ದೊರಕಿರುವ ಒಂದು ಶಾಸನ ಭುಜ್ಜಬ್ಬೇಶ್ವರ ದೇವಸ್ಥಾನಕ್ಕೆ ಒಂದು ಮಠವನ್ನು ವಹಿಸಿಕೊಟ್ಟಿರುವುದರ ಬಗ್ಗೆ ವಿವರಿಸುತ್ತದೆ.

### *16.3.3 ಘಟಿಕ ಸ್ಥಾನಗಳು*

ಘಟಿಕಿ ಅಥವಾ ಘಟಿಕಾ ಸ್ಥಾನ ಮತ್ತೊಂದು ವಿದ್ಯಾಕೇಂದ್ರ. ನಾಲ್ಕನೆ ಗೋವಿಂದನ ಕಡಿಯೂರಿನಲ್ಲಿದ್ದ ಘಟಿಕೆಯ ಬಗ್ಗೆ ಉಲ್ಲೇಖಿಸುತ್ತದೆ. ಮಾನ್ಯಖೇಟ, ಪೈಥಾನ್, ನಾಸಿಕ್, ಕರ್ಹಾಡ್ ಮತ್ತು ಇನ್ನೂ ಅನೇಕ ವಿದ್ಯಾ ಕೇಂದ್ರಗಳು ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿದ್ದವು.

ಬ್ರಾಹ್ಮಣರ ವಿದ್ಯಾಕೇಂದ್ರಗಳಂತೆಯೇ ಜೈನ ಮತ್ತು ಬೌದ್ಧ ವಿಹಾರಗಳು ವಿದ್ಯಾಭ್ಯಾಸ ಪ್ರಚಾರ ಕಾಲದಲ್ಲಿ ತೊಡಗಿದ್ದವು. ಜೊತೆಗೆ ತಮ್ಮ ಧರ್ಮ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ಅಧ್ಯಯನ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವುದು ಅವಶ್ಯಕ. ನಾಲ್ಕು ವೇದಗಳು, ಆರು ವೇದಾಂಗಗಳು, ಆರು ದರ್ಶನಗಳು, 18 ಪುರಾಣಗಳು, ಧರ್ಮ ಶಾಸ್ತ್ರಗಳು, ವ್ಯಾಕರಣ, ತರ್ಕ, ಅಲಂಕಾರ ಶಾಸ್ತ್ರಗಳು, ನಾಟಕಗಳು, ಛಂಡವೃತ್ತಿ, ಸಾಹಿತ್ಯವಿದ್ಯೆ, ಗಂಧರ್ವ ವಿದ್ಯೆ, ಇತಿಹಾಸ, ಅರ್ಥಶಾಸ್ತ್ರ, ಗ್ರಹಗಣಿತ, ವಾಸ್ತುವಿದ್ಯೆ, ರತ್ನಪರೀಕ್ಷೆ, ರತಿತಂತ್ರ, ಇಂದ್ರಜಾಲ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು.

## 16.4 ಸಾಹಿತ್ಯ

ರಾಷ್ಟ್ರಕೂಟರ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಅನೇಕ ಗ್ರಂಥಗಳು ರಚಿಸಲ್ಪಟ್ಟವು. ರಾಷ್ಟ್ರಕೂಟ ಸಾಮ್ರಾಟರು ಅನೇಕ ವಿದ್ವಾಂಸರುಗಳಿಗೆ ಆಶ್ರಯ ನೀಡಿದ್ದರು.

### *16.4.1 ಸಂಸ್ಕೃತ ಸಾಹಿತ್ಯ*

ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಅನೇಕ ಉದ್ಗ್ರಂಥಗಳು ರಚನೆಯಾದವು. ಸಂಸ್ಕೃತ ವಿದ್ವಾಂಸರು ಅನೇಕ ಮೇರು ಕೃತಿಗಳನ್ನು ರಚಿಸಿದರು. ತ್ರಿವಿಕ್ರಮನು ನಳಚಂಪುವನ್ನು ಬರೆದನು. ಮೂರನೆಯ ಇಂದ್ರನ ಬೆಗುಮ್ರ ತಾಮ್ರ ಪತ್ರಗಳನ್ನು ರಚಿಸಿದವನಾಗಿದ್ದಾನೆ. ಈ ಕಾಲದಲ್ಲಿ ರಚಿಸಲ್ಪಟ್ಟ ಪ್ರತಿಯೊಂದು ಶಾಸನವು ಕೂಡ ಒಂದು ಕಾವ್ಯದಂತಿದೆ. ಅಮೋಘ ವರ್ಷನೇ ಒಬ್ಬ ದೊಡ್ಡ ವಿದ್ವಾಂಸನಾಗಿದ್ದನು. ಈತನು **ಪ್ರಶ್ನೋತ್ತರ ರತ್ನಮಾಲಿಕ** ಎಂಬ ಗ್ರಂಥವನ್ನು ರಚಿಸಿದನು. ಅಮೋಘವರ್ಷನ ಆಶ್ರಯದಲ್ಲಿದ್ದ ಮಹಾವೀರಾಚಾರ್ಯ **ಗಣಿತ ಸಾರಸಂಗ್ರಹ** ಎಂಬ ಗ್ರಂಥವನ್ನು ರಚಿಸಿದನು. ಹಲಾಯುಧನು ಒಂದು ನಿಘಂಟನ್ನು ರಚಿಸಿದನು. ಇದರ ಜೊತೆಗೆ **ಕವಿರಹಸ್ಯ** ಮತ್ತು **ಮೃತ ಸಂಜೀವಿನಿಯನ್ನು** ಬರೆದನು. ಮೂರನೆಯ ಕೃಷ್ಣನು ಈತನಿಗೆ ಆಶ್ರಯ ನೀಡಿದ್ದನು.

ರಾಷ್ಟ್ರಕೂಟರ ಕಾಲವು ಅದ್ವೈತ ಸಿದ್ಧಾಂತದ ದಾರ್ಶನಿಕ ಶಂಕರಚಾರ್ಯರ ಉದಯದ ಕಾಲವಾಗಿತ್ತು. ಶಂಕರಚಾರ್ಯರು ಶೃಂಗೇರಿಯಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಅವರ ಅನೇಕ ಶಿಷ್ಯರು ಕರ್ನಾಟಕದಲ್ಲಿ ನೆಲೆಸಿದ್ದರು. ಅವರು ಅನೇಕ ಗ್ರಂಥಗಳನ್ನು ರಚಿಸಿದರು. ಪದ್ಮಪಾದನು **ಪಂಚಪಡಿಕ**, ಸುರೇಶ್ವರನು **ಬೃಹತ್ ಅರಣ್ಯಕ - ಶ್ಲೋಕ ವೃತ್ತಿಕ**, **ತೈತ್ತಿರ್ಯ-ಶ್ಲೋಕವೃತ್ತಿಕ** ಮತ್ತು ನೈಷಕರ್ಮ್ಯಸಿದ್ಧಿ ಗ್ರಂಥಗಳನ್ನು ರಚಿಸಿದರು. ಯಜ್ಞವಲ್ಕ್ಯ ಸ್ಮೃತಿಯ ಬಗ್ಗೆ ಪಾಲಕೃತ ಎಂಬ ಭಾಷ್ಯಾವನ್ನು ವಿಶ್ವರೂಪನು (ಸುರೇಶ್ವರ) ಬರೆದನು. ಜೈನ ಸೋಮದೇವಸೂರಿ ವೇಮುಲವಾತ ಚಾಳುಕ್ಯರ ಆಸ್ಥಾನ ಕವಿಯಾಗಿದ್ದನು. ವೇಮುಲವಾಡ ಚಾಲುಕ್ಯರು ರಾಷ್ಟ್ರಕೂಟರ ಸಾಮಂತರಾಗಿದ್ದರು. ಅವನು **ಯಶ್‌ಸ್ತಿಲಕ** ಗ್ರಂಥವನ್ನು ಕ್ರಿ.ಶ. 959 ರಲ್ಲಿ ರಚಿಸಿದನು. ಸಂಸ್ಕೃತ ಸಾಹಿತ್ಯದಲ್ಲಿ ಅಮೂಲ್ಯ ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ. ರಾಜಕೀಯಕ್ಕೆ ಸಂಬಂಧಿಸಿದಂತೆ ಅವನು **ನೀತಿವಾಕ್ಯಾಮೃತ** ಎಂಬ ಗ್ರಂಥವನ್ನು ರಚಿಸಿದ್ದಾನೆ. ಈ ಗ್ರಂಥವು ಕೌಟಿಲ್ಯನ ಅರ್ಥಶಾಸ್ತ್ರದ ಮಾದರಿಯಲ್ಲಿದೆ. ಈ ಗ್ರಂಥ ಮೂವತ್ತೆರಡು ಅಧ್ಯಾಯಗಳಿಂದ ಕೂಡಿದೆ. ಜೀವನದ ಮೌಲ್ಯಗಳು, ಮಂತ್ರಿ, ಗ ರು, ದಂಡನಾಯಕ, ರಾಯಭಾರಿ, ಗೂಢಾಚಾರ, ರಾಜ್ಯದ ಏಳು ಅಂಗಗಳು, ನ್ಯಾಯ, ಯುದ್ಧ ಮತ್ತು ಶಾಂತಿ, ವಿದೇಶಾಂಗ ನೀತಿ ಮೊದಲಾದ ವಿಷಯಗಳನ್ನು ಈ ಗ್ರಂಥ ಒಳಗೊಂಡಿದೆ.

ಧರ್ಮಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳು ರಚಿಸಲ್ಪಟ್ಟವು. ಜೈನ ಸೂತ್ರಗಳಿಗೆ ಸಂಬಂಧಿಸಿದಂತೆ **ಶತ್ಕಂಡಾಕ್ರಮ** ಎಂಬ ಭಾಷ್ಯಾ ರಚಿಸಲ್ಪಟ್ಟಿತು. ವೀರಸೇನ ಮತ್ತು ಜಿನಸೇನ, ಗುರು ಮತ್ತು ಶಿಷ್ಯ, ಇಬ್ಬರೂ ಜೊತೆಗೂಡಿ ಒಂದು ಲಕ್ಷ ಶ್ಲೋಕಗಳಿಂದ ಕೂಡಿದ್ದ **ಧವಳ** ಮತ್ತು **ಜಯಧವಳ** ಎಂಬ ಭಾಷ್ಯಗಳನ್ನು ರಚಿಸಿದರು.

ಜಿನಸೇನನು ಭರತ ಮತ್ತು ಬಾಹುಬಲಿಗೆ ಸಂಬಂಧಿಸಿದ ಆದಿಪುರಾಣ ಎಂಬ ಗ್ರಂಥವನ್ನು ರಚಿಸಿದನು. ಇದೊಂದು ಪುರಾಣವು ಹೌದು ಮತ್ತು ಕಾವ್ಯವೂ ಹೌದು. ಪಾರ್ಶ್ವನಾಥನಿಗೆ ಸಂಬಂಧಿಸಿದ ಪಾರ್ಶ್ವಾಭ್ಯುದಯ ಜಿನಸೇನನು ಬರೆದ ಮತ್ತೊಂದು ಗ್ರಂಥವಾಗಿದೆ. ಅಗಸನು ವರ್ಧಮಾನ ಪುರಾಣವನ್ನು ಬರೆದನು. ಈತನು ಸಂಸ್ಕೃತದ ಜೊತೆಗೆ ಕನ್ನಡ ಸಾಹಿತ್ಯಗಲ್ಲೂ ವಿದ್ವಾಂಸನಾಗಿದ್ದನು.

ಜೈನ ತರ್ಕಕ್ಕೆ ಸಂಬಂಧಿಸಿದಂತೆ ಹಲವು ಗ್ರಂಥಗಳನ್ನು ರಚಿಸಲಾಯಿತು. ದಂತಿದುರ್ಗ ಮತ್ತು ಒಂದನೆಯ ಕೃಷ್ಣನ ಕಾಲದಲ್ಲಿ ಜೀವಿಸಿದ್ದ ಅಕಳಂಕನು ತರ್ಕ ಮತ್ತು ಕೇವಲ ತತ್ವಕ್ಕೆ (metaphysics) ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವನು **ತತ್ವಾರ್ಥ ವಾರ್ತಿಕ** ಮತ್ತು **ಭಾಷ್ಯ, ಅಷ್ಠಸುತಿ, ಲಾಘಿಯಾಸ್ತ್ರಯ, ನ್ಯಾಯ ವಿನಿಶ್ಚಯ, ಪ್ರಮಾಣ ಸಂಗ್ರಹ ಸಿದ್ಧಿ ವಿನಿಶ್ಚಯ** ಮೊದಲಾದ ಗ್ರಂಥಗಳನ್ನು ರಚಿಸಿ ಪ್ರಖ್ಯಾತನಾಗಿದ್ದಾನೆ. ಅದ್ವೈತ ಸಿದ್ಧಾಂತದಲ್ಲಿ ಶಂಕರನು ಖ್ಯಾತಿಗಳಿಸಿದಂತೆಯೇ ಜೈನರ ದಾರ್ಶನಿಕ ಕ್ಷೇತ್ರದಲ್ಲಿ ಅಕಲಂಕನು ಪ್ರಸಿದ್ಧಿಯಾಗಿದ್ದಾನೆ. ಸುರೇಶ್ವರನು ಸಾಮಂತಭದ್ರನ ಆಪ್ತ ಮೀಮಾಂಸ ಮತ್ತು ಆಪ್ತ ಪರೀಕ್ಷ ಗ್ರಂಥಗಳ ಮೇಲೆ **ಅಷ್ಠಸಹಷ್ರಿ** ಎಂಬ ಭಾಷ್ಯವನ್ನು ಬರೆದಿದ್ದಾನೆ.

### *16.4.2 ಕನ್ನಡ ಸಾಹಿತ್ಯ*

ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ರಾಷ್ಟ್ರಕೂಟರ ಕಾಲ ಅತ್ಯಂತ ಪ್ರಮುಖವೆನಿಸಿಕೊಂಡಿದೆ. ಕನ್ನಡ ಸಾಹಿತ್ಯದ ಬೆಳವಣಿಗೆಯ ಇತಿಹಾಸದಲ್ಲಿ ಅಮೋಘವರ್ಷನ ಕೊಡುಗೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಕನ್ನಡ ಸಾಹಿತ್ಯದ ಚರಿತ್ರೆ ಹೆಚ್ಚು ಕಡಿಮೆ ಅಮೋಘವರ್ಷನ ಕಾಲದಿಂದ ಪ್ರಾರಂಭವಾಗುತ್ತದೆ. ಅಮೋಘವರ್ಷನು ಸಾಹಿತಿಗಳಿಗೆ ವಿಶೇಷವಾದ ಪ್ರೋತ್ಸಾಹ ನೀಡಿದನು. **ಪೂರ್ವಪುರಾಣ**ವನ್ನು ರಚಿಸಿದ ಜಿನಸೇನ, **ಉತ್ತರ ಪುರಾಣ**ವನ್ನು ರಚಿಸಿದ ಗುಣಭದ್ರ, **ಶಬ್ದಾನು ಶಾಸನ**ವನ್ನು ರಚಿಸಿದ ಸಕತಾಯನ, **ಗಣಿತಸಾರ ಸಂಗ್ರಹ**ವನ್ನು ರಚಿಸಿದ ಮಹವೀರಾಚಾರ್ಯರೆಲ್ಲರು ಅಮೋಘವರ್ಷನ ಸಮಕಾಲೀನರಾಗಿದ್ದರು. ಅಮೋಘವರ್ಷನು ಖ್ಯಾತಿಗಳಿಸಿರುವುದು ಅವನು ರಚಿಸಿದ ಕಾವ್ಯ **ಕವಿರಾಜಮಾರ್ಗ**ದಿಂದಾಗಿ. ಆದರೆ ಅವನೇ ಕರ್ತೃವೇ ಎಂಬುದರ ವಿಷಯಕ್ಕೆ ಸಂಬಂಧಿಸಿದಂತೆ ಜಿಜ್ಞಾಸೆ ವಿದ್ವಾಂಸರಲ್ಲಿ ಉಂಟಾಗಿದೆ. ಕವಿರಾಜ ಮಾರ್ಗವನ್ನು ರಚಿಸಿದವನು ಶ್ರೀ ವಿಜಯ ಎಂಬ ಅಭಿಪ್ರಾಯದ ಒಲವು ಇತ್ತೀಚೆಗೆ ವಿದ್ವಾಂಸರಲ್ಲಿ ಹೆಚ್ಚಾಗತೊಡಗಿದೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನ ಗ್ರಂಥವೆಂದರೆ **ಕವಿರಾಜಮಾರ್ಗ** ತನ್ನ ಕಾವ್ಯಕ್ಕೆ ಸಂಬಂಧಿಸಿದಂತೆ ಇದೇ ಮೊದಲನೆ ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಕಾವ್ಯದ ವಿಷಯಕ್ಕೆ ಸಂಬಂಧಿಸಿದುದರ ಜೊತೆಗೆ ವ್ಯಾಕರಣ ಭಾಷೆ ಮತ್ತು ಛಂದಸ್ಸಿನ ಬಗ್ಗೆಯು ಚರ್ಚಿಸಲಾಗಿದೆ. ಈ ಗ್ರಂಥವು ಸಮಕಾಲೀನ ಧರ್ಮ, ಸಮಾಜ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳಿಂದ ಕೂಡಿದೆ. ಅಮೋಘ ವರ್ಷನಿಗಿಂತ ಪೂರ್ವದಲ್ಲಿ ಜೀವಿಸಿದ್ದ ಅನೇಕ ಕವಿಗಳ ಬಗ್ಗೆ ಮತ್ತು ಅವರ ಗ್ರಂಥಗಳ ಬಗ್ಗೆ ವಿವರಿಸಲಾಗಿದೆ. ಕನ್ನಡ ನಾಡಿನ ಬಗ್ಗೆ 'ಕವಿರಾಜಮಾರ್ಗ'ದಲ್ಲಿ ಈ ರೀತಿಯ ಅಮೋಘವರ್ಷ ಬರೆದಿದ್ದಾನೆ.

ಕಾವೇರಿಯಿಂದ ಮಾ
ಗೋದಾವರಿ ವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾ ವಳಯ ವಿಲೀನ ವಿರದ ವಿಷಯ ವಿಶೇಷಂ
ಷದನರಿದು ನುಡಿಯಲುಂ ನುಡಿ
ದುದ ನರಿದಾರಯೆಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಳಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

ರಾಷ್ಟ್ರಕೂಟರ ಕಾಲದ ಅನೇಕ ಕವಿಗಳಲ್ಲಿ ಅತ್ಯಂತ ಪ್ರಖ್ಯಾತನಾದವನು ಪಂಪ. ಈತನು ರಾಷ್ಟ್ರಕೂಟರ ಸಾಮಂತನಾಗಿದ್ದ ವೇಮುಲವಾಡದ ಅರಿಕೇಸರಿಯ ಆಸ್ಥಾನದಲ್ಲಿದ್ದನು. ಪಂಪನು ಕ್ರಿ.ಶ. 941 ರಲ್ಲಿ ಆದಿಪುರಾಣವನ್ನು ರಚಿಸಿದನು. ಅನಂತರ ಅತ್ಯಂತ ಪ್ರಸಿದ್ಧ ಕಾವ್ಯವೆನಿಸಿಕೊಂಡಿರುವ ಪಂಪ ಭಾರತ ಅಥವಾ ವಿಕ್ರಮಾರ್ಜುನ ವಿಜಯವನ್ನು ರಚಿಸಿದನು. ಆದಿಪುರಾಣದ ಕಥಾವಸ್ತು ಆದಿತೀರ್ಥಂಕರನ ಕಥೆಯಾಗಿದೆ. ಈ ಗ್ರಂಥವು ಜಿನಸೇನರು ರಚಿಸಿದ ಪೂರ್ವಪುರಾಣ ಗ್ರಂಥದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಪಂಪ ಭಾರತದ ನಾಯಕ ಅರ್ಜುನ. ಪರೋಕ್ಷವಾಗಿ ತನ್ನ ಆಶ್ರಯದಾತ ಅರಿಕೇಸರಿಗೆ ಸಂಬಂಧಿಸಿದ ಗ್ರಂಥ.

ಪೊನ್ನನು ಈ ಕಾಲದ ಮತ್ತೊಬ್ಬ ಪ್ರಸಿದ್ಧ ಕವಿ. ಈತನು ಮೂರನೆಯ ಕೃಷ್ಣನ ಆಸ್ಥಾನದಲ್ಲಿದ್ದನು. ಕೃಷ್ಣನಿಂದ ಉಭಯಕವಿ ಚಕ್ರವರ್ತಿ ಎಂಬ ಬಿರುದನ್ನು ಪಡೆದನು. **ಶಾಂತಿಪುರಾಣ, ಭುವನೈಕರಾಮಾಭ್ಯುದಯ, ಗತ ಪ್ರತ್ಯಾಗತ** ಮತ್ತು **ಜಿನಾಕ್ಷರ ಮಾಲೆ** ಎಂಬ ಗ್ರಂಥಗಳನ್ನು ಪೊನ್ನನು ರಚಿಸಿರುವನು. ಶಾಂತಿ ಪುರಾಣ ಚಂಪು ಗ್ರಂಥ. ಇದು ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನ ಜೀವನವನ್ನು ಕುರಿತು ವಿವರಿಸುತ್ತದೆ. ಭುವನೈಕಮಲ್ಲನೆಂಬ ಬಿರುದನ್ನು ಹೊಂದಿದ್ದ ಮೂರನೆಯ ಕೃಷ್ಣನಿಗೆ ಸಂಬಂಧಿಸಿದ ಗ್ರಂಥ ಭುವನೈಕರಾಮಾಭ್ಯುದಯ.

ಪೊನ್ನನು ರಚಿಸಿದ ಮತ್ತೊಂದು ಪ್ರಮುಖ ಗ್ರಂಥವೆಂದರೆ ಜೈನಕ್ಷರ ಮಾಲೆ.

ರಾಷ್ಟ್ರಕೂಟರ ಕಾಲದ ಸಾಹಿತ್ಯವನ್ನು ವಿವರಿಸುವಾಗ ಮತ್ತೊಬ್ಬ ಸಮಕಾಲೀನ ಕವಿ ಚಾವುಂಡರಾಯನ ಬಗ್ಗೆ ವಿವರಿಸುವುದು ಅವಶ್ಯಕ. ಈತನು ತಲಕಾಡಿನ ಗಂಗರ ರಾಜ್ಯದಲ್ಲಿ ಮಂತ್ರಿಯಾಗಿದ್ದನು. ಈತನು ರಚಿಸಿದ **ಚಾವುಂಡರಾಯ ಪುರಾಣ** ಕನ್ನಡದಲ್ಲಿ ರಚಿಸಲ್ಪಟ್ಟ ಮತ್ತೊಂದು ಪ್ರಮುಖ ಕೃತಿ. ಈ ಗ್ರಂಥ ಜೈನಧರ್ಮಕ್ಕೆ ಸಂಬಂಧಿಸಿದಂತೆ ಒಂದು ಕೈಪಿಡಿಯಾಗಿದೆ. 24 ತೀರ್ಥಂಕರರ ಬಗ್ಗೆ ವಿವರಣೆಗಳಿಂದ ಕೂಡಿದೆ.

ಈ ರೀತಿಯಾಗಿ ರಾಷ್ಟ್ರಕೂಟರ ಕಾಲ ಕನ್ನಡ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಒಂದು ಪ್ರಮುಖ ಘಟ್ಟವಾಗಿದೆ.

## 16.5 ಧಾರ್ಮಿಕ ಪರಿಸ್ಥಿತಿ

ರಾಷ್ಟ್ರಕೂಟರ ಕಾಲದ ಸಾಹಿತ್ಯಾಧಾರಗಳು ಮತ್ತು ಶಾಸನಾಧಾರಗಳನ್ನು ಉಪಯೋಗಿಸಿಕೊಂಡು ಅವರ ಕಾಲದ ಧಾರ್ಮಿಕ ಪರಿಸ್ಥಿತಿಗಳನ್ನು ತಿಳಿದುಕೊಳ್ಳಬಹುದು. ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಬೌದ್ಧ ಧರ್ಮ, ಜೈನಧರ್ಮ ಮತ್ತು ಹಿಂದೂ ಧರ್ಮದ ಅನುಯಾಯಿಗಳಿದ್ದರು. ಆದರೆ ಬೌದ್ಧ ಧರ್ಮವು ಈ ವೇಳೆಗೆ ಅವಸಾನದ ಅಂಚಿನಲ್ಲಿತ್ತು. ಜೈನಧರ್ಮ ಮತ್ತು ಹಿಂದೂ ಧರ್ಮ ಹೆಚ್ಚು ಪ್ರಸಿದ್ಧಿಯಾಗಿದ್ದವು. ಅನೇಕ ಜೈನಬಸದಿಗಳು ಮತ್ತು ದೇವಸ್ಥಾನಗಳು ನಿರ್ಮಾಣಗೊಂಡವು. ವಿವಿಧ ಧರ್ಮಗಳ ಅನುಯಾಯಿಗಳು ಸಾಮ್ರಾಜ್ಯದಲ್ಲಿ ಪರಸ್ಪರ ಗೌರವದಿಂದ ಇದ್ದರು. ರಾಷ್ಟ್ರಕೂಟ ಚಕ್ರವರ್ತಿಗಳು ವೈಯುಕ್ತಿಕವಾಗಿ ಹಿಂದೂ ಧರ್ಮದ ಅನುಯಾಯಿಗಳಾದರೂ ಅವರು ಉದಾರ ಮತೀಯ ಧೋರಣೆಯನ್ನು ಅನುಸರಿಸಿದರು. ಜೈನ ಮತಕ್ಕೂ ವಿಶೇಷವಾದ ಪ್ರೋತ್ಸಾಹ ನೀಡಿದರು. ಹಿಂದೂ ಧರ್ಮ ಮತ್ತು ಜೈನಧರ್ಮ ಪ್ರಗತಿ ಪಥದಲ್ಲಿ ಸಾಗಿದವು.

### *16.5.1 ಬೌದ್ಧ ಧರ್ಮ*

ಶಾತವಾಹನರ ಆಳ್ವಿಕೆಯ ನಂತರ ದಖನ್ ಪ್ರಸ್ಥಭೂಮಿಯಲ್ಲಿ ಬೌದ್ಧ ಮತ ಮಂದಗತಿಯಲ್ಲಿ ಮುಂದುವರಿಯಿತು. ಗುಪ್ತರ ಕಾಲದಲ್ಲಿ ಉತ್ತರ ಭಾರತದಲ್ಲಿ ಪ್ರಾರಂಭವಾದ ಹಿಂದೂ ಮತದ ಪುನರುಜ್ಜೀವನ ಕ್ರಮೇಣ ಭಾರತದಲ್ಲೂ ವ್ಯಾಪಿಸಿತು. ಶಾತವಾಹನರ ನಂತರ ಆಳಿದ ಆಳ್ವಿಕೆಯ ಮನೆತನಗಳ ಕಾಲದಲ್ಲಿ ಬೌದ್ಧಮತ ದಖಿನ್‌ನಲ್ಲಿ ಕ್ಷೀಣಿಸಿತು. ಹ್ಯುಯನ್‌ತ್ಸಾಂಗನ ಬರವಣಿಗೆಯಿಂದಲೂ ಮತ್ತು ಇತರ ಆಧಾರಗಳಿಂದಲೂ ಈ ಸಂಗತಿಯು ತಿಳಿದು ಬರುತ್ತದೆ. ಅಷ್ಟೇ ಅಲ್ಲದೆ ಇಡೀ ಭಾರತದಲ್ಲಿ ಅದರ ಪ್ರಭಾವ ಕುಂಟಿತಗೊಂಡಿತ್ತು. ಬಂಗಾಳ ಮತ್ತು ಸಿಂಧ್ ಪ್ರದೇಶಗಳಲ್ಲಿ ಮಾತ್ರ ಅದರ ಪ್ರಭಾವ ಹೆಚ್ಚಾಗಿತ್ತು. ಅನಂತರ ಶಂಕರಾಚಾರ್ಯರ ಹಿಂದೂ ಧರ್ಮದ ಪುನರುಜ್ಜೀವನದ ಪ್ರಯತ್ನಗಳಿಂದಾಗಿ ಬೌದ್ಧ ಧರ್ಮ ಕ್ಷೀಣಿಸಿತು. ರಾಜಾಶ್ರಯವು ಕೂಡ ತಪ್ಪಿ ಹೋಯಿತು. ಮಿಗಿಲಾಗಿ ಆ ಕಾಲದಲ್ಲಿ ಬೌದ್ಧ ಮತವನ್ನು ಪುನಶ್ಚೇತನಗೊಳಿಸಬಲ್ಲ ಆಚಾರ್ಯರೂ ಇರಲಿಲ್ಲ. ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಮೂರು ಬೌದ್ಧ ಕೇಂದ್ರಗಳು ಮಾತ್ರ ಇದ್ದವು. ಇವುಗಳಲ್ಲಿ ಮುಂಬಯಿಯ ಹತ್ತಿರವಿದ್ದ ಕನ್ಹೇರಿ ಅತ್ಯಂತ ಪ್ರಮುಖ ಕೇಂದ್ರವಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಬೌದ್ಧ ಮತೀಯರು ಇಲ್ಲಿ ನೆಲೆಸಿದ್ದರು. ಬೌದ್ಧ ಮತದ ಯಾತ್ರಾರ್ಥಿಗಳು ಅಲ್ಲಿನ ವಿಹಾರವನ್ನು ಸಂದರ್ಶಿಸುತ್ತಿದ್ದರೆಂದೂ ಹಾಗೂ ಅಲ್ಲಿನ ವಿಹಾರ ಗ್ರಂಥ ಭಂಡಾರವನ್ನು ಹೊಂದಿತ್ತೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಈ ಬೌದ್ಧ ವಿಹಾರಕ್ಕೆ ಅನೇಕರು ದತ್ತಿಗಳನ್ನು ನೀಡಿದುದರ ಬಗ್ಗೆ ಮಾಹಿತಿ ನೀಡುತ್ತವೆ. ರಾಷ್ಟ್ರಕೂಟರ ಕಾಲದ ಉತ್ತರಾಧಿಕಾರಿಗಳಾದ ಕಲ್ಯಾಣ ಚಾಲುಕ್ಯರ ಶಾಸನಗಳು ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ ಮತ್ತು ಧಾರವಾಡ ಜಿಲ್ಲೆಯ ಡಂಬಳದಲ್ಲಿದ್ದ ಬೌದ್ಧ ವಿಹಾರಗಳ ಬಗ್ಗೆ ಉಲ್ಲೇಖಿಸುತ್ತವೆ.

### 165.2 ಜೈನಧರ್ಮ

ಜೈನಧರ್ಮ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಉನ್ನತ ಸ್ಥಿತಿಯಲ್ಲಿತ್ತು. ಒಬ್ಬಿಬ್ಬರು ರಾಜರನ್ನು ಹೊರತು ಉಳಿದ ಎಲ್ಲ ರಾಷ್ಟ್ರಕೂಟ ಪ್ರಭುಗಳು ಹಿಂದೂ ಮತೀಯರಾಗಿದ್ದರು. ಆದಾಗ್ಯೂ ಜೈನ ಮತೀಯರು ರಾಷ್ಟ್ರಕೂಟ ಚಕ್ರವರ್ತಿಗಳಿಂದ ಎಲ್ಲ ಪುರಸ್ಕಾರಗಳನ್ನು ಪಡೆದರು. ಈ ಸಂಗತಿ ರಾಷ್ಟ್ರಕೂಟರ ಮತೀಯ ಉದಾರ ನೀತಿಯನ್ನು ಪ್ರತಿಬಿಂಬಿಸುತ್ತದೆ. ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜೈನ ದಾರ್ಶನಿಕರೂ, ವಿದ್ವಾಂಸರೂ, ಕವಿಗಳು ಇದ್ದರು. ಸಮಂತಭದ್ರ, ಅಕಲಂಕದೇವ, ವಿದ್ಯಾನಂದಿ, ಜಿನಸೇನ, ಗುಣಚಂದ್ರ, ಮಹಾವೀರಾಚಾರ್ಯ ಮೊದಲಾದ ಆಚಾರ್ಯರೂ, ಪಂಪ, ಜನ್ನ, ರನ್ನ ಮೊದಲಾದ ಪ್ರಸಿದ್ಧ ಕವಿಗಳು ಕರ್ನಾಟಕದಲ್ಲಿ ಜೀವಿಸಿದ್ದರು. ಅವರಲ್ಲಿ ಕೆಲವರು ರಾಷ್ಟ್ರಕೂಟ ರಾಜಧಾನಿಯಲ್ಲೂ ಮತ್ತೆ ಕೆಲವರು ಸಾಮಂತ ರಾಜರ ಆಸ್ಥಾನದಲ್ಲೂ ಇದ್ದರು. ಜೈನ ದಾರ್ಶನಿಕರ ಮತ್ತು ಕವಿಗಳ ಮತ ಪ್ರಚಾರ ಕಾರ್ಯ ಹಾಗೂ ರಾಜಾಶ್ರಯದಿಂದ ಜೈನ ಧರ್ಮ ದಖ್ಖನ್ನಿನಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿತ್ತು. ಅಮೋಘವರ್ಷನು ಜೈನ ಧರ್ಮದ ಅನುಯಾಯಿಯಾಗಿದ್ದನು. ಅವನ ಆಸ್ಥಾನ ಪ್ರಸಿದ್ಧ ಜೈನ ವಿದ್ವಾಂಸರಿಂದ ಕೂಡಿತ್ತು. ಅಮೋಘವರ್ಷನೆ ಪ್ರಸಿದ್ಧ ವಿದ್ವಾಂಸ ಜಿನಸೇನಾಚಾರ್ಯನ ಶಿಷ್ಯನಾಗಿದ್ದನು. ತನ್ನ ಮಗ ಎರಡನೆಯ ಕೃಷ್ಣನಿಗೆ ಗುಣಭದ್ರನನ್ನು ಗುರುವನ್ನಾಗಿ ನೇಮಿಸಿದ್ದನು. ಎರಡನೆಯ ಕೃಷ್ಣ ಮತ್ತು ಮುಮ್ಮಡಿ ಇಂದ್ರ ಜೈನ ಬಸದಿಗಳಿಗೆ ಉದಾರವಾಗಿ ದಾನ ದತ್ತಿಗಳನ್ನು ನೀಡಿದರೆಂದು ಶಾಸನಗಳು ವಿವರಿಸುತ್ತವೆ. ಅಮೋಘವರ್ಷನು ತನ್ನ ದೀರ್ಘ ಕಾಲದ ಆಳ್ವಿಕೆಯ ಸಮಯದಲ್ಲಿ ಬೇಸರ ಉಂಟಾದಾಗ ನೆಮ್ಮದಿಗೋಸ್ಕರ ಜೈನ ಬಸದಿಗಳಿಗೆ ಭೇಟಿಕೊಡುತ್ತಿದ್ದನೆಂದು ತಿಳಿದು ಬರುತ್ತದೆ. ನಾಲ್ಕನೆಯ ಇಂದ್ರನು ಜೈನ ಧರ್ಮದ ಅನುಯಾಯಿಯಾಗಿದ್ದು ಸಲ್ಲೇಖನ ವ್ರತವನ್ನು ಅನುಸರಿಸುವುದರ ಮೂಲಕ ತನ್ನ ಜೀವನವನ್ನು ಅಂತ್ಯಗೊಳಿಸಿದನು.

ರಾಷ್ಟ್ರಕೂಟರ ಅಧೀನದಲ್ಲಿದ್ದ ಅನೇಕ ಮಾಂಡಳಿಕರು ಜೈನ ಬಸದಿಗಳಿಗೆ ದಾನದತ್ತಿಗಳನ್ನು ನೀಡಿದುದರ ಬಗ್ಗೆ ಶಾಸನಗಳು ವಿವರಿಸುತ್ತವೆ. ಗುಜರಾತಿನ ಪ್ರಾಂತ್ಯಾಧಿಕಾರಿಯಾಗಿದ್ದ ಕರ್ಕ ಸುವರ್ಣವರ್ಷ ವೈದಿಕ ಮತದ ಅನುಯಾಯಿಯಾಗಿದ್ದರು ಕೂಡ ಜೈನಧರ್ಮಕ್ಕೆ ದತ್ತಿಗಳನ್ನು ನೀಡಿದನು. ಎರಡನೆಯ ಕೃಷ್ಣನ ಸಮಕಾಲೀನನಾಗಿದ್ದ ರಟ್ಟ ಅರಸ ಪೃಥ್ವೀವರ್ಮ, ಕ್ರಿ.ಶ. 875 ರಲ್ಲಿ ಒಂದು ಜೆನ ಬಸದಿಯನ್ನು ನಿರ್ಮಿಸಿದನು. ಬನವಾಸಿ 12,000 ಪ್ರಾಂತ್ಯದ ಪ್ರಾಂತ್ಯಧಿಕಾರಿಯಾಗಿದ್ದ ಬಂಕೇಶನು ಜೈನ ಮತೀಯನಾಗಿದ್ದನು. ಅವನು ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದನು. ಬಂಕಾಪುರವು ಜೈನ ಮತದ ಪ್ರಸಿದ್ಧ ಕೇಂದ್ರಗಳಲ್ಲೊಂದಾಗಿತ್ತು. ಶತಮಾನಗಳ ನಂತರದ ಜೈನ ಶಾಸನಗಳಲ್ಲಿಯೂ ಬಂಕೇಶನು ಜೈನ ಮತಕ್ಕೆ ನೀಡಿದ ಪ್ರೋತ್ಸಾಹಕ್ಕಾಗಿ ಅವನನ್ನು ಸ್ತುತಿಸಲಾಗಿದೆ. ಅವನ ಮಗ ಲೋಕಾದಿತ್ಯನು ಕೊಡ ಜೈನಧರ್ಮದ ಅನುಯಾಯಿಯಾಗಿದ್ದನು. ಈ ಕಾಲದಲ್ಲಿ ಗಂಗವಾಡಿಯಲ್ಲಿಯು ಜೈನ ಧರ್ಮ ಹೆಚ್ಚು ಪ್ರವರ್ಧಮಾನಕ್ಕೆ ಬಂತು. ಅವರ ಕಾಲದಲ್ಲಿ ಶ್ರವಣಬೆಳಗೊಳ ಅತ್ಯಂತ ಪ್ರಮುಖ ಜೈನ ಕೇಂದ್ರವಾಗಿ ಬೆಳೆಯಿತು. ಶ್ರವಣಬೆಳಗೊಳದಲ್ಲಿ ಅನೇಕ ಬಸದಿಗಳು ನಿರ್ಮಿಸಲ್ಪಟ್ಟವು. ರಾಷ್ಟ್ರಕೂಟರ ಕಾಲದಲ್ಲಿ ದಖ್ಖನ್ನಿನಲ್ಲಿ ಜನಸಂಖ್ಯೆಯ ಮೂರನೆಯ ಒಂದು ಭಾಗ ದೈನ ಧರ್ಮೀಯರಿಂದ್ದರೆಂದು ತಿಳಿದು ಬರುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ದಾರ್ಶನಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉದ್ಗ್ರಂಥಗಳನ್ನು ರಚಿಸಲಾಯಿತು. ಜೈನಧರ್ಮದ ವಿದ್ವಾಂಸರುಗಳು ವಿದ್ಯಾಭ್ಯಾಸ ಪ್ರಚಾರಕ್ಕೂ ಹೆಚ್ಚು ಸೇವೆಯನ್ನು ಸಲ್ಲಿಸಿದರು.

### 16.5.3 ಹಿಂದೂ ಧರ್ಮ

ಸಾಂಪ್ರದಾಯಿಕ ವೈದಿಕ ಧರ್ಮ ಕ್ರೋಢೀಕೃತಗೊಂಡು ಹಿಂದೂ ಧರ್ಮವೆಂದು ಪ್ರಚಾರಕ್ಕೆ ಈ ವೇಳೆಗೆ ಬಂತು. ಶೈವಧರ್ಮ, ವೈಷ್ಣವಧರ್ಮ ಮತ್ತು ಶಕ್ತಿಪಂಥಗಳಿಂದ ಕೂಡಿತ್ತು. ರಾಷ್ಟ್ರಕೂಟ ಸಾಮ್ರಾಟರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದರು. ಅವರ ರಾಜಮುದ್ರೆಯು ವಿಷ್ಣುವಿನ ವಾಹನವಾದ ಗರುಡನ ವಿಗ್ರಹವನ್ನು ಹೊಂದಿದೆ. ಹಲವು ಬಾರಿ ಯೋಗಿಯ ಭಂಗಿಯಲ್ಲಿ ಕುಳಿತಿರುವ ಶಿವನ ವಿಗ್ರಹವನ್ನು ಕೂಡ ರಾಜಮುದ್ರೆ ಹೊಂದಿದೆ. ರಾಷ್ಟ್ರಕೂಟರ ತಾಮ್ರ ಪತ್ರಗಳಲ್ಲಿ ಶಾಸನಗಳು ಶಿವ ಮತ್ತು ವಿಷ್ಣುವಿನ ಸ್ತೋತ್ರದೊಂದಿಗೆ ಪ್ರಾರಂಭವಾಗುತ್ತವೆ. ರಾಷ್ಟ್ರಕೂಟ ಸಾಮ್ರಾಟರು ವೈಷ್ಣವ ಮತ್ತು ಶೈವ ಪಂಥಗಳಿಗೆ ಸಂಬಂಧಿಸಿದ ಬಿರುದುಗಳನ್ನು ಧರಿಸಿದರು. ಅವರು ಪರಮ ಮಹೇಶ್ವರ ಮತ್ತು ಕೀರ್ತಿ ನಾರಾಯಣ ಎಂಬ ಬಿರುದುಗಳನ್ನು ಧರಿಸಿದರು. ಅವರು ವಿಷ್ಣು ಮತ್ತು ಶಿವನಿಗೆ ಸಂಬಂಧಿಸಿದ ದೇವಸ್ಥಾನಗಳನ್ನು ನಿರ್ಮಿಸಿದರು. ಅಮೋಘವರ್ಷನು ಜೈನ ಮತಾವಲಂಬಿಯಾಗಿದ್ದರೂ ಅವನು ಚರಿತ್ರಾರ್ಹವಾದ ಉದಾರ ಮತೀಯ ನೀತಿಯನ್ನನುಸರಿಸಿದನು. ತನ್ನ ರಾಜ್ಯದಲ್ಲಿ ಯಾವುದೋ ಉಪದ್ರವ ತಲೆದೋರುವುದೆಂದು

ತಿಳಿದು ಪ್ರಜೆಗಳ ಕಲ್ಯಾಣಕ್ಕಾಗಿ ಅದರ ನಿವರಣಾರ್ಥವಾಗಿ ತನ್ನ ಕೈಬೆರಳೊಂದನ್ನು ಭೇದಿಸಿ ಕೊಲ್ಲಾಪುರದ ಮಹಾಲಕ್ಷ್ಮೀ ದೇವತೆಗೆ ಅರ್ಪಿಸಿದನು. ನೃಪತುಂಗ ಚಕ್ರವರ್ತಿಯ ಸರ್ವಧರ್ಮ ಸಮತಾಭಾವನೆ ಸರ್ವಕಾಲಕ್ಕೂ ಆದರ್ಶವಾಗಿದೆ.

ಗುಪ್ತರ ಕಾಲದಲ್ಲಿ ಪ್ರಾರಂಭವಾದ ಹಿಂದೂ ಧರ್ಮದ ಪುನರುಜ್ಜೀವನ ಈ ವೇಳೆಗೆ ಅದರ ಪರಾಕಾಷ್ಠತೆಯನ್ನು ಮುಟ್ಟಿತು. ದಖನ್‌ನಲ್ಲಿಯೂ ಪುನರುಜ್ಜೀವನದ ಕೆಲಸ ಪ್ರಾರಂಭವಾಯಿತು. ಶಂಕರಾಚಾರ್ಯರಿಗಿಂತ ಮೊದಲು ಅನೇಕ ವಿದ್ವಾಂಸರು ವೇದಗಳಿಗೆ ಸಂಬಂಧಿಸಿದಂತೆ ಅನೇಕ ಭಾಷ್ಯಗಳನ್ನು ರಚಿಸಿದ್ದರು. ಆದರೆ ರಾಷ್ಟ್ರಕೂಟರ ಕಾಲದಲ್ಲಿ ಜೀವಿಸಿದ್ದ ಶಂಕರಾ ಚಾರ್ಯರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ಭಾರತದಲ್ಲೆಲ್ಲ ಸಂಚರಿಸಿ ನಾಲ್ಕು ಪ್ರಮುಖ ಮಠಗಳನ್ನು ಸ್ಥಾಪಿಸಿದರು. ಉತ್ತರದಲ್ಲಿ ಬದರಿ, ದಕ್ಷಿಣದಲ್ಲಿ ಶೃಂಗೇರಿ, ಪೂರ್ವದಲ್ಲಿ ಪುರಿ ಮತ್ತು ಪಶ್ಚಿಮದಲ್ಲಿ ದ್ವಾರಕೆಯಲ್ಲಿ ಮಠಗಳನ್ನು ಶಂಕರರು ಸ್ಥಾಪಿಸಿದರು. ಶೃಂಗೇರಿಯಲ್ಲಿ ಸ್ಥಾಪಿಸಲ್ಪಟ್ಟ ಮಠವು ಕರ್ನಾಟಕದಲ್ಲಿ ಶೈವಧರ್ಮದ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸಿತು.

ರಾಷ್ಟ್ರಕೂಟರ ಅನೇಕ ಶಾಸನಗಳು ವಿವಿಧ ದೇವತೆಗಳಿಗೆ ದೇವಸ್ಥಾನಗಳನ್ನು ನಿರ್ಮಿಸಿದುದರ ಬಗ್ಗೆ ವಿವರಿಸುತ್ತವೆ. ಬ್ರಹ್ಮ, ವಿಷ್ಣು, ಮಹೇಶ್ವರ, ಸರಸ್ವತಿ, ಕಲ್ಯಾಣಿ, ದುರ್ಗಿ, ಲಕ್ಷ್ಮಿ, ಮೊದಲಾದ ದೇವತೆಗಳಿಗೆ ದೇವಸ್ಥಾನಗಳನ್ನು ನಿರ್ಮಿಸಿದರು. ಕಲ್ಲುಗಳ, ನಾಗಪೂಜೆಯ ಬಗ್ಗೆ ಮತ್ತು ಇನ್ನಿತರ ವಸ್ತುಗಳ ಪೂಜೆಯನ್ನು ಈ ಕಾಲದ ಜನರು ಮಾಡುತ್ತಿದ್ದರೆಂದು ವಿದೇಶಿ ಪ್ರವಾಸಿಗರು ವಿವರಿಸಿರುವರು. ಅದರಲ್ಲೂ ವಿಶೇಷವಾಗಿ ಅರಬ್ ದೇಶದ ಪ್ರವಾಸಿಗ ಅಲ್-ಇದ್ರಿಸಿಯು ಹಿಂದೂಗಳ ಪೂಜಾ ವಿಧಾನದ ಬಗ್ಗೆ ವಿವರಿಸಿರುವನು. ಸಮಾಜದ ಮೇಲ್ವರ್ಗದ ಜನರು ವ್ರತಗಳನ್ನು ಆಚರಿಸುತ್ತಿದ್ದರು. ಇನ್ನೂ ಅನೇಕ ರೀತಿಯ ಸಂಪ್ರದಾಯಗಳು ಆಚರಣೆಯಲ್ಲಿದ್ದವು. ಈ ಕಾಲದ ಶಾಸನಗಳು ಅಶ್ವಮೇಧಯಾಗ ಮತ್ತು ರಾಜಸೂಯಯಾಗಗಳನ್ನು ರಾಷ್ಟ್ರಕೂಟ ದೊರೆಗಳು ಕೈಗೊಂಡಿದುದರ ಬಗ್ಗೆ ಮಾಹಿತಿ ನೀಡುವುದಿಲ್ಲ.

### 16.5.4 *ಇಸ್ಲಾಂ*

ಎಂಟನೇಯ ಶತಮಾನದ ವೇಳೆಗೆ ಅರಬ್ಬರು ಪಶ್ಚಿಮ ತೀರ ಪ್ರದೇಶದಲ್ಲಿ ನೆಲೆಸಲು ಪ್ರಾರಂಭಿಸಿದರು. ವ್ಯಾಪಾರಕ್ಕೆ ಬಂದಂತಹ ಅರಬ್ - ಮುಸ್ಲಿಮರು ಹಂತ ಹಂತವಾಗಿ ನೆಲೆಯೂರಿದರು. ರಾಷ್ಟ್ರಕೂಟರು ತಮ್ಮ ಉದಾರ ಧಾರ್ಮಿಕ ನೀತಿಯಿಂದಾಗಿ ಮುಸ್ಲಿಮರು ಮಸೀದಿಗಳನ್ನು ನಿರ್ಮಿಸಲು ಅನುಮತಿ ನೀಡಿದರು. ಸುಲೇಮಾನನು ರಾಷ್ಟ್ರಕೂಟ ಅರಸರು ಮುಸ್ಲಿಮರಿಗೆ ನೀಡಿದ ಪ್ರೋತ್ಸಾಹದ ಬಗ್ಗೆ ಹೊಗಳಿ ಬರೆದಿದ್ದಾನೆ.

## 16.6 ರಾಷ್ಟ್ರಕೂಟರ ಕಲೆ ಮತ್ತು ವಾಸ್ತುಶಿಲ್ಪ

ಬಾದಾಮಿ ಚಾಲುಕ್ಯರಂತೆಯೇ ಮಾನ್ಯಖೇಟದ ರಾಷ್ಟ್ರಕೂಟರು ಕೂಡ ಭವ್ಯ ಸ್ಮಾರಕಗಳನ್ನು ನಿರ್ಮಿಸಿ ಕಲೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಕಲೆಯಲ್ಲಿ ಬಾದಾಮಿ ಚಾಲುಕ್ಯರ ಸಂಪ್ರದಾಯವನ್ನು ರಾಷ್ಟ್ರಕೂಟರು ಅಳವಡಿಸಿಕೊಂಡರೂ ಕೂಡ, ಅದನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸಿ ಶ್ರೇಷ್ಠತೆಯನ್ನು ಸಾಧಿಸಿದರು. ಇದಕ್ಕೆ ಎಲ್ಲೋರ ಮತ್ತು ಎಲಿಫೆಂಟಾದಲ್ಲಿರುವ ಸ್ಮಾರಕಗಳು ಉತ್ತಮ ಉದಾಹರಣೆಗಳಾಗಿವೆ. ರಾಷ್ಟ್ರಕೂಟರು ಗುಹಾಲಯಗಳು ಮತ್ತು ಏಕಶಿಲಾದೇವಾಲಯಗಳ ಜೊತೆಗೆ ಅನೇಕ ಬಿಡಿ ಕಲ್ಲಿನ ದೇವಸ್ಥಾನಗಳನ್ನು ನಿರ್ಮಿಸಿದ್ದಾರೆ. ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ದೇವಸ್ಥಾನಗಳನ್ನು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಾಣಬಹುದಾಗಿದೆ.

### 16.6.1 *ಗುಹದೇವಾಲಯಗಳು ಹಾಗೂ ಏಕಶಿಲಾ ದೇವಾಲಯಗಳು*

ರಾಷ್ಟ್ರಕೂಟರ ಸುಪ್ರಸಿದ್ಧ ಗುಹಾದೇವಾಲಯಗಳು ಎಲ್ಲೋರಾ, ಜೋಗೇಶ್ವರಿ, ಧಾರೇಶ್ವರ ಮತ್ತು ಎಲಿಫಂಟಾದಲ್ಲಿವೆ. ಇವರ ಕಾಲದಲ್ಲಿ ಗುಹಾದೇವಾಲಯಗಳಲ್ಲದೆ, ಒಂದೇ ಕಲ್ಲಿನಲ್ಲಿ ಕಂಡರಿಸಿದ ದೇವಾಲಯಗಳು ನಿರ್ಮಾಣಗೊಂಡವು.

ಎಲ್ಲೋರದ ದಶಾವತಾರ ಗುಹಾಲಯ ರಾಷ್ಟ್ರಕೂಟ ಕಾಲದ ಗುಹಾಲಯಗಳಲ್ಲಿ ಅತೀ ಪ್ರಾಚೀನವೆಂದು ಪರಿಗಣಿಸಲ್ಪಟ್ಟಿದೆ. ಆದರೂ ಎಲಿಫಂಟಾದ ಶೈವ ಗುಹಾಲಯಗಳು ಕಲಾ ಇತಿಹಾಸಕಾರರ ಮನಸ್ಸನ್ನು ಹೆಚ್ಚು ಆಕರ್ಷಿಸಿವೆ. ಪ್ರಾಚೀನ ಘಾರಾಪುರಿಯಾದ ಎಲಿಫಂಟಾ ಮುಂಬೈಯಿಂದ ಸುಮಾರು 9 ಕಿ.ಮಿ. ದೂರವಿರುವ ಒಂದು ನಡುಗಡ್ಡೆ. ಅಲ್ಲಿಯ ಮುಖ್ಯ ಗುಹಾಲಯ ದೇವಾಲಯವು

130 ಅಡಿ ಚಚ್ಚೌಕ ಇರುವುದು. ಅದರಲ್ಲಿ 30 ದೊಡ್ಡ ದೊಡ್ಡ ಕಂಬಗಳುಳ್ಳ ಮಹಾ ಮಂಟಪವಿದೆ. ಮಂಟಪದ ಹಿಂದಿನ ಭಾಗದಲ್ಲಿ ನಾಲ್ಕೂ ದಿಕ್ಕಿಗೆ ಬಾಗಿಲುಳ್ಳ ಗರ್ಭಗೃಹವಿದೆ. ಇದರಲ್ಲಿ ಶಿವಲಿಂಗವಿದೆ.

ಈ ಗುಹೆಯು ವಾಸ್ತು ಶೈಲಿಗಾಗಿ ಅಷ್ಟು ಪ್ರಸಿದ್ಧಿ ಪಡೆದಿರದೆ, ಅಲ್ಲಿಯ ಮಹೇಶ ಮೂರ್ತಿಯಿಂದಾಗಿ ಜಗತ್ ಪ್ರಸಿದ್ಧವಾಗಿದೆ. ಈ ಬೃಹದಾಕಾರದ ಮೂರ್ತಿಯನ್ನು ದಕ್ಷಿಣದ ಗೋಡೆಯಲ್ಲಿ ಎರಡು ಅರ್ಧ ಕಂಬಗಳ ಮಧ್ಯೆ ಕೊರೆಯಲಾಗಿದೆ. ಈ ಮೂರ್ತಿ ಸುಮಾರು 18 ಅಡಿ ಎತ್ತರವಿದೆ.

ಸಂಕ್ಷಿಪ್ತವಾಗಿ ಹೇಳಬೇಕಾದರೆ ಈ ಮೂರ್ತಿಯು ಶಿವನ ಮೂರು ಸ್ವರೂಪವನ್ನು ಸಂಕೇತಿಸುವ ಮೂರು ಮುಖ ಮುದ್ರೆಗಳನ್ನು ಪಡೆದಿದೆ- ಭಯಂಕರ ಭೈರವ ರೂಪ, ಶಾಂತ ಶಿವರೂಪ ಮತ್ತು ಅರ್ಧನಾರೀಶ್ವರ ರೂಪವನ್ನು ಹೊಂದಿದೆ.

ಎಲಿಫಂಟಾದಲ್ಲಿರುವ ಇತರ ಶ್ರೇಷ್ಠ ಶಿಲ್ಪಗಳೆಂದರೆ ಶಿವಯೋಗಿಶ್ವರ, ನಟರಾಜ, ಗಂಗಾಧರ ಶಿವ, ಅರ್ಧನಾರೀಶ್ವರ, ಕಲ್ಯಾಣ ಸುಂದರ ಮೂರ್ತಿ, ಅಂಧಕಾಸುರಸಂಹಾರಮೂರ್ತಿ, ರಾವಣನು ಕೈಲಾಸ ಪರ್ವತವನ್ನೆತ್ತುತ್ತಿರುವ ದೃಶ್ಯವಂತೂ ಬಹಳ ಆಕರ್ಷಕವಾಗಿದೆ.

ಎಲ್ಲೋರದ ದಶಾವತಾರ ಗುಹಾಲಯ ಎರಡು ಅಂತಸ್ತಿನಿಂದ ಕೂಡಿದ್ದು ಸಾಕಷ್ಟು ದೊಡ್ಡದಿದೆ. ಶಿಲ್ಪಕಲೆಯ ದೃಷ್ಠಿಯಿಂದ ಪ್ರಮುಖವಾದುದಾಗಿದೆ. ಇದು 15 ನೇ ನಂಬರಿನ ಗುಹೆಯಾಗಿದೆ. ಈ ಗುಹಾಲಯದಲ್ಲಿ ದಂತಿ ದುರ್ಗನ ಶಾಸನವಿರುವುದರಿಂದ ಆತನ ಕಾಲದಲ್ಲಿ ನಿರ್ಮಿತವಾದುದೆಂದು ಹೇಳಬಹುದು. 97 ಅಡಿ ಉದ್ದ ಮತ್ತು 157 ಅಡಿ ಅಗಲವಿರುವ ವಿಸ್ತಾರವಾದ ಒಂದು ಮಂಡಪವೇ ಈ ಗುಹೆಯ ಕೆಳ ಅಂತಸ್ತಿನ ಮುಖ್ಯಭಾಗ. 14 ಚಚ್ಚೌಕಾಕಾರದ ಕಂಬಗಳು ಇವೆ. ಇಲ್ಲಿಂದ ಮೆಟ್ಟಲಿನ ಮೂಲಕ ಮೇಲೇರಿ ಹೋದರೆ ದೊಡ್ಡ ವಿಸ್ತಾರವಾದ ಮಂಟಪವನ್ನು ಪ್ರವೇಶಿಸುತ್ತೇವೆ. ಇದು 105 ಉದ್ದ ಮತ್ತು 95 ಅಡಿ ಅಗಲವಿದೆ. ಇಲ್ಲಿ ಒಂದೊಂದು ಸಾಲಿನಲ್ಲಿ ಒಂಬತ್ತು ಕಂಬಗಳಿರುವ ಆರು ಸಾಲುಗಳಿವೆ. ಇಲ್ಲಿನ ಸುತ್ತಲಿನ ಗೋಡೆಗಳಲ್ಲಿನ ಶಿಲ್ಪಗಳು ಅದ್ಭುತವಾಗಿವೆ. ಗರ್ಭಗುಡಿಯಲ್ಲಿ ವರ್ತುಲಾಕಾರದ ಲಿಂಗ ಪೀಠವಿದೆ.

ರಾಷ್ಟ್ರಕೂಟ ಒಂದನೆಯ ಕೃಷ್ಣನ ಕಾಲದಲ್ಲಿ ಎಲ್ಲೋರದಲ್ಲಿ ಒಂದೇ ಶಿಲೆಯಲ್ಲಿ ಕೈಲಾಸ ದೇವಾಲಯವನ್ನು ಕೊರೆಯಲಾಯಿತು. ಈ ದೇವಾಲಯದ ಶಿಲ್ಪವೊಂದರಲ್ಲಿ ರಾವಣನು ಕೆಲಾಸ ಪರ್ವತವನ್ನೆತ್ತುತ್ತಿರುವ ದೃಶ್ಯವಿರುವುದರಿಂದ ಈ ದೇವಾಲಯಕ್ಕೆ ಕೈಲಾಸ ದೇವಾಲಯವೆಂದು ಹೆಸರು ಬಂದಿದೆ. ಈ ದೇವಾಲಯದ ಸಂಕೀರ್ಣವನ್ನು ಒಂದೇ ಕಲ್ಲಿನಲ್ಲಿ ಮೇಲಿನಿಂದ ಕೆಳಕ್ಕೆ ಕಡಿದು ನಿರ್ಮಿಸಲಾಗಿದೆ. ಇದರಲ್ಲಿ ಮಂಟಪಗಳು, ನಂದಿಮಂಟಪ ಮತ್ತು ಚಿಕ್ಕ ಪುಟ್ಟ ಪರಿಮಾರ ದೇವತಾ ದೇವಾಲಯಗಳಿವೆ. ಮುಖ್ಯ ದೇವಾಲಯವು ಅದ್ಭುತವಾಗಿದ್ದು, ದ್ರಾವಿಡ ಶಿಖರವನ್ನೊಳಗೊಂಡಿದೆ. ಶಿಖರದಲ್ಲಿ ಸುಕನಾಸವಿರುವುದು ಗಮನಾರ್ಹ ಸಂಗತಿ. ಮೂಲತಃ ಕನ್ನೇಶ್ವರ ಅಥವಾ ಕೃಷ್ಣೇಶ್ವರ ಎಂಬ ಹೆಸರುಳ್ಳ ಈ ದೇವಾಲಯದ ಯಥಾವತ್ ವರ್ಣನೆ ರಾಷ್ಟ್ರಕೂಟ ತಾಮ್ರ ಶಾಸನವೊಂದರಲ್ಲಿ ಬಂದಿದೆ. ಈ ದೇವಾಲಯ ಮತ್ತು ಅದರ ಸಂಕೀರ್ಣದಲ್ಲಿರುವ ಮೂರ್ತಿಗಳು ಹೆಚ್ಚಾಗಿ ಶೈವಧರ್ಮಕ್ಕೆ ಸೇರಿವೆ. ಇವುಗಳಲ್ಲಿ ರಾವಣನು ಕೈಲಸ ಪರ್ವತವನ್ನೆತ್ತುತ್ತಿರುವ ಸಾಹಸಮಯ ದೃಶ್ಯ - ಈ ಶಿಲ್ಪದ ಮೇಲೆ ಬೀರುವ ಬೆಳಕು, ಕತ್ತಲೆಗಳು ನೋಡುಗರ ಭಾವನೆಯನ್ನು ಕೆರಳಿಸುತ್ತವೆ. ಪ್ರಸಿದ್ಧ ಕಲಾ ವಿಮರ್ಶಕರಾದ ಸ್ಟೆಲ್ಲಾ ಕ್ಯಾಮರಿಷ್ ಇಲ್ಲಿಯ ಶಿಲ್ಪಗಳನ್ನು ಬಹಳವಾಗಿ ಮೆಚ್ಚಿದ್ದಾರೆ. ಈ ದೇವಾಲಯದ ಸಂಕೀರ್ಣದಲ್ಲಿ ಕಂಡು ಬರುವ ಇತರ ಶಿಲ್ಪಗಳೆಂದರೆ ಶಿವನಟರಾಜ, ತ್ರಿವಿಕ್ರಮ, ವರಾಹಮೂರ್ತಿ, ನರಸಿಂಹ, ಮಹಿಷಮರ್ದಿನಿ, ರಾವಣ-ಜಟಾಯು ಯುದ್ಧ ಮತ್ತು ರಾವಣನು ಕೈಲಾಸವನ್ನೆತ್ತುತ್ತಿರುವ ಶಿಲ್ಪಗಳು.

ದೇವಾಲಯದ ಮುಖ ಮಂಟಪದ ಎದುರಿಗೆ ಒಂದು ನಂದಿ ಗುಡಿ ಇದೆ. ದೇವಾಲಯಕ್ಕೂ ಮತ್ತು ನಂದಿ ಮಂಟಪಕ್ಕೆ ಒಂದು ಕಲ್ಲು ಸೇತುವೆಯ ಮೂಲಕ ಸಂಬಂಧ ಕಲ್ಪಿಸಲಾಗಿದೆ. ನಂತರ ನಂದಿ ಮಂಟಪದ ಅಕ್ಕಪಕ್ಕಗಳಲ್ಲಿ ಎರಡೂ ಕಡೆ ನಿರ್ಮಿಸಿರುವ ಎರಡು ಕೀರ್ತಿ ಸ್ತಂಭಗಳನ್ನು ನೋಡಬಹುದು. ಅವುಗಳನ್ನು ಧ್ವಜ ಸ್ತಂಭಗಳೆಂದು ಕರೆಯುವರು.

ಪರ್ಸಿಬ್ರೌನ್‌ರವರು "ದೇವಾಲಯ ಬಹಳ ವಿಶಿಷ್ಟವಾಗಿದ್ದು ಅದನ್ನು ಮೀರಿಸುವಂತಹ ಮತ್ತೊಂದು ಕಲಾಕೃತಿ ಭಾರತದಲ್ಲಿ ಬೇರೆಲ್ಲೂ ಇಲ್ಲ. ಅದರ ಸಮೂಹದಲ್ಲಿ ನಿಂತಾಗ ನಮಗೆ ಬೇರೆ ಒಂದು ಪ್ರಪಂಚದಲ್ಲಿ ಇರುವಂತೆ ಭಾಸವಾಗುತ್ತದೆ. ಭೂಮಿಯ ಮೇಲಿ ಇದೊಂದು ಅದ್ಭುತ ಕೆತ್ತನೆ. ಯೋಚನಾ ಲಹರಿಯಲ್ಲಿದ್ದರೆ ಹೊಸ ಜನ್ಮ ಬಂದಂತಾಗುತ್ತದೆ. ಈ ಪ್ರಾಚೀನ ಕಲಾಕೃತಿಯನ್ನು

ವೀಕ್ಷಿಸಿದರೆ ಯಾವುದೋ ಲೋಕ ಪ್ರವೇಶಿಸಿದಂತಾಗುತ್ತದೆ. ಇದನ್ನು ಕೆತ್ತಿದ ಶಿಲ್ಪಿಯು ಹೊಸ ಪ್ರಯೋಗ ಕೈಗೊಂಡು ತನಗೆ ಹೊಳದ ರೀತಿಯಲ್ಲಿ ಹೊಸ ವಿಧಾನ ಅಳವಡಿಸಿಕೊಂಡಿದ್ದಾನೆ. ಅಲ್ಲಿಯ ಪ್ರತಿಯೊಂದು ಭಾಗವು ತನ್ನದೇ ಆದ ಅರ್ಥವನ್ನು ಹೊಂದಿದೆ. ಅದರ ಆಕರ್ಷಣೆಗೆ ಮನುಷ್ಯನ ಮನಸ್ಸು ಮತ್ತು ಹೃದಯ ಕೈಗಳು ಎಲ್ಲವೂ ಏಕಕಾಲದಲ್ಲಿ ಕಾರ್ಯನಿರ್ವಹಿಸಿದ ಅಪೂರ್ವ ನಿದರ್ಶನ " ಎಂದು ವರ್ಣಿಸಿದ್ದಾರೆ.

ಎಲ್ಲೋರಾದಲ್ಲಿಯ ಜೈನ ಗುಹಾಲಯಗಳು ರಾಷ್ಟ್ರಕೂಟ ಶೈಲಿಯ ಕೊನೆಯ ಹಂತವನ್ನು ಪ್ರತಿನಿಧಿಸುತ್ತದೆ. ಏಕಶಿಲೆಯಲ್ಲಿ ಕೊರೆದಿರುವ ಇಲ್ಲಿಯ "ಛೋಟಾ ಕೈಲಾಸ ದೇವಾಲಯ" ದೊಡ್ಡ ಕೈಲಾಸ ದೇವಾಲಯದ ಅನುಕರಣೆ. ಇದಕ್ಕೆ ಮೂರು ಅಂತಸ್ತಿನ ವಿಮಾನವಿದೆ. ಪ್ರಾಕಾರದ ಮುಂಭಾಗದಲ್ಲಿರುವ ಗೋಪುರ ಕೂಡ ಏಕಶಿಲಾರಚಿತ. ಇಂದ್ರ ಸಭಾ ಮತ್ತು ಜಗನ್ನಾಥ ಸಭಾ ಗುಹಾಲಯಗಳು ಕೂಡ ಜೈನ ಸಂಪ್ರದಾಯಕ್ಕೆ ಸೇರಿದವುಗಳು. ಇಂದ್ರ ಸಭಾದ ಒಂದು ವೈಶಿಷ್ಟ್ಯವೆಂದರೆ ಅದರ ಮೊಗಸಾಲೆಯ ಎರಡೂ ಬದಿಗಳಲ್ಲಿ ಇಂದ್ರ ಮತ್ತು ಶುಚಿದೇವಿಯರ ಬೃಹದಾಕಾರದ ಮೂರ್ತಿಗಳನ್ನು ಕೆತ್ತಿರುವುದು. ಈ ಗುಹಾಲಯದ ಗೋಡೆಗಳಲ್ಲಿ ಶಾಂತಿನಾಥ, ಪಾರ್ಶ್ವನಾಥ, ಮುಂತಾದ ತೀರ್ಥಂಕರರ ಮೂರ್ತಿಗಳನ್ನು ಕೆತ್ತಲಾಗಿದೆ. 'ಇಂದ್ರ ಸಭೆ' ರಾಷ್ಟ್ರಕೂಟರು ಎಲ್ಲೋರಾದಲ್ಲಿ ನಿರ್ಮಿಸಿದ ಜೈನ ಗುಹಾಲಯಗಳಲ್ಲಿ ಪ್ರಾಯಶಃ ಮೊದಲನೆಯದು.

### *16.6.2 ಕಟ್ಟಡ ಶೈಲಿಯ ದೇವಾಲಯಗಳು*

ಬಾದಾಮಿಯ ಚಾಲುಕ್ಯ ಶಿಲ್ಪಿಗಳಂತೆ ರಾಷ್ಟ್ರಕೂಟ ಸ್ಥಪತಿಗಳು ಕೂಡ ದೇವಾಲಯ ಕಟ್ಟಲು ಕೆಂಪು ಉಸುಕು ಕಲ್ಲನ್ನೇ ಬಳಸಿದ್ದಾರೆ. ರಾಷ್ಟ್ರಕೂಟರ ಆಳ್ವಿಕೆಯ ಕೊನೆಯ ಅವಧಿಯಲ್ಲಿ ಕೆಲವು ಸ್ಥಾನದ ಕಂಬ ಹಾಗೂ ಇತರ ಕೆಲವು ಭಾಗಗಳನ್ನು ಬಳಪದ ಕಲ್ಲಿನಿಂದ ನಿರ್ಮಿಸಲಾಗಿದೆ.

ರಾಷ್ಟ್ರಕೂಟರ ಕಾಲದ ದೇವಾಲಯಗಳು ವಿವಿಧ ಬಗೆಯ ತಲವಿನ್ಯಾಸವುಳ್ಳವುಗಳಾಗಿವೆ. ಈ ಕಾಲದ ದೇವಾಲಯಗಳು ಹೆಚ್ಚಾಗಿ ಏಕಕೂಟದವು. ಇವುಗಳ ತಲವಿನ್ಯಾಸ ಕೂಡ ವಿವಿಧ ಬಗೆಯಾಗಿದೆ.

ರಾಷ್ಟ್ರಕೂಟರ ಕಾಲದ ಬಹುತೇಕ ಎಲ್ಲ ದೇವಾಲಯಗಳ ಅಧಿಷ್ಠಾನ ಹೆಚ್ಚು ಎತ್ತರವಾಗಿರುವುದಿಲ್ಲ. ಕೆಲವೆಡೆ ಅಧಿಷ್ಠಾನದ ಚೌಕ ಭಾಗಗಳು ಉಬ್ಬು ಶಿಲ್ಪಗಳಿಂದ ಅಲಂಕೃತವಾಗಿರುವುದೂ ಉಂಟು.

ಬಾದಾಮಿಯ ಚಾಲುಕ್ಯರ ಕಾಲದ ದೇವಾಲಯಗಳ ಹೊರಗೋಡೆಗಳನ್ನಲಂಕರಿಸಿದ ಕೋಷ್ಠಕಗಳು ರಾಷ್ಟ್ರಕೂಟರ ಕಾಲದ ದೇವಾಲಯಗಳಲ್ಲಿಯೂ ಮುಂದುವರಿಯುವ ಜೊತೆಗೆ ಅವುಗಳ ಸಂಖ್ಯೆಯೂ ಹೆಚ್ಚಿತು. ಕುಕ್ಕನೂರಿನ ನವಲಿಂಗ ದೇವಾಲಯದ ಹೊರಗೋಡೆಗಳು ರಾಷ್ಟ್ರಕೂಟರ ಆಳ್ವಿಕೆಯ ಕಾಲದ ದೇವಾಲಯದ ಗೋಡೆಗಳ ಸವಿವರ ಅಧ್ಯಯನಕ್ಕೆ ಸಾಮಗ್ರಿಗಳನ್ನೊದಗಿಸುತ್ತವೆ. ಎದ್ದು ಕಾಣುವ ಎತ್ತರವಾದ ಅರ್ಧಗಂಬಗಳು, ಸಾದಾರಣ ಎತ್ತರದ ಅರ್ಧಕಂಬಗಳ ಮತ್ತು ಕೋಷ್ಠಗಳು ಇಲ್ಲಿವೆ. ಈ ಕೋಷ್ಠಗಳು ಬಾದಾಮಿಯ ಚಾಲುಕ್ಯರ ಕಾಲದ ಕೋಷ್ಠಗಳಿಗಿಂತ ಹೆಚ್ಚು ಆಳವಾಗಿದ್ದು, ಸಾಮಾನ್ಯವಾಗಿ ಮೂರ್ತಿ ಶಿಲ್ಪವನ್ನೊಳಗೊಂಡಿರುತ್ತವೆ.

ರಾಷ್ಟ್ರಕೂಟರ ದೇವಾಲಯಗಳಲ್ಲಿ ಅನೇಕ ಭಾಗಗಳ ಅಲಂಕರಣಕ್ಕಾಗಿ ಮಕರ ತೋರಣವನ್ನು ಉಪಯೋಗಿಸಲಾಗಿದೆ. ಗರ್ಭಗೃಹ ದ್ವಾರದ ಅಲಂಕರಣೆಗೂ ಮಕರ ತೋರಣವನ್ನು ಬಳಸಿದುದನ್ನು ಈ ಕಾಲದ ದೇವಾಲಯಗಳನ್ನು ಕಾಣಬಹುದು.

ರಾಷ್ಟ್ರಕೂಟ ಆಳ್ವಿಕೆಯ ಆರಂಭದ ದೇವಾಲಯಗಳಲ್ಲಿ ಮಂಜೂರಿನ ಕೆಳಗೆ, ಗೋಡೆಯ ಮೇಲ್ಭಾಗಕ್ಕೆ ಹತ್ತಿಕೊಂಡಂತೆ ಸಾಲಾಗಿ ಹಂಸ ಪಕ್ಷಿಗಳಿರುವುದನ್ನು ಇಲ್ಲಿ ಸ್ಮರಿಸಬಹುದು. ಇಂತಹ ಅಲಂಕಾರ ಶೈಲಿಯನ್ನು ರಾಷ್ಟ್ರಕೂಟರು ಎಂಟು ಮತ್ತು ಒಂಬತ್ತನೆಯ ಶತಮಾನಗಳ ತಮ್ಮ ದೇವಾಲಯಗಳಲ್ಲಿ ಮುಂದುವರಿಸಿದರು. ಇಂತಹ ಅಲಂಕಾರಿಕ ಹಂಸ ಪಕ್ಷಿಗಳನ್ನು ಕುಕ್ಕನೂರಿನ ನವಲಿಂಗ, ಹಳ್ಳೂರಿನ ಮೇಲ್ಗುಡಿ ದೇವಾಲಯಗಳಲ್ಲಿ ಕಾಣಬಹುದು.

ರಾಷ್ಟ್ರಕೂಟರ ಕಾಲದ ದೇವಾಲಯಗಳ ಗೋಡೆಗಳಲ್ಲಿ ಜಾಲಾಂಧ್ರಗಳನ್ನು ಅಳವಡಿಸುವ ಸಂಪ್ರದಾಯ ಮುಂದುವರೆಯಿತು. ಆದರೆ ಈ ಕಾಲದ ಜಾಲಾಂಧ್ರಗಳು ಸರಳವಾಗಿವೆ. ಹಳ್ಳೂರಿನ ಮೇಲ್ಗುಡಿಯಲ್ಲಿ ಕಾಣಬರುವ ಜಾಲಾಂಧ್ರಗಳು ದೊಡ್ಡ ಪ್ರಮಾಣದ್ದಾಗಿವೆ.

ರಾಷ್ಟ್ರಕೂಟರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಎರಡು ವಿಧಧ ಕಂಬಗಳನ್ನು ಕಾಣಬಹುದು. ಮೊದಲನೆಯ ವಿಧಧ ಕಂಬಗಳ ಚೌಕಾಕಾರವಾಗಿದ್ದು ಕಾಂಡ ಭಾಗದಲ್ಲಿ ಅಡ್ಡ ಪಟ್ಟಿಕೆಗಳಿಂದ ಕೂಡಿವೆ. ಕೆಲವೆಡೆ ಈ ಅಡ್ಡ ಪಟ್ಟಿಕೆಗಳಲ್ಲಿ ಪತ್ರಲತೆ, ಲತಾ ಸುಳಿವು, ಮಣಿಸರ, ಪ್ರಾಣಿ, ಮನುಷ್ಯ, ದೇವತೆಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಎರಡನೆಯ ವಿಧಧ ಕಂಬಗಳಲ್ಲಿ ಚೌಕಾಕಾರದ ಮತ್ತು ದುಂಡಾಕಾರದ ಭಾಗಗಳಿವೆ. ಈ ಕಂಬಗಳನ್ನು ಚೌಕಾಕಾರದ ಪೀಠದ ಮೇಲೆ ಬಾಗಿದ್ದು ಇವುಗಳ ಕೆಳಭಾಗ ಚೌಕಾವಾಗಿದ್ದರೆ, ಮೇಲ್ಭಾಗ ದುಂಡಾಗಿದೆ.

ಗರ್ಭಗೃಹದ ದ್ವಾರದ ಚೌಕಟ್ಟು ಸಾಮಾನ್ಯವಾಗಿ ಹೆಚ್ಚು ಅಲಂಕಾರಿಕವಾಗಿರುವುದಿಲ್ಲ.

ಭೀಮಾ ನದಿಯ ಬಲದಂಡೆಯ ಮೇಲಿರುವ ಗುಲ್ಬರ್ಗ ಜಿಲ್ಲೆಯ ಸಿರಿವಾಳದಲ್ಲಿ ಇಪ್ಪತ್ತಕ್ಕೂ ಮೇಲ್ಪಟ್ಟು ದೇವಾಲಯಗಳಿದ್ದು ಇವು ರಾಷ್ಟ್ರಕೂಟರ ಕಾಲಕ್ಕೆ ಸೇರಿದವುಗಳಾಗಿವೆ. ಇವುಗಳಲ್ಲಿ ಪ್ರಮುಖವಾಗಿರುವ ದೇವಾಲಯವು ಗರ್ಭಗೃಹ. ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ.

ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ಬಸದಿಗಳಲ್ಲಿ ಹಳ್ಳೂರಿನ ಮೇಲ್ಗುಡಿ ಮತ್ತು ಪಟ್ಟದಕಲ್ಲಿನ ಜೈನ ಬಸದಿ ಮುಖ್ಯವಾದವುಗಳಾಗಿವೆ. ಇವೆರಡು ಬಸದಿಗಳಲ್ಲಿ ಒಂದರ ಮೇಲೆ ಮತ್ತೊಂದರಂತೆ ಎರಡು ಗರ್ಭಗೃಹಗಳಿವೆ. ಹಳ್ಳೂರಿನ ಮೇಲ್ಗುಡಿಯಲ್ಲಿ ಗರ್ಭಗೃಹ, ಪ್ರದಕ್ಷಿಣಾಪಥ ಮತ್ತು ಸಭಾಮಂಟಪಗಳಿವೆ. ಮೇಲ್ಗುಡಿಯಲ್ಲಿ ದೊಡ್ಡ ಪ್ರಮಾಣದ ಜಾಲಾಂಧ್ರಗಳಿದ್ದು, ಇವು ಹೆಚ್ಚು ಅಲಂಕಾರಿಕವಾಗಿಲ್ಲ. ಜಾಲಾಂಧ್ರಗಳು ಚತುಷ್ಕೋಣಾಕೃತಿಯ ಅರ್ಧಗರೆಗಳು ಮತ್ತು ಎಂಟು ದೊಡ್ಡ ಆಕಾರದ ಮೂರ್ತಿಗಳನ್ನು ಹೊರಗೋಡೆಗಳಲ್ಲಿ ಕಾಣಬಹುದು. ಈ ಮೂರ್ತಿಗಳಲ್ಲಿ ನಾಲ್ಕು ಪಾರ್ಶ್ವನಾಥನವು; ಉಳಿದವು ಬಾಹುಬಲಿಯವು. ಪಟ್ಟದ ಕಲ್ಲಿನ ಪ್ರದಕ್ಷಿಣಾಪಥ ಸಹಿತ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಇದರ ಗರ್ಭಗೃಹದ ಶಿಖರ ದ್ರಾವಿಡ ಶೈಲಿಯಲ್ಲಿದೆ.

ಈ ರೀತಿಯಾಗಿ ರಾಷ್ಟ್ರಕೂಟರ ಕಾಲದಲ್ಲಿ ಭವ್ಯ ಸ್ಮಾರಕಗಳು ನಿರ್ಮಾಣವಾದವು.

## 16.7 ಸಂಕ್ಷಿಪ್ತ ಅವಲೋಕನ

ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ದಖ್ಖಿನ್ನಿನಲ್ಲಿ ಹಲವು ಸಾಮಾಜಿಕ ಬದಲಾವಣೆಗಳನ್ನು ಕಾಣಬಹುದು. ಪ್ರಮುಖ ನಾಲ್ಕು ಜಾತಿಗಳಲ್ಲಿ ಹಲವರು ವಂಶಪಾರಂಪರ್ಯ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಳನ್ನು ಕೈಗೊಳ್ಳುವುದನ್ನು ಕಾಣಬಹುದಾಗಿದೆ. ಅಗ್ರಹಾರಗಳು, ಬ್ರಹ್ಮಪುರಿಗಳು, ದೇವಸ್ಥಾನಗಳು, ಮಠಗಳು ಮತ್ತು ಘಟಿಕಾಗಳು ವ್ಯಾಸಂಗದ ಕೇಂದ್ರಗಳಾಗಿ ಮುಂದುವರಿದವು. ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಉದ್ಗ್ರಂಥಗಳು ರಚಿಸಲ್ಪಟ್ಟವು. ಅದರಲ್ಲೂ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಮುಖ ಹಾಗೂ ಜನಪ್ರಿಯ ಗ್ರಂಥಗಳು ರಚಿತವಾದವು. ಇಂದಿಗೂ ಕೂಡ ಕನ್ನಡ ಸಾಹಿತ್ಯದಲ್ಲಿ ಇವು ಮೇರು ಕೃತಿಗಳೆಂದು ಪರಿಗಣಿಸಲ್ಪಟ್ಟಿವೆ. ರಾಷ್ಟ್ರಕೂಟರ ಕಾಲದಲ್ಲಿ ಜೈನ ಧರ್ಮ ಮತ್ತು ಹಿಂದೂ ಧರ್ಮಗಳೆರಡೂ ರಾಜರ ಪ್ರೋತ್ಸಾಹ ಪಡೆದವು. ಧರ್ಮಕ್ಕೆ ಸಂಬಂಧಿಸಿದಂತೆ ರಾಷ್ಟ್ರಕೂಟ ಅರಸರು ಉದಾರ ನೀತಿಯನ್ನನುಸರಿಸಿದರು. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ದಖ್ಖಿನ್ನಿನಲ್ಲಿ 1/2 ಭಾಗದಷ್ಟು ಜನಸಂಖ್ಯೆ ಜೈನಧರ್ಮದ ಅನುಯಾಯಿಗಳಾಗಿದ್ದರೆಂದು ತಿಳಿದು ಬರುತ್ತದೆ. ಇಸ್ಲಾಂ ಧರ್ಮವು ಕೂಡ ಈ ಕಾಲದಲ್ಲಿ ತೀರ ಪ್ರದೇಶದಲ್ಲಿ ಹರಡಿತು. ಗುಹಾಲಯಗಳು ಮತ್ತು ಇನ್ನಿತರ ದೇವಸ್ಥಾನಗಳು ಅಧಿಕ ಸಂಖ್ಯೆಯಲ್ಲಿ ಇವರ ಕಾಲದಲ್ಲಿ ನಿರ್ಮಾಣಗೊಂಡವು. ಶಿಲೆಯಲ್ಲಿ ಕೊರೆದಿರತಕ್ಕ ದೇವಸ್ಥಾನಗಳು ಜಗತ್ಪ್ರಸಿದ್ಧವಾಗಿವೆ.

ರಾಷ್ಟ್ರಕೂಟರ ಕಾಲ ದಕ್ಷಿಣ ಭಾರತದ ಚರಿತ್ರೆಯಲ್ಲಿಯೇ ಉಚ್ಛ್ರಾಯ ಸ್ಥಿತಿಯ ಕಾಲವಾಗಿತ್ತು. ವಿಶಾಲ ಸಾಮ್ರಾಜ್ಯ ಸ್ಥಾಪನೆ, ಸುಭದ್ರ ಆಡಳಿತ ಹಾಗೂ ಸಾಹಿತ್ಯ ಮತ್ತು ಕಲೆಗೆ ವಿಶೇಷ ಪ್ರೋತ್ಸಾಹ ನೀಡುವುದರ ಮೂಲಕ ದಕ್ಷಿಣ ಭಾರತದ ಸಂಸ್ಕೃತಿಗೆ ವಿಶೇಷ ಕಾಣಿಕೆ ನೀಡಿದ್ದಾರೆ.

## 16.8 ಮಾದರಿ ಪ್ರಶ್ನೆಗಳು

1. ದಕ್ಷಿಣ ಭಾರತದ ಸಂಸ್ಕೃತಿಗೆ ರಾಷ್ಟ್ರಕೂಟರ ಕೊಡುಗೆಗಳನ್ನು ವಿವರಿಸಿ.
2. ರಾಷ್ಟ್ರಕೂಟರ ಕಾಲದ ಧರ್ಮ ಮತ್ತು ಸಾಹಿತ್ಯದ ಬೆಳವಣಿಗೆಯನ್ನು ವಿವರಿಸಿ.
3. ರಾಷ್ಟ್ರಕೂಟರ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳನ್ನು ಕುರಿತು ಬರೆಯಿರಿ.

## 16.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Prof. Basavaraja .K.R.: History and Culture of Karnataka, Dharwad, 1984
2. Gopal .B.R. (Ed) : The Rashtrakutas of Malrkhed, Bangalore, 1994
3. Prof. Rajasekhara .S. : The Rashtrakuta Art in Karnataka, Dharwad, 1991
4. Altekar .A.S. : Rashtrakutas and Their Times


ಪ್ರೊ. ಶಿವಣ್ಣ

## ಟಿಪ್ಪಣಿಗಳು

# ಘಟಕ - 17

## ಕಲ್ಯಾಣದ ಚಾಲುಕ್ಯರು ಮತ್ತು ಕಳಚೂರ್ಯರು - ರಾಜಕೀಯ ಮತ್ತು ಸಂಸ್ಕೃತಿ

*ರಚನೆ*


17.0 ಉದ್ದೇಗಳು

17.1 ಪೀಠಿಕೆ

17.2 ಎರಡನೆಯ ತೈಲ (ಕ್ರಿ.ಶ. 973 -997)

17.3 ಸತ್ಯಾಶ್ರಯ (ಕ್ರಿ.ಶ. 997-1008)

17.4 ಎರಡನೆಯ ಜಯಸಿಂಹ (ಕ್ರಿ.ಶ. 1015-1044)

17.5 ಒಂದನೆಯ ಸೋಮೇಶ್ವರ (ಕ್ರಿ.ಶ. 1044-1068)

17.6 ಎರಡನೆಯ ಸೋಮೇಶ್ವರ (ಕ್ರಿ.ಶ. 1068-1076)

17.7 ಆರನೆಯ ವಿಕ್ರಮಾದಿತ್ಯ (ಕ್ರಿ.ಶ. 1077-1127)

17.7.1 ಚೋಳರೊಡನೆ ಸಂಬಂಧಗಳು

17.7.2 ನಾಲ್ಕನೆಯ ಜಯಸಿಂಹನ ದಂಗೆ

17.7.3 ಪರಮಾರರ ವಿರುದ್ಧ ಯುದ್ಧಗಳು

17.7.4 ಹೊಯ್ಸಳರು ಮತ್ತು ಇನ್ನಿತರ ಸಾಮಂತರೊಡನೆ ಸಂಬಂಧಗಳು

17.8 ಮೂರನೆಯ ಸೋಮೇಶ್ವರ (1127-1139) ಮತ್ತು ಎರಡನೆಯ ಜಗದೇಕಮಲ್ಲ (1139-1149)

17.9 ಮೂರನೆಯ ತೈಲ (1149-1162) ಮತ್ತು ನಾಲ್ಕನೆಯ ಸೋಮೇಶ್ವರ

17.10 ಕಳಚೂರ್ಯರು

17.10.1 ಎರಡನೆಯ ಬಿಜ್ಜಳ

17.10.2 ಕಳಚೂರ್ಯರ ಅವನತಿ

17.11 ಕಲ್ಯಾಣ ಚಾಲುಕ್ಯರ ಕಾಲದ ಆಡಳಿತ

17.11.1 ಕೇಂದ್ರಾಡಳಿತ

17.11.2 ಪ್ರಾಂತೀಯ ಮತ್ತು ಸ್ಥಳೀಯ ಆಡಳಿತ

17.12 ಸಮಾಜ

17.12.1 ಸ್ತ್ರೀಯರ ಸ್ಥಾನಮಾನ

17.12.2 ವಿದ್ಯಾಭ್ಯಾಸ

17.12.3 ಸಾಹಿತ್ಯ

17.13 ಧಾರ್ಮಿಕ ಪರಿಸ್ಥಿತಿಗಳು

17.13.1 ಬೌದ್ಧ ಧರ್ಮ

17.13.2 ಜೈನ ಧರ್ಮ

17.13.3 ಶೈವ ಧರ್ಮ

17.13.4 ವೀರಶೈವ ಧರ್ಮ

17.14 ವಾಸ್ತುಶಿಲ್ಪ

17.14.1 ಮುಖ್ಯ ಲಕ್ಷಣಗಳು

17.15 ಸಂಕ್ಷಿಪ್ತ ಅವಲೋಕನ

17.16 ಮಾದರಿ ಪ್ರಶ್ನೆಗಳು

17.17 ಅಧ್ಯಯನಕ್ಕೆ ಗ್ರಂಥಗಳು

## 17.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ತಿಳಿದುಕೊಳ್ಳುವ ಅಂಶಗಳೆಂದರೆ:

* ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಪ್ರಾರಂಭ
* ಕಳಚೂರಿ ಮನೆತನದ ಇತಿಹಾಸ
* ಸತ್ಯಾಶ್ರಯ, ಎರಡನೆಯ ಜಯಸಿಂಹ, ಒಂದನೆಯ ಸೋಮೇಶ್ವರ , ಎರಡನೆಯ ಸೋಮೇಶ್ವರ ಮೊದಲಾದ ಅರಸರುಗಳ ಸಾಧನೆಗಳು
* ಚಾಲುಕ್ಯರ ಇತಿಹಾಸದಲ್ಲಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಮಹತ್ವ
* ಚಾಲುಕ್ಯ ಮನೆತನದ ಪತನ
* ಚಾಲುಕ್ಯರ ಆಡಳಿತದ ಪ್ರಮುಖ ಲಕ್ಷಣಗಳು
* ಚಾಲುಕ್ಯರ ಕಾಲದ ಸಾಮಾಜಿಕ ಪರಿಸ್ಥಿತಿ
* ಜೈನಧರ್ಮ, ಶೈವಧರ್ಮ, ವೈಷ್ಣವ ಧರ್ಮಕ್ಕೆ ದೊರೆತ ಪ್ರೋತ್ಸಾಹ ಮತ್ತು ಕಳಚೂರಿ ಮನೆತನದ ಆಳ್ವಿಕೆಯ ಕಾಲದಲ್ಲಿ ವೀರಶೈವ ಧರ್ಮದ ಏಳಿಗೆ
* ಕಲೆ ಮತ್ತು ವಾಸ್ತುಶಿಲ್ಪಕ್ಕೆ ಚಾಲುಕ್ಯರ ಕೊಡುಗೆ

## 17.1 ಪೀಠಿಕೆ

ರಾಷ್ಟ್ರಕೂಟರ ಆಳ್ವಿಕೆಯನ್ನು ಅಂತ್ಯಗೊಳಿಸಿ ಕಲ್ಯಾಣದ ಚಾಳುಕ್ಯರು ಕ್ರಿ.ಶ. 973 ರಲ್ಲಿ ಅಧಿಕಾರಕ್ಕೆ ಬಂದರು. ಬಾದಾಮಿ ಚಾಳುಕ್ಯರ ವಂಶಸ್ಥರೆಂದು ಅಭಿಪ್ರಾಯ ಪಡಲಾಗಿದೆ. ಕಲ್ಯಾಣದ ಚಾಳುಕ್ಯರು ದಕ್ಷಿಣ ಭಾರತದಲ್ಲಿ ಪ್ರಬಲರೆನಿಸಿಕೊಂಡಿದ್ದ ಚೋಳರ ವಿರುದ್ಧ ಹಾಗೂ ಉತ್ತರದ ಪ್ರಬಲ ರಾಜಮನೆತನ ಪರಮಾರರ ವಿರುದ್ಧ ಅನೇಕ ಯುದ್ಧಗಳನ್ನು ಕೈಗೊಂಡಿತು. ಅದೇ ರೀತಿ ಅವರು ಸಾಹಿತ್ಯ, ಕಲೆ ಮತ್ತು ಧರ್ಮಕ್ಕೆ ಪ್ರೋತ್ಸಾಹ ನೀಡಿ ಸಮೃದ್ಧಿಗೊಳಿಸಿದ್ದಾರೆ.

## 17.2 ಎರಡನೆಯ ತೈಲ (ಕ್ರಿ.ಶ. 973-996)

ಎರಡನೆಯ ತೈಲ ಕಲ್ಯಾಣ ಮನೆತನದ ಆಳ್ವಿಕೆಯ ಸಂಸ್ಥಾಪಕ. ಮೂರನೆಯ ಕೃಷ್ಣನ ಆಳ್ವಿಕೆಯ ಕಾಲದಲ್ಲಿ ತರ್ದವಾಡಿ 1000 ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಆದರೆ ಮೂರನೆಯ ಕೃಷ್ಣನ ಆಳ್ವಿಕೆ ನಂತರ ಎರಡನೆಯ ಖೊಟ್ಟಿಗನು ಚಕ್ರವರ್ತಿಯಾದನು. ಈತನ ಆಳ್ವಿಕೆಯ ಕಾಲದಲ್ಲಿ ಪರಮಾರ ಎರಡನೆಯ ಸಿಯಕ ಹರ್ಷನು ಮಾನ್ಯಖೇಟದ ಮೇಲೆ ಧಾಳಿ ಮಾಡಿದನು. ಈ ದಾಳಿಯಿಂದ ಎರಡನೆಯ ಖೊಟ್ಟಿಗನು ಚೇತರಿಸಿಕೊಳ್ಳಲಿಲ್ಲ. ಎರಡನೆಯ ತೈಲಪನಿಗೆ ಇದೊಂದು ಸುವರ್ಣಾವಕಾಶವಾಯಿತು. ಅಂತಿಮವಾಗಿ ಕ್ರಿ.ಶ. 973 ರಲ್ಲಿ ತೈಲಪನು ರಾಷ್ಟ್ರಕೂಟರ ಕೊನೆಯ ಅರಸ ಇಮ್ಮಡಿ ಕರ್ಕನನ್ನು ಪದಚ್ಯುತಿಗೊಳಿಸಿ ಚಾಳುಕ್ಯ ಮನೆತನದ ಆಳ್ವಿಕೆಯನ್ನು ಸ್ಥಾಪಿಸಿದನು. ತೈಲಪನು ದಖನ್ನಿನಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದ ಮೇಲೆ ಉತ್ತರಧ ಪರಮಾರರ ವಿರುದ್ಧ ಯುದ್ಧ ಸಾರಿದನು. ಅನೇಕ ವರ್ಷಗಳವರೆಗೆ ಎರಡನೆಯ ತೈಲ ಮತ್ತು ಮುಂಜನ ನಡುವೆ ಯುದ್ಧಗಳು ನಡೆದವು. ಅಂತಿಮವಾಗಿ ಮುಂಜನು ಎರಡನೆಯ ತೈಲಪನಿಂದ ಕೊಲ್ಲಲ್ಪಟ್ಟನು.

ರಾಷ್ಟ್ರಕೂಟರ ಆಳ್ವಿಕೆ ಕೊನೆಗೊಂಡ ನಂತರ ಚೋಳರಿಗೆ ಪುನಃ ಚೇತರಿಸಿಕೊಳ್ಳಲು ಉತ್ತಮ ಅವಕಾಶ ಒದಗಿ ಬಂದಿತು. ಅವರು ವೆಂಗಿಯನ್ನು ಗೆದ್ದುಕೊಂಡು ಅದರ ಮೇಲೆ ತಮ್ಮ ಪರಮಾಧಿಕಾರವನ್ನು ಸ್ಥಾಪಿಸಿದರು. ಇಂತಹ ವಿಸ್ತರಣಾ ನೀತಿಯಿಂದಾಗಿ

ಕಲ್ಯಾಣ ಚಾಳುಕ್ಯರೊಡನೆ ಘರ್ಷಣೆಗೆ ಇಳಿಯಬೇಕಾಯಿತು. ಎರಡನೆಯ ತೈಲ ಮತ್ತು ರಾಜರಾಜನೊಡನೆ ಯುದ್ಧ ನಡೆಯಿತು. ಕೊನಲಿ ಶಾಸನವು ಎರಡನೆಯ ತೈಲನು ಚೋಳ ರಾಜನನ್ನು ಸೋಲಿಸಿ 150 ಆನೆಗಳನ್ನು ವಶಪಡಿಸಿಕೊಂಡನೆಂದು ತಿಳಿಸುತ್ತದೆ. ಈ ರೀತಿಯಾಗಿ ಚೋಳರಿಂದ ಉಂಟಾಗಿದ್ದ ಅಪಾಯವನ್ನು ತಡೆಗಟ್ಟುವುದರಲ್ಲಿ ತೈಲಪನು ಯಶಸ್ವಿಯಾದನು.

ಎರಡನೆಯ ತೈಲಪನು ಇಪ್ಪತ್ತು ವರ್ಷಗಳ ಆಳ್ವಿಕೆಯ ನಂತರ ಕ್ರಿ.ಶ. 997 ರಲ್ಲಿ ಕಾಲವಾದನು.

## 17.3 ಸತ್ಯಾಶ್ರಯ (ಕ್ರಿ.ಶ. 997-1000)

ಎರಡನೆಯ ತೈಲನ ಮಗನಾದ ಸತ್ಯಾಶ್ರಯನು ಕ್ರಿ.ಶ. 997 ರಲ್ಲಿ ಚಾಲುಕ್ಯ ಅರಸನಾದನು. ತನ್ನ ತಂದೆಯ ಆಳ್ವಿಕೆಯ ಕಾಲದಲ್ಲಿ ಅವನು ಪರಮಾರರ ವಿರುದ್ಧ ಒಂದು ದಂಡಯಾತ್ರೆಯನ್ನು ಕೈಗೊಂಡಿದ್ದನು. ಅವನು ಪರಮಾರ ಮುಂಜನನ್ನು ಸೋಲಿಸಿ ರಾಜಧಾನಿಗೆ ಹಿಂದಿರುಗಿದನು. ಈ ಘಟನೆಯ ನಂತರವೇ ಸತ್ಯಾಶ್ರಯನು ಅಧಿಕಾರಕ್ಕೆ ಬಂದನು. ಸತ್ಯಾಶ್ರಯನು ರಾಜಧಾನಿಯಲ್ಲಿ ಪಟ್ಟಾಭಿಷೇಕ ಸಮಾರಂಭದಲ್ಲಿ ನಿರತನಾಗಿದ್ದಾಗ ರಾಜ್ಯದ ದಕ್ಷಿಣ ಭಾಗದ ಮೇಲೆ ಚೋಳರು ದಾಳಿ ಮಾಡಿದರು. ಈ ಯುದ್ಧದಲ್ಲಿ ಎರಡನೆಯ ತೈಲಪನ ಸಹೋದರನಾದ ದಶವರ್ಮನು ಕೊಲ್ಲಲ್ಪಟ್ಟನು.

ಕ್ರಿ.ಶ. 999 ರಲ್ಲಿ ಶಕ್ತಿವರ್ಮನು ರಾಜರಾಜ ಚೋಳನ ಸಹಾಯ ಪಡೆದು ಜಯಚೋಡ ಭಿಮನನ್ನು ಸೋಲಿಸಿ ವೆಂಗಿಯ ರಾಜನಾದನು. ಆದುದರಿಂದಾಗಿ ವೆಂಗಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಹಾಗೂ ಚೋಳರನ್ನು ಸದೆಬಡಿಯಲು ಸತ್ಯಾಶ್ರಯನು ಕ್ರಿ.ಶ. 1055 ರಲ್ಲಿ ದಂಡಯಾತ್ರೆಯನ್ನು ಕೈಗೊಂಡನು. ಈ ಮಧ್ಯೆ ಚೋಳರ ಸೈನ್ಯ ಚಾಳುಕ್ಯ ರಾಜ್ಯದ ಮೇಲೆ ಧಾಳಿ ಮಾಡಿ ಬಿಜಾಪುರ ಜಿಲ್ಲೆಯ ದೋಮಾರಿನವರೆಗೂ ದಾವಿಸಿತು. ಸತ್ಯಾಶ್ರಯನು ಚೋಳರೊಡನೆ ಯುದ್ಧಮಾಡಿ ಅವರ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಅನಂತರ ಅವನು ತನ್ನ ದಂಡನಾಯಕ ಬಯಲ್ ನಂಬಿಯನ್ನು ವೆಂಗಿಗೆ ಕಳುಹಿಸಿಕೊಟ್ಟನು. ಅವನು ವೆಂಗಿ ಪ್ರದೇಶದಲ್ಲಿ ಅನೇಕ ಸ್ಥಳಗಳನ್ನು ಗೆದ್ದುಕೊಂಡನು. ಚಾಳುಕ್ಯ ರಾಜ್ಯದ ಪಶ್ಚಿಮದಲ್ಲಿದ್ದ ಸಿಲ್ಹಾರರ ಅರಸ ಅಪರಾಜಿತನನ್ನು ಕೂಡ ಸೋಲಿಸಿದನು. ಸತ್ಯಾಶ್ರಯನು ಪರಮಾರ ದೊರೆ ಮೂಲರಾಜನ ವಿರುದ್ಧವು ಹೋರಾಟ ನಡೆಸಿದನು.

**ಗದಾಯುದ್ಧ** ಅಥವಾ **ಸಾಹಸಭೀಮ** ವಿಜಯದ ಕರ್ತೃ ಪ್ರಸಿದ್ಧ ಕನ್ನಡ ಕವಿ ರನ್ನನು ಸತ್ಯಾಶ್ರಯನ ಆಸ್ಥಾನದಲ್ಲಿದ್ದನು.

## 17.4 ಎರಡನೆಯ ಜಯಸಿಂಹ (ಕ್ರಿ.ಶ. 1015-1044)

ಸತ್ಯಾಶ್ರಯನ ನಂತರ ವಿಕ್ರಮಾಧಿತ್ಯ (ಕ್ರಿ.ಶ. 1008-1014) ಮತ್ತು ಅಯ್ಯನ (1014-15) ಆಳ್ವಿಕೆ ನಡೆಸಿದರು. ಅವರ ಆಳ್ವಿಕೆಯ ನಂತರವೇ ಎರಡನೆಯ ಜಯಸಿಂಹನು ಅಧಿಕಾರಕ್ಕೆ ಬಂದನು.

ಎರಡನೆಯ ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ಮಾಳವದ ರಾಜ ಭೋಜನು ಕಳಚೂರ್ಯರು ಮತ್ತು ಚೋಳರೊಡನೆ ಒಂದು ಒಕ್ಕೂಟವನ್ನು ರಚಿಸಿಕೊಂಡು ಚಾಳುಕ್ಯ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದನು. ಗೋದಾವರಿ ನದಿಯ ದಂಡೆಯ ಮೇಲೆ ಈ ಒಕ್ಕೂಟದ ಸೈನ್ಯಗಳನ್ನು ಸೋಲಿಸುವುದರಲ್ಲಿ ಜಯಸಿಂಹನು ಯಶಸ್ವಿಯಾದನು. ಅನಂತರ ಕೊಂಕಣ ಪ್ರದೇಶದ ಮೇಲೂ ದಾಳಿ ಮಾಡಿ ಅದನ್ನು ಗೆದ್ದುಕೊಂಡನು. ಇದೇ ವೇಳೆಯಲ್ಲಿ ಸೇವುಣ ಮೂರನೆಯ ಭಿಲ್ಲಮನು ಸ್ವತಂತ್ರನಾಗಲು ಪ್ರಯತ್ನ ನಡೆಸಿದನು. ಈ ದಂಗೆಯನ್ನಡಗಿಸಿದನು. ಅನಂತರ ಸೇವುಣ ಸಾಮಂತನು ನಿಷ್ಠೆಯಿಂದ ಇರುವಂತೆ ಮಾಡಲು ಒಂದು ವೈವಾಹಿಕ ಸಂಬಂಧವನ್ನು ಕೂಡ ಮಾಡಿಕೊಂಡನು. ಅವನು ತನ್ನ ಮಗಳು ಅವ್ವಲ್ಲದೇವಿಯನ್ನು ಮೂರನೆಯ ಭಿಲ್ಲಮನಿಗೆ ವಿವಾಹ ಮಾಡಿಕೊಟ್ಟನು.

ಆದರೆ ಚಾಳುಕ್ಯ ಸಾಮ್ರಾಜ್ಯಕ್ಕೆ ಹೆಚ್ಚು ತೊಂದರೆಯನ್ನೊಡ್ಡುತ್ತಿದ್ದವರು ಚೋಳರು. ವೆಂಗಿಯ ಮೇಲೆ ತಮ್ಮ ಪರಮಾಧಿಕಾರವನ್ನು ಸ್ಥಾಪಿಸಲು ಸತತವಾಗಿ ಪ್ರಯತ್ನ ನಡೆಸುತ್ತಿದ್ದರು. ಕ್ರಿ.ಶ. 1011 ರಲ್ಲಿ ಶಕ್ತಿವರ್ಮನು ಮರಣ ಹೊಂದಿದ ನಂತರ ಅವನ ಕಿರಿಯ ಹೋದರ ವಿಮಲಾದಿತ್ಯ ವೆಂಗಿ ರಾಜ್ಯವನ್ನು ಏಳು ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಅನಂತರ ಅವನ ಮಗ ಒಂದನೆಯ ರಾಜರಾಜನು ವೆಂಗಿಯ ಸಿಂಹಾಸನವನ್ನಲಂಕರಿಸಿದನು. ಆದರೆ ಅವನ ಮಲಸಹೋದರ ಏಳನೆಯ ವಿಜಯಾದಿತ್ಯನು ಅವನ ಆಳ್ವಿಕೆಯನ್ನು ವಿರೋಧಿಸಿದನು. ಅದಕ್ಕೆ ಬೆಂಬಲ ನೀಡಿದವನು ಎರಡನೆಯ ಜಯಸಿಂಹ. ಒಂದನೆಯ ರಾಜರಾಜನು ತನ್ನ ಮಾವ

ಒಂದನೆಯ ರಾಜೇಂದ್ರ ಚೋಳನ ಸಹಾಯ ಕೋರಿದನು. ಅವನು ಒಂದನೆಯ ರಾಜರಾಜನ ಸಹಾಯಕ್ಕೆ ಒಂದು ಸೈನ್ಯವನ್ನು ಕಳುಹಿಸಿಕೊಟ್ಟನು. ಮೂಸಂಗಿಯಲ್ಲಿ ಒಂದು (ಆಧುನಿಕ ಮಾಸ್ಕಿ) ನಿರ್ಣಾಯಕ ಯುದ್ಧ ನಡೆಯಿತು. ಪ್ರಾರಂಭದಲ್ಲಿ ಚಾಳುಕ್ಯ ಸೈನ್ಯ ಹಿಮ್ಮೆಟ್ಟಬೇಕಾಯಿತು. ಆದ್ದರಿಂದ ಅಂತಿಮವಾಗಿ 1024 ರಲ್ಲಿ ನಡೆದ ಯುದ್ಧದಲ್ಲಿ ಎರಡನೆಯ ಜಯಸಿಂಹನು ಚೋಳರನ್ನು ಸದೆಬಡಿದು ಅವರನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಅನಂತರ ಅನೇಕ ವರ್ಷಗಳವರೆಗೆ ನಡೆದ ಯುದ್ಧದಲ್ಲಿ ಏಳನೆಯ ವಿಜಯಾದಿತ್ಯನು ಎರಡನೆಯ ಜಯಸಿಂಹನ ಸಹಾಯದಿಂದ ತನ್ನ ಮಲಸಹೋದರನನ್ನು ಸೋಲಿಸಿ ವೆಂಗಿಯ ಸಿಂಹಾಸನವನ್ನು ಆಕ್ರಮಿಸಿಕೊಂಡನು. ಆದರೆ ಯಶಸ್ಸು ಬಹಳ ದೀರ್ಘಕಾಲ ಉಳಿಯಲಿಲ್ಲ. ಏಕೆಂದರೆ ಒಂದನೆಯ ರಾಜರಾಜನು ಪುನಃ ಈತನನ್ನು ಸೋಲಿಸಿ ವೆಂಗಿಯ ಸಿಂಹಾಸನಾಧಿಕಾರಿಯಾದನು.

ಎರಡನೆಯ ಜಯಸಿಂಹನ ಆಳ್ವಿಕೆಯು ಕ್ರಿ.ಶ. 1044 ರಲ್ಲಿ ಕೊನೆಗೊಂಡಿತು. ಚಕ್ರವರ್ತಿಯು ಇಬ್ಬರು ಮಕ್ಕಳನ್ನು ಹೊಂದಿದ್ದನು. ಒಂದನೆಯ ಸೋಮೇಶ್ವರ ಮತ್ತು ಜಯಸಿಂಹ.

## 17.5 ಒಂದನೆಯ ಸೋಮೇಶ್ವರ (ಕ್ರಿ.ಶ. 1044-1068)

ಎರಡನೆಯ ಜಯಸಿಂಹನ ಉತ್ತರಾಧಿಕಾರಿಯಾಗಿ ಅವನ ಹಿರಿಯ ಮಗನಾದ ಒಂದನೆಯ ಸೋಮೇಶ್ವರನು ಚಾಳುಕ್ಯ ಸಾಮ್ರಾಟನಾದನು. ಈತನ ಆಳ್ವಿಕೆಯ ಕಾಲದಲ್ಲಿ ರಾಜಧಾನಿಯನ್ನು ಮಾನ್ಯಖೇಟದಿಂದ ಕಲ್ಯಾಣಕ್ಕೆ ಸ್ಥಳಾಂತರಿಸಲಾಯಿತೆಂದು ಬಿಲ್ಹಣನು ತಿಳಿಸಿದ್ದಾನೆ. ಈತನ ಆಳ್ವಿಕೆಯ ಕಾಲದಲ್ಲೂ ಚಾಳುಕ್ಯರು ಮತ್ತು ಚೋಳರ ನಡುವೆ ನಿರಂತರ ಯುದ್ಧಗಳು ನಡೆದವು.

ಸೋಮೇಶ್ವರನು ಅಧಿಕಾರ ಸೂತ್ರವನ್ನು ವಹಿಸಿಕೊಂಡ ತಕ್ಷಣವೇ ವೆಂಗಿಯನ್ನು ಗೆದ್ದುಕೊಳ್ಳಲು ಒಂದು ಸೈನ್ಯವನ್ನು ಕಳುಹಿಸಿಕೊಟ್ಟನು. ಆದರೆ ಈ ಸೈನ್ಯವನ್ನು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ದನ್ನಾಡದ ಹತ್ತಿರ (ಅಮರಾವತಿ) ಚೋಳ ಸೈನ್ಯ ಅಡ್ಡಗಟ್ಟಿತು. ಈ ಸ್ಥಳದಲ್ಲಿ ಚಾಳುಕ್ಯ ಸೈನ್ಯ ಸೋಲನ್ನನುಭವಿಸಿ ಹಿಮ್ಮೆಟ್ಟಬೇಕಾಯಿತು. ಅಂತಿಮವಾಗಿ ಚೋಳರ ಸೈನ್ಯ ಚಾಳುಕ್ಯರ ಸೈನ್ಯವನ್ನು ಕೊಲ್ಲಿ ಪಾಕೆಯವರೆಗೂ ಅಟ್ಟಿಸಿಕೊಂಡು ಹೋಯಿತು. ಕೊಲ್ಲಿ ಪಾಕೆಯು ಚಾಳುಕ್ಯರ ಉಪರಾಜಧಾನಿಯಾಗಿತ್ತು. ಆದರೆ ಮಹಾಮಂಡಳೇಶ್ವರ ಸಿಂಗಣ ದೇವರಸನು ಚೋಳರ ಸೈನ್ಯ ಕೊಲ್ಲಿ ಪಾಕೆಯನ್ನು ಗೆದ್ದುಕೊಳ್ಳುವುದನ್ನು ತಡೆಗಟ್ಟಿದನು. ಅದರ ವಿರುದ್ಧ ಹೋರಾಟ ನಡೆಸಿ ಅದನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಒಂದನೆಯ ಸೋಮೇಶ್ವರನು ಸಿಂಗಣದೇವನ ಸಾಧನೆಯನ್ನು ಮೆಚ್ಚಿ ಅವನಿಗೆ "ಕೊಲ್ಲಿ ಪಾಕೆಯ ರಕ್ಷಕ"ನೆಂಬ ಬಿರುದನ್ನು ನೀಡಿ ಗೌರವಿಸಿದನು.

ಪುನಃ ಕ್ರಿ.ಶ. 1045 ರಲ್ಲಿ ರಾಜಾಧಿರಾಜನು ಚಾಳುಕ್ಯರ ವಿರುದ್ಧ ಒಂದು ದಂಡಯಾತ್ರೆಯನ್ನು ಕೈಗೊಂಡನು. ಅವನ ಸೈನ್ಯ ಚಾಳುಕ್ಯರ ಅನೇಕ ಪ್ರದೇಶಗಳ ಮೇಲೆ ದಾಳಿ ಮಾಡಿ ಅವರ ರಾಜಧಾನಿ ಕಲ್ಯಾಣದವರೆಗೂ ಧಾವಿಸಿತು. ಆದರೆ ಚೋಳ ಸೈನ್ಯ ಕಲ್ಯಾಣವನ್ನು ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ. ಚಾಳುಕ್ಯರು ಚೋಳ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದರು.

ಆದರೆ ರಾಜಾಧಿರಾಜನು ಪುನಃ ತನ್ನ ಸಹೋದರ ಎರಡನೆಯ ರಾಜರಾಜನ ಜೊತೆಗೂಡಿ ಚಾಳುಕ್ಯರ ಸಾಮ್ರಾಜ್ಯದ ಮೇಲೆ ಧಾಳಿ ಮಾಡಿದನು. ಅವನು ರಟ್ಟಮಂಡಲಂನನ್ನು ಮುತ್ತಿದನು. ಸೋಮೇಶ್ವರನು ಈ ದಾಳಿಯನ್ನು ಹಿಮ್ಮೆಟ್ಟಿಸಲು ಒಂದು ದೊಡ್ಡ ಸೈನ್ಯದೊಡನೆ ಚೋಳರನ್ನು ಎದುರಿಸಿದನು. ಈ ಎರಡು ಸೈನ್ಯಗಳು ಕೊಪ್ಪಂ ಎಂಬಲ್ಲಿ (ಕೊಪ್ಪಳ ಎಂದು ಗುರುತಿಸಲಾಗಿದೆ)ಯುದ್ಧ ನಡೆಸಿದವು. ಈ ಯುದ್ಧದಲ್ಲಿ ರಾಜಾಧಿರಾಜನು ಒಂದನೆಯ ಸೋಮೇಶ್ವರನಿಂದ ಕೊಲ್ಲಲ್ಪಟ್ಟನು. ಈ ಘಟನೆಯಿಂದ ಚೋಳ ಸೈನ್ಯ ತತ್ತರಿಸಿ ಹೋಯಿತು. ಆದರೆ ಎರಡನೆಯ ರಾಜೇಂದ್ರನು ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನ ನಡೆಸಿದನು. ಆದರೆ ಅಂತಿಮವಾಗಿ ಚೋಳಸೈನ್ಯ ಹಿಮ್ಮೆಟ್ಟಬೇಕಾಯಿತು. ಈ ಕೊಪ್ಪಂ ಯುದ್ಧವು ಕ್ರಿ.ಶ. 1054 ರಲ್ಲಿ ನಡೆಯಿತು. ರಾಜೇಂದ್ರನು ಹಿಂದಿರುಗುತ್ತಿರುವಾಗ ಬಳ್ಳಾರಿ ಜಿಲ್ಲೆಯ ಕುಮ್ಮಟದ ಮೇಲೆ ಧಾಳಿ ಮಾಡಿದನು. ಸೋಮೇಶ್ವರನು ಚಾಳುಕ್ಯ ಪ್ರದೇಶಗಳಿಂದ ಹೊಡೆದೋಡಿಸುವುದರಲ್ಲಿ ಯಶಸ್ವಿಯಾದನು.

ಕ್ರಿ.ಶ. 1059 ರಲ್ಲಿ ಒಂದನೆಯ ಸೋಮೇಶ್ವರನು ಚೋಳರ ವಿರುದ್ಧ ಯುದ್ಧ ಸಾರಿದನು. ಪುನಃ ಚೋಳರನ್ನು ಸೋಲಿಸಿದನು.

ಒಂದನೆಯ ಸೋಮೇಶ್ವರನು ವೆಂಗಿಯ ರಾಜ್ಯವನ್ನು ತನ್ನ ಪ್ರಭಾವಕ್ಕೊಳಪಡಿಸಬೇಕೆಂಬ ಪ್ರಮುಖ ಉದ್ದೇಶವನ್ನು ಹೊಂದಿದ್ದನು. ಕ್ರಿ.ಶ. 1061 ರಲ್ಲಿ ವೆಂಗಿಯ ಅರಸ ಮರಣ ಹೊಂದಿದಾಗ ಸೋಮೇಶ್ವರನು ಎರಡನೆಯ ವಿಜಯಾದಿತ್ಯನ ಮಗನಾದ ಎರಡನೆಯ ವರ್ಮನನ್ನು ವೆಂಗಿಯ ಅರಸನನ್ನಾಗಿ ಮಾಡಲು ಹೋರಾಟ ನಡೆಸಿದನು. ಎರಡನೆಯ ಶಕ್ತಿ ವರ್ಮನನ್ನು ರಾಜನನ್ನಾಗಿ ಮಾಡುವುದರ ಮೂಲಕ ವೆಂಗಿಯ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದಂತಾಯಿತು. ಇದೇ ಸಮಯದಲ್ಲಿ ವೀರ ರಾಜೇಂದ್ರನು ಚೋಳರ ಅರಸನಾದನು. ಅದೇ ವರ್ಷ ಕೂಡಲ ಸಂಗಮದಲ್ಲಿ ಚಾಳುಕ್ಯರಿಗೂ ಮತ್ತು ಚೋಳರಿಗೂ ಯುದ್ಧ ನಡೆಯಿತು. ಈ ಯುದ್ಧದಲ್ಲಿ ವೀರ ರಾಜೇಂದ್ರನು ಚಾಳುಕ್ಯರ ಮೇಲೆ ಜಯ ಗಳಿಸಿದನು. ಪುನಃ ಈ ಯುದ್ಧದ ನಂತರ ಚೋಳರು ವೆಂಗಿಯ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಚಾಳುಕ್ಯ ಸಾಮ್ರಾಜ್ಯದ ಉತ್ತರ ಭಾಗದಲ್ಲಿ ಪರಮಾರರು ಅವರ ಶತ್ರುಗಳಾಗಿದ್ದರು. ಸೋಮೇವರನು ಅವರ ವಿರುದ್ಧ ಅನೇಕ ಯುದ್ಧಗಳನ್ನು ಕೈಗೊಂಡನು. ಸುಮಾರು 1051 ರ ವೇಳೆಗೆ ಚಾಳುಕ್ಯ ಚಕ್ರವರ್ತಿಯು ಮಾಂಡವದ ಮೇಲೆ ದಾಳಿ ಮಾಡಿದನು. ಅನಂತರ ಪರಮಾರರ ರಾಜಧಾನಿ ದಹರಾವನ್ನು ಮುತ್ತಿ ಅದನ್ನು ಭಸ್ಮ ಮಾಡಿದನು. ಮತ್ತೊಂದು ಬಾರಿ ಕಳಚೂರಿ ಅರಸ ಕರ್ಣನ ಜೊತೆಗೂಡಿ ಪರಮಾರ ರಾಜ್ಯದ ಮೇಲೆ ದಾಳಿ ಮಾಡಿದನು. ಪುನಃ ಭೋಜನನ್ನು ಸೋಲಿಸಿದನು. ಈ ಯುದ್ಧದಲ್ಲಿ ಭೋಜನು ಮರಣ ಹೊಂದಿದನೆಂದು ತಿಳಿದು ಬರುತ್ತದೆ. ಅನಂತರ ಪರಮಾರ ರಾಜ್ಯದಲ್ಲಿ ಒಂದು ಆಂತರಿಕ ಯುದ್ಧ ಸಿಂಹಾಸನಕ್ಕಾಗಿ ನಡೆಯುತ್ತದೆ. ಭೋಜನ ಮಕ್ಕಳಾದ ಉದಯದಿತ್ಯ ಮತ್ತು ಜಯಸಿಂಹನ ನಡುವೆ ಕಲಹ ಪ್ರಾರಂಭವಾಗುತ್ತದೆ. ಸೋಮೇಶ್ವರನು ಆರನೆಯ ವಿಕ್ರಮಾದಿತ್ಯನನ್ನು ಇವರೀರ್ವರಲ್ಲಿ ಜಯಸಿಂಹನಿಗೆ ಸಹಾಯ ಮಾಡಲು ಕಳುಹಿಸಿಕೊಟ್ಟಿರಬಹುದೆಂದು ತಿಳಿದುಬರುತ್ತದೆ.

ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಅನೇಕ ಸಾಮಂತರು ಸ್ವತಂತ್ರರಾಗಲು ಪ್ರಯತ್ನ ನಡೆಸಿದರು. ಈ ದಂಗೆಗಳನ್ನು ಹತ್ತಿಕ್ಕುವುದರಲ್ಲಿ ಯಶಸ್ವಿಯಾದನು. ಹೊಯ್ಸಳ ವಿನಯಾದಿತ್ಯನು ಚಾಳುಕ್ಯರ ಪರಮಾಧಿಕಾರವನ್ನು ಒಪ್ಪಿಕೊಂಡು ಆ ಮನೆತನದೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದನು. ತನ್ನ ಮಗಳು ಹೊಯ್ಸಳದೇವಿಯನ್ನು ಒಂದನೆಯ ಸೋಮೇಶ್ವರನಿಗೆ ವಿವಾಹ ಮಾಡಿಕೊಟ್ಟನು. ಹೊಯ್ಸಳರು ನಿಷ್ಠೆಯಿಂದ ಸಾಮಂತರಾಗಿ ಚಾಳುಕ್ಯರಿಗೆ ಸೇವೆ ಸಲ್ಲಿಸಿದರು. ಅದೇ ರೀತಿ ಸೇವುಣರು ಕೂಡ ನಿಷ್ಠೆಯಿಂದ ಚಾಳುಕ್ಯರಿಗೆ ಸೇವೆ ಸಲ್ಲಿಸಿದರು. ಕ್ರಿ.ಶ. 1068 ರಲ್ಲಿ ಒಂದನೆಯ ಸೋಮೇಶ್ವರನು ಮರಣ ಹೊಂದಿದನು. ಅವನಿಗೆ ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ ಮತ್ತು ಮೂರನೆಯ ಜಯಸಿಂಹ ಎಂಬ ಇಬ್ಬರು ಮಕ್ಕಳಿದ್ದರು.

## 17.6 ಎರಡನೆಯ ಸೋಮೇಶ್ವರ (ಕ್ರಿ.ಶ. 1068-1076)

ಒಂದನೆಯ ಸೋಮೇಶ್ವರನ ನಂತರ ಅವನ ಮಗ ಎರಡನೆಯ ಸೋಮೇಶ್ವರನು ಚಕ್ರಾಧಿಪತಿಯಾದನು. ಅವನು ಪಟ್ಟಕ್ಕೆ ಬಂದ ಮೇಲೆ ಚೋಳರ ವಿರುದ್ಧ ಯುದ್ಧ ಘೋಷಿಸಿದನು. ಏಕೆಂದರೆ ವೀರ ರಾಜೇಂದ್ರನು ಗುತ್ತಿಯನ್ನು ಮುತ್ತಿದ್ದನು. ಸೋಮೇಶ್ವರನು ಗುತ್ತಿಯಿಂದ ಚೋಳರನ್ನು ಹೊಡೆದೋಡಿಸುವುದರಲ್ಲಿ ಯಶಸ್ವಿಯಾದನು.

ಪರಮಾರ ರಾಜ್ಯದಲ್ಲಿ ಉಂಟಾದ ರಾಜಕೀಯ ಬೆಳವಣಿಗೆಗಳು ಎರಡನೆಯ ಸೋಮೇಶ್ವರನ ಗಮನ ಸೆಳೆದವು. ಸೋಮೇಶ್ವರನು ಚಕ್ರವರ್ತಿಯಾಗುವ ಮುಂಚೆ ಪರಮಾರ ರಾಜ್ಯದಲ್ಲಿ ನಡೆದ ಆಂತರಿಕ ಯುದ್ಧದಲ್ಲಿ ಜಯಸಿಂಹನು ಯಶಸ್ವಿಯಾಗಿ ಪಟ್ಟಕ್ಕೆ ಬಂದನು. ಆದರೆ ಉದಯಾದಿತ್ಯನು ಜಯಸಿಂಹನನ್ನು ಪದಚ್ಯುತಿಗೊಳಿಸಿ ಪರಮಾರ ಸಿಂಹಾಸನವನ್ನು ವಶಪಡಿಸಿಕೊಂಡನು. ಆದ್ದರಿಂದ ಸೋಮೇಶ್ವರನು ಚಾಳುಕ್ಯ, ಚೌಳುಕ್ಯ ಮತ್ತು ಕಳಚೂರಿ ಮನೆತನಗಳನ್ನೊಳಗೊಂಡಂತೆ ಒಂದು ಒಕ್ಕೂಟವನ್ನು ರಚಿಸಿಕೊಂಡು ಉದಯಾದಿತ್ಯನ ಮೇಲೆ ದಾಳಿ ಮಾಡಿದನು. ಉದಯಾದಿತ್ಯನು ಈ ಒಕ್ಕೂಟವನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟುವಂತೆ ಮಾಡಿದನು. ಈ ದಂಡಯಾತ್ರೆಯಿಂದ ಯಾವುದೇ ಲಾಭವಿಲ್ಲದೆ ಇದ್ದುದರಿಂದ ಅನಾವಶ್ಯಕವಾಗಿ ಕೈಗೊಂಡ ದಂಡಯಾತ್ರೆಯಾಗಿತ್ತು.

ಆರನೆಯ ವಿಕ್ರಮಾದಿತ್ಯನು ತನ್ನ ಹಿರಿಯ ಸಹೋದರ ಎರಡನೆಯ ಸೋಮೇಶ್ವರನ ವಿರುದ್ಧ ದಂಗೆ ಎದ್ದನು. ವಿಕ್ರಮಾದಿತ್ಯನು ತನ್ನ ಕಿರಿಯ ಸಹೋದರ ಜಯಸಿಂಹನ ಜೊತೆಗೂಡಿ ಅಧಿಕಾರಕ್ಕೆ ಬರಲು ಯತ್ನಿಸಿದನು. ಇವರಿಬ್ಬರು ರಾಜಧಾನಿಯನ್ನು ತೊರೆದು ಸಂಚು ರೂಪಿಸಲು ಪ್ರಾರಂಭಿಸಿದರು. ಅವರು ಹಲವು ಮಾಂಡಳಿಕರ ಸಹಾಯ ಪಡೆದು ಎರಡನೆಯ ಸೋಮೇಶ್ವರನನ್ನು ಸೋಲಿಸಿದರು. ಈ ರೀತಿಯಾಗಿ ಆರನೆಯ ವಿಕ್ರಮಾದಿತ್ಯನು ಅಧಿಕಾರಕ್ಕೆ ಬಂದನು.

## 17.7 ಆರನೆಯ ವಿಕ್ರಮಾದಿತ್ಯ (ಕ್ರಿ.ಶ. 1077-1127)

ಆರನೆಯ ವಿಕ್ರಮಾದಿತ್ಯನು ಕಲ್ಯಾಣದ ಚಾಳುಕ್ಯರ ಸುಪ್ರಸಿದ್ಧ ಸಾಮ್ರಾಟ. ಐವತ್ತು ವರ್ಷಗಳ ದೀರ್ಘ ಆಡಳಿತ ನಡೆಸಿದನು. ಈತನ ಕಾಲಕ್ಕೆ ಸಂಬಂಧಿಸಿದ ಹೆಚ್ಚು ವಿವರಗಳು ಅನೇಕ ಶಾಸನಗಳಿಂದ ಮತ್ತು ಬಿಲ್ಹಣನು ರಚಿಸಿದ 'ವಿಕ್ರಮಾಂಕದೇವ ಚರಿತ' ದಿಂದ ತಿಳಿದು ಬರುತ್ತದೆ. ಈತನು ತನ್ನ ಹಿರಿಯ ಸಹೋದರ ಎರಡನೆಯ ಸೋಮೇಶ್ವರನನ್ನು ಪದಚ್ಯುತಿಗೊಳಿಸಿ ಚಕ್ರಾಧಿಪತಿಯಾದನು. ಕ್ರಿ.ಶ. 1077 ರಲ್ಲಿ ಆರನೆಯ ವಿಕ್ರಮಾದಿತ್ಯನು ಚಕ್ರವರ್ತಿಯಾದ ಮೇಲೆ ತನ್ನ ಹೆಸರಿನಲ್ಲಿಯೇ ಒಂದು ಶಕೆಯನ್ನು ಪ್ರಾರಂಭಿಸಿದನು. ಚಾಲುಕ್ಯ ವಿಕ್ರಮ ಶಕೆಯೆಂದು ಕರೆಯಲಾಯಿತು. ಇದೇ ರೀತಿ ಅವನ ಉತ್ತರಾಧಿಕಾರಿಗಳು ಕೂಡ ತಮ್ಮ ಹೆಸರುಗಳಲ್ಲೆ ತಮ್ಮ ಆಳ್ವಿಕೆಯ ಕಾಲದ ಪ್ರಾರಂಭವನ್ನು ಲೆಕ್ಕ ಹಾಕಲು ಪ್ರಾರಂಭಿಸಿದರು. ವಿಕ್ರಮಾದಿತ್ಯನು ಅದೇ ದೀರ್ಘಕಾಲ ಆಳ್ವಿಕೆ ನಡೆಸಿದರೂ ಹೆಚ್ಚಿನ ಯುದ್ಧಗಳಲ್ಲಿ ಭಾಗವಹಿಸದೆ ಶಾಂತಿಯಿಂದ ಕೂಡಿದ ಕಾಲವಾಗಿತ್ತು.

### 17.7.1 ಚೋಳರೊಡನೆ ಯುದ್ಧಗಳು

ಆರನೆಯ ವಿಕ್ರಮಾದಿತ್ಯನು ಸಿಂಹಾಸನಕ್ಕೆ ಬರುವ ವೇಳೆಗೆ ವೆಂಗಿ ರಾಜ್ಯವು ಚೋಳರ ಹಿಡಿತಕ್ಕೊಳಪಟ್ಟಿತ್ತು. ಈತನ ಸಮಕಾಲೀನ ಚೋಳ ಚಕ್ರವರ್ತಿ ಕುಲೋತ್ತುಂಗನು ಕೂಡ ಅಷ್ಟೇ ಪ್ರಬಲ ರಾಜನಾಗಿದ್ದ. ಈ ಎರಡು ರಾಜ ಮನೆತನಗಳು ಅನೇಕ ಯುದ್ಧಗಳಲ್ಲಿ ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಕಾದಾಡಿದ್ದವು. ಆದರೆ ಎರಡೂ ಪ್ರಬಲ ಮನೆತನಗಳಾಗಿದ್ದುದರಿಂದ ಯಾವುದೇ ರೀತಿಯ ಫಲಿತಾಂಶ ಉಂಟಾಗಿರಲಿಲ್ಲ.

ವಿಕ್ರಮಾದಿತ್ಯನಿಗೆ ವೆಂಗಿಯನ್ನು ಚಾಳುಕ್ಯರು ಕಳೆದುಕೊಂಡಿದ್ದುದು ವ್ಯಸನವನ್ನುಂಟು ಮಾಡಿತು. ಆದರೆ ಅವನು ಅದನ್ನು ಸಂಪೂರ್ಣವಾಗಿ ತ್ಯಜಿಸಲು ಇಚ್ಛಿಸಲಿಲ್ಲ. ಆದ್ದರಿಂದ ಅವನು ಪುನಃ ತನ್ನ ವಶಕ್ಕೆ ಪಡೆದುಕೊಳ್ಳಲು ಪ್ರಯತ್ನಗಳನ್ನು ಪ್ರಾರಂಭಿಸಿದನು. ಕುಲೋತ್ತುಂಗನು ಎರಡನೆಯ ವಿಜಯಾದಿತ್ಯನಿಗೆ ವೆಂಗಿಯ ರಾಜ್ಯದ ಆಡಳಿತವನ್ನು ವಹಿಸಿದ್ದನು. ಈತನ ಮರಣಾನಂತರ ಮುಮ್ಮಡಿ ಚೋಳನನ್ನು ವೆಂಗಿಯ ಪ್ರಾಂತ್ಯಾಧಿಕಾರಿಯನ್ನಾಗಿ ಕ್ರಿ.ಶ. 1076 ರಲ್ಲಿ ನೇಮಿಸಿದನು. ಆದರೆ ಈತನು ಒಂದು ವರ್ಷದೊಳಗೆ ತನ್ನ ಅಧಿಕಾರವನ್ನು ತ್ಯಜಿಸಿದನು. ಅನಂತರ ಅವನ ಸಹೋದರ ವೀರ ಚೋಡನು 1078 ರಿಂದ ಐದು ವರ್ಷಗಳವರೆಗೆ ಪ್ರಾಂತ್ಯಾಧಿಕಾರಿಯಾಗಿ ಮುಂದುವರಿದನು. ಅನಂತರ ರಾಜರಾಜ ಚೋಡ ಗಂಗನು ಕ್ರಿ.ಶ. 1084 ರಿಂದ 1093 ರವರೆಗೆ ಪ್ರಾಂತ್ಯಾಧಿಕಾರಿಯಾಗಿ ಮುಂದುವರಿದನು.

ವಿಕ್ರಮಾದಿತ್ಯನು ವೆಂಗಿಯಲ್ಲಿ ಹಲವು ಬಾರಿ ಪ್ರಾಂತ್ಯಾಧಿಕಾರಿಗಳು ಇಲ್ಲದೆ ಇದ್ದುದನ್ನು ಗಮನಿಸಿ ಅದರ ಮೇಲೆ ಆಕ್ರಮಣ ನಡೆಸಿ ಅದನ್ನು ವಪಡಿಸಿಕೊಳ್ಳಲು ಪ್ರಯತ್ನ ನಡೆಸಿದನು. ಇದರ ಪರಿಣಾಮವಾಗಿ ತೆಲುಗು ಚೋಳ ಮನೆತನಕ್ಕೆ ಸೇರಿದ್ದ ತೊಂಡಯ ಚೋಳ ಮಹಾರಾಜ ಮತ್ತು ದಂಡನಾಯಕ ಚಿದ್ದರಸರು ಕೊಲ್ಲಿ ಪಾಕೆ ಪ್ರದೇಶದಲ್ಲಿ ಆರನೆಯ ವಿಕ್ರಮಾದಿತ್ಯನ ಸಾಮಂತರಾಗಿ ಕ್ರಮವಾಗಿ ಕ್ರಿ.ಶ. 1087 ಮತ್ತು 1098 ರಲ್ಲಿ ಕೆಲಸ ನಿರ್ವಹಿಸುತ್ತಿದ್ದುದನ್ನು ಕಾಣಬಹುದಾಗಿದೆ. ಕ್ರಿ.ಶ. 1118 ರ ವೇಳೆಗೆ ವೆಂಗಿಯಲ್ಲಿದ್ದ ವಿಕ್ರಮ ಚೋಳನನ್ನು ಚೋಳರಾಜ ಒಂದನೆ ಕುಲೋತ್ತುಂಗನು ಅವನನ್ನು ಯುವರಾಜನನ್ನಾಗಿ ನೇಮಿಸುವ ದೃಷ್ಟಿಯಿಂದ ಬರಮಾಡಿಕೊಂಡನು. ಅದೇ ವರ್ಷದಲ್ಲಿ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಅನಂತಪಾಲನೆಂಬುವವನು ಗುಂಟೂರು ಪ್ರದೇಶದಲ್ಲಿ ಪ್ರಾಂತಾಧಿಕಾರಿಯಾಗಿದ್ದನು. ಈ ಅಂಶದಿಂದ ಕ್ರಿ.ಶ. 1120 ರ ವೇಳೆಗೆ ವೆಂಗಿಯು ಚಾಳುಕ್ಯರ ವಶವಾಯಿತೆಂದು ಹೇಳಬಹುದು. ಆದ್ದರಿಂದ ಆರನೆಯ ವಿಕ್ರಮಾದಿತ್ಯನ ಸಾಮ್ರಾಜ್ಯವು ಎರಡು ಸಮುದ್ರಗಳ ನಡುವೆ ಇದ್ದ ಇಡೀ ಪ್ರದೇಶದ ಮೇಲೆ ಹಬ್ಬಿತ್ತು ಎಂದು ಹೇಳಬಹುದು.

### 17.7.2 ನಾಲ್ಕನೆಯ ಜಯಸಿಂಹನ ದಂಗೆ

ಕಿರಿಯ ಸಹೋದರನೂ ಮತ್ತು ಯುವರಾಜನೂ ಆಗಿದ್ದ ನಾಲ್ಕನೆಯ ಜಯಸಿಂಹನು ಆರನೆಯ ವಿಕ್ರಮಾದಿತ್ಯನ ವಿರುದ್ಧ ಹಲವು ಮಾಂಡಳಿಕರ ಸಹಾಯ ಪಡೆದು ದಂಗೆ ಎದ್ದನು. ವಿಕ್ರಮಾದಿತ್ಯನ ಆಳ್ವಿಕೆಯ ಪ್ರಾರಂಭದಲ್ಲಿ ಇಬ್ಬರು ಸಹೋದರರಲ್ಲಿ ಅನ್ಯೋನತೆ ಇತ್ತು. ಆದರೆ ಇವರೀರ್ವರ ನಡುವೆ ವಿರಸ ಉಂಟಾಗಲು ಕಾರಣಗಳೇನು ಎಂಬುದು ನಮಗೆ ತಿಳಿದು ಬರುವುದಿಲ್ಲ. ಅವನು ಯುವರಾಜನಾಗಿ ಅಧಿಕಾರದಲ್ಲಿ ಮುಂದುವರಿದುದಕ್ಕೆ ಸಂಬಂಧಿಸಿದ ಹಾಗೆ ಇರತಕ್ಕ ಕೊನೆಯ ದಿನಾಂಕವೆಂದರೆ 1082 ರ

ಡಿಸೆಂಬರ್ ಐದನೆ ತಾರೀಖು. ಅನಂತರ ವಿಕ್ರಮಾದಿತ್ಯನ ಮಗನಾದ ಮಲ್ಲಿಕಾರ್ಜುನನು ಯುವರಾಜನಾದನು. ಬಿಲ್ಹಣನು ತನ್ನ ವಿಕ್ರಮಾಂಕದೇವಚರಿತದಲ್ಲಿ ನಾಲ್ಕನೆಯ ಜಯಸಿಂಹನು ಆರನೆಯ ವಿಕ್ರಮಾದಿತ್ಯನಿಂದ ಅಧಿಕಾರವನ್ನು ಕಸಿದುಕೊಳ್ಳಲು ಪ್ರಯತ್ನಪಟ್ಟನು ಎಂಬುದಾಗಿ ವಿವರಿಸಿರುವನು. ಈ ಪ್ರಯತ್ನದಲ್ಲಿ ಅವನು ಚಾಲುಕ್ಯರ ಪರಮ ವೈರಿಯಾದ ಚೋಳರಿಂದಲೂ ಸಹಾಯ ಪಡೆದನೆಂದು ವಿವರಿಸಿದ್ದಾನೆ. ಆದುದರಿಂದ ಇಬ್ಬರು ಸಹೋದರರ ನಡುವೆ ಯುದ್ಧ ಅನಿವಾರ್ಯವಾಯಿತು. ಯುದ್ಧದಲ್ಲಿ ನಾಲ್ಕನೆಯ ಜಯಸಿಂಹನನ್ನು ಸೋಲಿಸಿ ಅನಂತರ ಸೆರೆಮನೆಗೆ ಕಳುಹಿಸಿದನು. ಅನಂತರ ಜಯಸಿಂಹನ ಅಂತ್ಯದ ಬಗ್ಗೆ ತಿಳಿದುಬರುವುದಿಲ್ಲ.

### *17.7.3 ಪರಮಾರರ ವಿರುದ್ಧ ಯುದ್ಧಗಳು*

ವಿಕ್ರಮಾದಿತ್ಯನು ಮಾಳವದ ಪರಮಾರರ ವಿರುದ್ಧವು ಅನೇಕ ಯುದ್ಧಗಳನ್ನು ಕೈಗೊಂಡನು. ಈತನು ಮೂರು ಬಾರಿ ದಂಡೆತ್ತಿ ಹೋದನು. ಪಟ್ಟಕ್ಕೆ ಬಂದ ಮೇಲೆ, ಕ್ರಿ.ಶ. 1077 ರಲ್ಲಿ ಪರಮಾರ ಉದಯಾದಿತ್ಯನ ವಿರುದ್ಧ ದಂಡೆತ್ತಿ ಹೋದನು. ಈ ಯುದ್ಧದ ಬಗ್ಗೆ ಹೆಚ್ಚಿನ ವಿವರಣೆಗಳು ದೊರಕುವುದಿಲ್ಲ. ಹತ್ತು ವರ್ಷಗಳ ನಂತರ ಕ್ರಿ.ಶ. 1088 ರಲ್ಲಿ ಎರಡನೆಯ ದಂಡಯಾತ್ರೆಯನ್ನು ಕೈಗೊಂಡನು. ಉದಯಾದಿತ್ಯನನ್ನು ಸೋಲಿಸಿದ ನಂತರ ಉಜ್ಜಯಿನಿ ನಗರಕ್ಕೆ ಬೆಂಕಿ ಹಚ್ಚಿದನೆಂದು ಶಾಸನಗಳು ತಿಳಿಸುತ್ತವೆ. ಅನಂತರ ವಿಜಯ ಸ್ತಂಭವನ್ನು ನಿಲ್ಲಿಸಿದನೆಂದು ತಿಳಿದು ಬರುತ್ತದೆ. ಉದಾಯಾದಿತ್ಯನು ಈ ಯುದ್ಧದಲ್ಲಿ ಮರಣ ಹೊಂದಿದನು. ಮೂರನೆಯ ಬಾರಿಗೆ 1097 ರಲ್ಲಿ ಮತ್ತೊಂದು ಸಾರಿ ಮಾಳವದ ವಿರುದ್ಧ ದಂಡೆತ್ತಿ ಹೋಗಿ ಜಯಗಳಿಸಿದನೆಂದು ತಿಳಿದು ಬರುತ್ತದೆ. ಈ ವೇಳೆಯಲ್ಲಿ ಉದಯಾದಿತ್ಯನ ಮಗನಾದ ನಾರವರ್ಮನು ಧಾರಾದಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿದು ಬರುತ್ತದೆ. ಉದಯಾದಿತ್ಯನ ಮತ್ತೊಬ್ಬ ಮಗನಾದ ಜಗದೇವನ ಬಗ್ಗೆ ಅಪಾರ ಪ್ರೀತಿ ಇಟ್ಟಿದ್ದನು. ಆದ್ದರಿಂದ ಅವನನ್ನು ವಿಕ್ರಮಾದಿತ್ಯನು ಚಾಳುಕ್ಯ ಸಾಮ್ರಾಜ್ಯಕ್ಕೆ ಕರೆದುಕೊಂಡು ಬಂದನು. ಈ ದಂಡಯಾತ್ರೆಗಳಿಂದಾಗಿ ಚಾಲುಕ್ಯ ವಿಕ್ರಮಾದಿತ್ಯನು ನರ್ಮದಾ ನದಿಯ ದಕ್ಷಿಣಕ್ಕಿದ್ದ ಎಲ್ಲಾ ಪ್ರದೇಶಗಳನ್ನು ಗೆದ್ದುಕೊಂಡನು.

ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಕೆಲವು ಸಾಮಂತರು ದಂಗೆ ಎದ್ದರು. ಪೆತವೆಯ ನಾಗವರ್ಮ ಮತ್ತು ಗೊಗ್ಗಿ ದಂಗೆ ಎದ್ದರು. ಅವರ ದಂಗೆಗಳನ್ನು ಅಡಗಿಸಿ ಅವರು ಚಕ್ರವರ್ತಿಗೆ ಕಪ್ಪ ಕಾಣಿಕೆಯನ್ನು ಸಲ್ಲಿಸುವಂತೆ ಮಾಡಲಾಯಿತು. ಕೊಂಕಣದಲ್ಲಿ ಆಳ್ವಿಕೆ ನಡೆಸುತ್ತಿದ್ದ ಒಂದನೆಯ ಭೋಜನು ಕೂಡ ವಿಕ್ರಮಾದಿತ್ಯನ ವಿರುದ್ಧ ದಂಗೆ ಎದ್ದನು. ಅನೇಕ ಯುದ್ಧಗಳನ್ನು ವಿಕ್ರಮಾದಿತ್ಯನು ಅವನ ವಿರುದ್ಧ ಕೈಗೊಳ್ಳಬೇಕಾಯಿತು. ಅಂತಿಮವಾಗಿ ಕ್ರಿ.ಶ. 1100 ರಲ್ಲಿ ಅವನನ್ನು ಸದೆಬಡಿಯಲಾಯಿತು.

### *17.7.4 ಹೊಯ್ಸಳರು ಮತ್ತು ಇನ್ನಿತರ ಸಾಮಂತರೊಡನೆ ಸಂಬಂಧಗಳು*

ಆರನೆಯ ವಿಕ್ರಮಾದಿತ್ಯನು ತನ್ನ ಸಾಮ್ರಾಜ್ಯದ ನೈರುತ್ಯದಲ್ಲಿ ಹಲವು ಮಾಂಡಳಿಕರು ದಂಗೆ ಎದ್ದರು. ಅವರು ಸ್ವಾತಂತ್ರ್ಯ ಘೋಷಿಸಿಕೊಳ್ಳಲು ಪ್ರಯತ್ನ ನಡೆಸಿದರು. ಅವರುಗಳಲ್ಲಿ ಅತ್ಯಂತ ಪ್ರಮುಖನಾದ ಸಾಮಂತನೆಂದರೆ ಹೊಯ್ಸಳ ಮನೆತನ. ವಿನಯಾದಿತ್ಯನ ಮಗನಾದ ಎರೆಯಂಗನು ಆರನೆಯ ವಿಕ್ರಮಾದಿತ್ಯನ ನಿಷ್ಠಾವಂತ ಸೇವಕನಾಗಿದ್ದನು. ಚಾಳುಕ್ಯರ ಅನೇಕ ಯುದ್ಧಗಳಲ್ಲಿ ಅವನು ಅವರ ಪರವಾಗಿ ಹೋರಾಟ ನಡೆಸಿದನು. ಒಂದನೆಯ ಬಲ್ಲಾಳನ ಕಾಲದಲ್ಲಿ ಚಾಳುಕ್ಯರ ಮತ್ತು ಹೊಯ್ಸಳರ ಸಂಬಂಧ ಹದಗೆಟ್ಟಿತು. ಒಂದನೆಯ ಬಲ್ಲಾಳನು ಸ್ವಾತಂತ್ರ್ಯ ಘೋಷಿಸಿಕೊಳ್ಳುವ ಪ್ರಯತ್ನ ನಡೆಸಿದನು. ಆದ್ದರಿಂದ ಅವನನ್ನು ನಿಯಂತ್ರಿಸಲು ವಿಕ್ರಮಾದಿತ್ಯನು ಕ್ರಮ ಕೈಗೊಳ್ಳಬೇಕಾಯಿತು. ಆದುದರಿಂದ ಕ್ರಿ.ಶ. 1100 ರಲ್ಲಿ ಒಂದು ಸೈನ್ಯವನ್ನು ಪರಮಾರ ರಾಜಕುಮಾರ ಜಗದೇವನ ವಿರುದ್ಧ ಕಳುಹಿಸಿಕೊಟ್ಟನು. ಒಂದನೆಯ ಬಲ್ಲಾಳನ ನೇತೃತ್ವದಲ್ಲಿ ತನ್ನ ಸಹೋದರ ವಿಷ್ಣುವರ್ಧನನ ಜೊತೆಗೂಡಿ ಜಗದೇವನ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು.

ಒಂದನೆಯ ಬಲ್ಲಾಳನು ಈ ದಿಗ್ವಿಜಯದಿಂದ ಪ್ರೇರೆಪಿಸಲ್ಪಟ್ಟು ತನ್ನ ದಂಡಯಾತ್ರೆಯನ್ನು ಮುಂದುವರಿಸಿದನು. ಚಾಳುಕ್ಯರ ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರನ್ನು ಮತ್ತು ಚೆಂಗಾಳ್ವರನ್ನು ಸೋಲಿಸಿ ಅವರು ಹೊಯ್ಸಳರ ಪರಮಾಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ನಂತರ ಒಂದನೆಯ ಬಲ್ಲಾಳನು ತುಂಗಾಭದ್ರ ನದಿಯ ಉತ್ತರದ ಹಲವು ಪ್ರದೇಶಗಳನ್ನು ವಶಪಡಿಸಿಕೊಂಡನು. ಅವನು ಬೆಳವೊಲ ಪ್ರಾಂತ್ಯವನ್ನು ಆಕ್ರಮಿಸಿಕೊಂಡನು. ಆರನೆಯ ವಿಕ್ರಮಾದಿತ್ಯನು ಬಲ್ಲಾಳನನ್ನು ಸದೆ ಬಡಿಯಲು ತೀರ್ಮಾನಿಸಿದನು. ಒಂದು ದೊಡ್ಡ ಸೈನ್ಯವನ್ನು ಅವನ ಸಾಮಂತನಾಗಿದ್ದ ಸಿಂಧ ಎರಡನೆಯ ಅಚುಗಿಯ ನಾಯಕತ್ವದಲ್ಲಿ

ಕಳುಹಿಸಿಕೊಟ್ಟನು. ಈತನು ಬಲ್ಲಾಳನನ್ನು ಸೋಲಿಸಿ ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಪುನಃ ಒಂದನೆಯ ಬಲ್ಲಾಳನು ಚಾಳುಕ್ಯರ ಪರಮಾಧಿಕಾರವನ್ನು ಒಪ್ಪಿಕೊಂಡು ಸಾಮಂತನಾಗಿ ಮುಂದುವರಿದನು.

ಒಂದನೆಯ ಬಲ್ಲಾಳನ ನಂತರ ವಿಷ್ಣುವರ್ಧನನು ಹೊಯ್ಸಳ ರಾಜ್ಯದಲ್ಲಿ ಅಧಿಕಾರಕ್ಕೆ ಬಂದನು. ಈತನು ಹೊಯ್ಸಳ ರಾಜ್ಯವನ್ನು ಚಾಳುಕ್ಯರ ಪರಮಾಧಿಕಾರದಿಂದ ಬಿಡಿಸಲು ನಿರ್ಧರಿಸಿದನು. ಅವನು ನಿಡುಗಲ್ ಮತ್ತು ಹೆಂಜೇರು ಸಾಮಂತರನ್ನು ಸೋಲಿಸಿದನು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಅಳುಪರನ್ನು ಕೂಡ ಸೋಲಿಸಿದನು. ಈ ಘಟನೆಗಳು ಪುನಃ ವಿಕ್ರಮಾದಿತ್ಯನ ಮನಸ್ಸನ್ನು ಕೆಡಿಸಿದವು. ಪುನಃ ಎರಡನೆಯ ಅಚುಗಿಯನ್ನು ವಿಷ್ಣುವರ್ಧನನ್ನು ಸದೆಬಡಿಯಲು ಕಳುಹಿಸಿಕೊಟ್ಟನು. ಅವನು ಚಾಳುಕ್ಯ ಪ್ರದೇಶಗಳಿಂದ ವಿಷ್ಣುವರ್ಧನನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಅನಂತರ ಹೊಯ್ಸಳರ ಗಡಿಯನ್ನು ದಾಟಿ ವಿಷ್ಣುವರ್ಧನನನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಕ್ರಿ.ಶ. 1118 ರಲ್ಲಿ ಹಾಸನದ ಹತ್ತಿರ ಕಣ್ಣೆಗಾಲದಲ್ಲಿ ನಿರ್ಣಾಯಕ ಯುದ್ಧವು ನಡೆಯಿತು. ವಿಷ್ಣುವರ್ಧನನ ದಂಡನಾಯಕ ಗಂಗ ರಾಜನು ಅಚುಗಿಯನ್ನು ಸೋಲಿಸಿದನು. ಅನಂತರ ಚಾಳುಕ್ಯ ಸೈನ್ಯವು ಹೊಯ್ಸಳ ರಾಜ್ಯದಿಂದ ಹಿಮ್ಮೆಟ್ಟಿತು. ಈ ವಿಜಯದಿಂದ ಸ್ಫೂರ್ತಿ ಪಡೆದ ವಿಷ್ಣುವರ್ಧನನು ಚಾಳುಕ್ಯರ ಪ್ರದೇಶಗಳ ಮೇಲೆ ಪುನಃ ದಾಳಿಗಳನ್ನು ಪ್ರಾರಂಭಿಸಿದನು. ಅವನು ಹಾನಗಲ್‌ನ ಕದಂಬರ ಪ್ರದೇಶದ ಮೇಲೆ ದಾಳಿ ಮಾಡಿದನು. ಅವನು ಪುನಃ ತುಂಗಾಭದ್ರ ನದಿಯನ್ನು ದಾಟಿ ಬಳ್ಳಾರಿಯನ್ನು ವಪಡಿಸಿಕೊಂಡನು. ಅನಂತರ ಕುಮ್ಮಟವನ್ನು ವಶಪಡಿಸಿಕೊಂಡನು. ಬೆಳವೊಲ ಪ್ರದೇಶವನ್ನು ಮಲಪ್ರಭ ನದಿಯವರೆಗೂ ಆಕ್ರಮಿಸಿಕೊಂಡನು. ವಿಕ್ರಮಾದಿತ್ಯನು ಪುನಃ ವಿಷ್ಣುವರ್ಧನನ ವಿರುದ್ಧ ಯುದ್ಧ ಮಾಡುವುದು ಅನಿವಾರ್ಯವಾಯಿತು. ಹಲಸೂರು ಮತ್ತು ಹೊಸವೀಡುಗಳಲ್ಲಿ ನಡೆದ ನಿರ್ಣಾಯಕ ಯುದ್ಧಗಳಲ್ಲಿ ಚಾಳುಕ್ಯ ಸೈನ್ಯ ವಿಷ್ಣುವರ್ಧನನ ವಿರುದ್ಧ ಜಯಗಳಿಸಿತು. ಹೊಯ್ಸಳ ವಿಷ್ಣುವರ್ಧನನು ತಾನು ಗೆದ್ದುಕೊಂಡಿದ್ದ ಎಲ್ಲಾ ಪ್ರದೇಶಗಳನ್ನು ಹಿಂದಕ್ಕೆ ಬಿಟ್ಟುಕೊಡಬೇಕಾಯಿತು.

ಐವತ್ತು ವರ್ಷಗಳ ದೀರ್ಘ ಆಳ್ವಿಕೆಯ ನಂತರ ಕ್ರಿ.ಶ. 1127 ರಲ್ಲಿ ವಿಕ್ರಮಾದಿತ್ಯನು ಮರಣ ಹೊಂದಿದನು. ವಿಕ್ರಮಾದಿತ್ಯನ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯದಲ್ಲಿ ಶಾಂತಿ ಸುಭಿಕ್ಷೆ ನೆಲೆಸಿತ್ತು. ಈತನು ತನ್ನ ಆಸ್ಥಾನದಲ್ಲಿ ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ್ದನು. ಬಿಲ್ಹಣನು ಕಾಶ್ಮೀರದಿಂದ ಆಗಮಿಸಿ ಅವನ ಆಸ್ಥಾನ ಕವಿಯಾದನು. ಅವನು 'ವಿಕ್ರಮಾಂಕದೇವಚರಿತೆ' ಯನ್ನು ರಚಿಸಿದ್ದಾನೆ. ಈ ಕಾಲದ ಮತ್ತೊಬ್ಬ ಸುಪ್ರಸಿದ್ಧ ಕವಿ ವಿಜ್ಞಾನೇಶ್ವರನು ಕೂಡ ಅವನ ಆಸ್ಥಾನದಲ್ಲಿದ್ದನು. ಪ್ರಪಂಚದಲ್ಲಿ ಕಲ್ಯಾಣದಂಥ ಪಟ್ಟಣ, ವಿಕ್ರಮಾದಿತ್ಯನಂಥ ಚಕ್ರವರ್ತಿ ಹಿಂದೆ ಇರಲಿಲ್ಲ ಮತ್ತೆ ಮುಂದೆ ಬರಲಿಲ್ಲ ಎಂಬುದಾಗಿ ತನ್ನ ಆಶ್ರಯದಾತನ ಬಗ್ಗೆ ವಿಜ್ಞಾನೇಶ್ವರನು ಹೊಗಳಿ ಬರೆದಿದ್ದಾನೆ. ಅವನು 'ಮಿತಾಕ್ಷರ' ಎಂಬ ಗ್ರಂಥವನ್ನು ರಚಿಸಿದ್ದಾನೆ. ವಿಕ್ರಮಾದಿತ್ಯನು ತನ್ನ ಆಳ್ವಿಕೆಯ ಕಾಲದಲ್ಲಿ ಒಂದು ಹೊಸ ಪಟ್ಟಣವನ್ನು ನಿರ್ಮಿಸಿ ಅದಕ್ಕೆ 'ವಿಕ್ರಮಾಪುರ' ವೆಂದು ನಾಮಕರಣ ಮಾಡಿದನು.

## 17.8 ಮೂರನೆಯ ಸೋಮೇಶ್ವರ (1127-1139)ಎರಡನೆಯ ಜಗದೇಕಮಲ್ಲ (1139-1149)

ಕ್ರಿ.ಶ. 1127 ರಲ್ಲಿ ಮುಮ್ಮಡಿ ಸೋಮೇಶ್ವರನು ಆರನೆಯ ವಿಕ್ರಮಾದಿತ್ಯನ ಉತ್ತರಾಧಿಕಾರಿಯಾಗಿ ಚಾಳುಕ್ಯ ಸಾಮ್ರಾಜ್ಯದ ಅಧಿಕಾರ ಸೂತ್ರ ವಹಿಸಿಕೊಂಡನು. ಆದರೆ ಈತನ ಆಳ್ವಿಕೆಯ ಕಾಲದಲ್ಲಿ ಚಾಳುಕ್ಯರು ವೆಂಗಿರಾಜ್ಯವನ್ನು ಕಳೆದುಕೊಂಡರು. ವಿಕ್ರಮಾಧಿತ್ಯನು ಮರಣ ಹೊಂದಿದ ತಕ್ಷಣವೇ ವೆಂಗಿಯ ದಕ್ಷಿಣ ಭಾಗವನ್ನು ಚೋಳರು ವಶಪಡಿಸಿಕೊಂಡರು. ಹಲವು ವರ್ಷಗಳವರೆಗೆ ವೆಂಗಿಯ ಉತ್ತರ ಭಾಗಗಳು ಚಾಳುಕ್ಯರ ವಶದಲ್ಲಿದ್ದವು. ಆದರೆ ಅನಂತರ ವೆಂಗಿಯ ರಾಜ್ಯವು ಸಂಪೂರ್ಣವಾಗಿ ಚೋಳರ ವಶವಾಯಿತು.

ಹೊಯ್ಸಳ ವಿಷ್ಣುವರ್ಧನನು ಪುನಃ ಚಾಳುಕ್ಯರ ಅಧಿಕಾರವನ್ನು ಕಿತ್ತೊಗೆಯಲು ಪ್ರಯತ್ನ ನಡೆಸಿದನು. ಕ್ರಿ.ಶ. 1135 ರ ನಂತರ ವಿಷ್ಣುವರ್ಧನನು ಉಚ್ಚಂಗಿಯ ಪಾಂಡ್ಯರನ್ನು ಸದೆಬಡಿದನು. ಅನಂತರ ಬನವಾಸಿ ಮತ್ತು ಹಾನಗಲ್ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದನೆಂದು ತಿಳಿದು ಬರುತ್ತದೆ. ಆದರೆ ಮುಮ್ಮಡಿ ಸೋಮೇಶ್ವರನು ಇದರಿಂದ ಧೃತಿಗೆಡದೆ ವಿಷ್ಣುವರ್ಧನನ ಈ ಧಾಳಿಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು.

ಸೋಮೇಶ್ವರನು ಶಾಂತಿ ಪ್ರಿಯ ಅರಸನಾಗಿದ್ದುದರಿಂದ ಹೆಚ್ಚು ಸಮಯವನ್ನು ಕಲ್ಯಾಣದಲ್ಲೇ ಕಳೆದನು. ಸೋಮೇಶ್ವರನು ತನ್ನ ಕೃತಿ **ಅಭಿಲಾಷಿತಾರ್ಥ ಚಿಂತಾಮಣಿ** ಅಥವಾ **ಮಾನಸೋಲ್ಲಾಸ**ದಿಂದ ಸಾಹಿತ್ಯ ಪ್ರಪಂಚದಲ್ಲಿ ಚಿರಪರಿಚಿತನಾಗಿದ್ದಾನೆ.

ಮಾನಸೋಲ್ಲಾಸವು ನ್ಯಾಯಶಾಸ್ತ್ರ, ವೈದ್ಯಶಾಸ್ತ್ರ, ಸಂಗೀತ, ಚಿತ್ರಕಲೆ, ಗಜಶಾತ್ರ, ಅಶ್ವಶಾಸ್ತ್ರ, ಅಲಂಕಾರ ಮೊದಲಾದ ಅನೇಕ ವಿಷಯಗಳ ನಿರೂಪಣೆಯನ್ನು ಕುರಿತ ಉದ್ಗ್ರಂಥವಾಗಿದೆ. ಇದರಿಂದ ಅವನಿಗೆ 'ಸರ್ವಜ್ಞ ಚಕ್ರವರ್ತಿ' ಎಂಬ ಬಿರುದಿತ್ತಲ್ಲದೆ, ತ್ರಿಭುವನತಕಮಲ್ಲ ಮತ್ತು ಭೂಲೋಕಮಲ್ಲ ಎಂಬ ಬಿರುದುಗಳನ್ನು ಧರಿಸಿದ್ದನು. ಅವನಿಗೆ ಇಮ್ಮಡಿ ಜಗದೇಕಮಲ್ಲ ಮತ್ತು ಮುಮ್ಮಡಿ ತೈಲನೆಂಬ ಇಬ್ಬರು ಗಂಡು ಮಕ್ಕಳಿದ್ದರು.

ಎರಡನೆಯ ಜಗದೇಕಮಲ್ಲ (ಕ್ರಿ.ಶ. 1139-1149) ಮುಮ್ಮಡಿ ಸೋಮೇಶ್ವರನ ನಂತರ ಅವನ ಹಿರಿಯ ಮಗ ಎರಡನೆಯ ಜಗದೇಕಮಲ್ಲನು ಚಾಳುಕ್ಯ ಅರಸನಾದನು. ಅವನ ಆಳ್ವಿಕೆಯ ಸಮಯದಲ್ಲಿ ಅನೇಕ ಮಹಾಮಾಂಡಳಿಕರು ದಂಗೆ ಏಳಲು ಪ್ರಾರಂಭಿಸಿದರು. ಪುನಃ ಹೊಯ್ಸಳ ವಿಷ್ಣುವರ್ಧನನು ಚಾಳುಕ್ಯ ಪ್ರದೇಶಗಳ ಮೇಲೆ ಧಾಳಿ ಮಾಡಿದನು. ಈ ಸಮಯದಲ್ಲಿ ಚಾಳುಕ್ಯರ ದಂಡ ನಾಯಕರುಗಳಾದ ಬರಮದೇವ ಮತ್ತು ಅವನ ಸಹೋದರ ಮಾಧವ ವಿಷ್ಣುವರ್ಧನನನ್ನು ಓಡಿಸಿ ಹಿಮ್ಮೆಟ್ಟುವಂತೆ ಮಾಡಿದರು. ಆದರೆ ಮಾಂಡಳಿಕ ಕಳಚೂರ್ಯ ಎರಡನೆಯ ಬಿಜ್ಜಳನು ಹೆಚ್ಚು ಪ್ರಬಲನಾದನು. ಮಂಗಳವೇಡ ಅವನ ರಾಜಧಾನಿಯಾಗಿತ್ತು. ಕ್ರಿ.ಶ. 1142 ರಲ್ಲಿ ಬಿಜ್ಜಳನು ಕರ್ಡ್ವಾಡ್ - 4000 ವಿಭಾಗದ ಮೇಲೆ ಆಳ್ವಿಕೆ ನಡೆಸುತ್ತಿದ್ದನು. ಅನಂತರ ಅವನು ತರ್ದಮಾಡಿ 1000 ರ ಮೇಲೆ ಆಳ್ವಿಕೆ ನಡೆಸುತ್ತಿದ್ದನು.

## 17.9 ಮೂರನೆಯ ತೈಲ (ಕ್ರಿ.ಶ. 1149-1162) ಮತ್ತು ನಾಲ್ಕನೆಯ ಸೋಮೇಶ್ವರ

ಮೂರನೆಯ ತೈಲನು ಬಹಳ ದುರ್ಬಲನಾಗಿದ್ದುದರಿಂದ ಕಳಚೂರಿ ಬಿಜ್ಜಳನು ಒಂದು ಸ್ವತಂತ್ರ್ಯ ರಾಜ್ಯವನ್ನು ಸ್ಥಾಪಿಲು ನಿರ್ಧರಿಸಿದನು. ಕ್ರಿ.ಶ. 1162 ರ ವೇಳೆಗೆ ಅವನು ಕಲ್ಯಾಣವನ್ನು ಆಕ್ರಮಿಸಿಕೊಂಡನು. ಮೂರನೆಯ ತೈಲನು ಅಲ್ಲಿಂದ ಪಲಾಯನ ಮಾಡಿದನು. ಈ ಘಟನೆಯ ನಂತರ ಅವನು ಹೆಚ್ಚು ಕಾಲ ಬದುಕಲಿಲ್ಲ. ಈ ರೀತಿಯಾಗಿ ಕಳಚೂರಿ ಮನೆತನವು ಅಧಿಕಾರಕ್ಕೆ ಬಂದು ಸುಮಾರು 20 ವರ್ಷಗಳ ಕಾಲ ಆಳ್ವಿಕೆ ನಡೆಸಿತು.

ನಾಲ್ಕನೆಯ ಸೋಮೇಶ್ವರನು ಇಪ್ಪತ್ತು ವರ್ಷಗಳವರೆಗೆ ಪುನಃ ಚಾಳುಕ್ಯರ ಅಧಿಕಾರವನ್ನು ಸ್ಥಾಪಿಸಲು ಕಾಯಬೇಕಾಯಿತು. ಕ್ರಿ.ಶ. 1183 ರಲ್ಲಿ ಕಳಚೂರ್ಯರನ್ನು ಸೋಲಿಸಿ ಚಾಲುಕ್ಯರ ಅಧಿಕಾರವನ್ನು ಪುನರ್ ಸ್ಥಾಪಿಸಿದನು. ಅನೇಕ ದಂಡನಾಯಕರುಗಳು ಕಳಚೂರಿ ಮನೆತನವನ್ನು ಪದಚ್ಯುತಿಗೊಳಿಸಿ ಚಾಳುಕ್ಯರ ಅಧಿಕಾರವನ್ನು ಪುನರ್ ಸ್ಥಾಪಿಸಲು ಹೋರಾಟ ನಡೆಸಿದರು. ಅವರಲ್ಲಿ ಬರ್ಮ ಎಂಬ ದಂಡನಾಯಕನು ಕಳಚೂರಿ ಮನೆತನದ ಅಧಿಕಾರವನ್ನು ಕೊನೆಗೊಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದನು.

ಆದರೆ ಸೋಮೇಶ್ವರನ ಆಳ್ವಿಕೆಯು ಬಹಳ ವರ್ಷಗಳ ಕಾಲ ಮುಂದುವರಿಯಲಿಲ್ಲ. ಸೇವುಣರ ಮತ್ತು ಹೊಯ್ಸಳರ ಒತ್ತಡದಿಂದಾಗಿ ಚಾಳುಕ್ಯ ಸಾಮ್ರಾಜ್ಯವು ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಉತ್ತರ ದಿಕ್ಕಿನಿಂದ ಸೇವುಣರು ಮತ್ತು ದಕ್ಷಿಣದ ಕಡೆಯಿಂದ ಹೊಯ್ಸಳರು ಕಲ್ಯಾಣವನ್ನು ಆಕ್ರಮಿಸಿಕೊಳ್ಳಲು ಸತತವಾಗಿ ಪ್ರಯತ್ನ ನಡೆಸುತ್ತಿದ್ದರು. ಅಂತಿಮವಾಗಿ ಸೇವುಣ ಐದನೆಯ ಭಿಲ್ಲಮನು ಕಲ್ಯಾಣವನ್ನು ಆಕ್ರಮಿಸಿಕೊಂಡನು. ಸೋಮೇಶ್ವರನನ್ನು ಅಧಿಕಾರಕ್ಕೆ ತರಲು ಪ್ರಮುಖ ಪಾತ್ರವಹಿಸಿದ್ದ ಬ್ರಹ್ಮನು ಹೊಯ್ಸಳ ವೀರ ಬಲ್ಲಾಳನಿಂದ ಸೋಲನ್ನನುಭವಿಸಿದನು. ಕ್ರಿ.ಶ. 1198 ರ ನಂತರ ಸೋಮೇಶ್ವರನ ಬಗ್ಗೆ ಯಾವ ಮಾಹಿತಿಯು ತಿಳಿದು ಬರುವುದಿಲ್ಲ. ಬಹುಶಃ ಈ ವರ್ಷಕ್ಕೆ ಚಾಳುಕ್ಯರ ಆಳ್ವಿಕೆಯು ಕೊನೆಗೊಂಡಿತೆಂದು ಹೇಳಬಹುದು.

## 17.10 ಕಳಚೂರ್ಯರು (1162-1184)

ಕಳಚೂರಿ ಮನೆತನವು ಕಲ್ಯಾಣದ ಚಾಳುಕ್ಯರನ್ನು ಪದಚ್ಯುತಿಗೊಳಿಸಿ ಸುಮಾರು ಎರಡು ವರ್ಷಗಳ ಕಾಲ ಆಳ್ವಿಕೆ ನಡೆಸಿತು. ರಾಜಕೀಯವಾಗಿ ಕಳಚೂರ್ಯರ ಆಳ್ವಿಕೆ ಕರ್ನಾಟಕದ ಇತಿಹಾಸದಲ್ಲಿ ಅಷ್ಟೊಂದು ಪ್ರಮುಖವಾದ ಕಾಲವೆಂದು ಪರಿಗಣಿಲ್ಪಟ್ಟಿಲ್ಲದೆ ಇದ್ದರೂ, ಸಾಮಾಜಿಕ ಮತ್ತು ಧಾರ್ಮಿಕ ಬದಲಾವಣೆಗಳ ದೃಷ್ಟಿಯಿಂದ ಅವರ ಆಳ್ವಿಕೆ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖವೆನಿಸಿಕೊಂಡಿದೆ. ಸೊಲ್ಲಾಪುರದ ಜಿಲ್ಲೆಯ ಮಂಗಳವಾಡ (ಆಧುನಿಕ ಮಂಗಳವಾಡ) ಅವರ ರಾಜಧಾನಿಯಾಗಿತ್ತು. ಚಾಳುಕ್ಯರ ಮನೆತನದೊಡನೆ ಅವರು ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಆರನೆಯ ವಿಕ್ರಮಾದಿತ್ಯನು ಕಳಚೂರಿ ಜೋಗಮನಮಗಳು ಸಾವಲದೇವಿಯನ್ನು ವಿವಾಹವಾಗಿದ್ದನು. ಆರನೆ ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯ ಮಗಳನ್ನು ಕಳಚೂರಿ ಅರ ಜೋಗಮನ ಮಗ ಪೆರ್ಮೂಡಿಯು ವರಿಸಿದ್ದನು. ಹೀಗೆ ಎರಡನೆ ಬಿಜ್ಜಳನು ಕೂಡ ಸಂಬಂಧಿಕನೆ ಆಗಿದ್ದನು.

ಕ್ರಿ.ಶ. 1149 ರಲ್ಲಿ ಎರಡನೆಯ ಜಗದೇಕ ಮಲ್ಲನು ಮರಣ ಹೊಂದಿದ ಮೇಲೆ ಅವನ ಕಿರಿಯ ಹೋದರ ಮೂರನೆಯ ತೈಲಪನು ಪಟ್ಟಕ್ಕೆ ಬಂದನು. ಈತನ ಕಾಲದಲ್ಲಿ 1162 ರಲ್ಲಿ ಕಳಚೂರಿ ಬಿಜ್ಜಳನು ಕಲ್ಯಾಣದ ಮೇಲೆ ದಾಳಿಮಾಡಿ ಅದನ್ನು ತನ್ನ ವಕ್ಕೆ ತೆಗೆದುಕೊಂಡನು. ಹೀಗೆ ಚಾಳುಕ್ಯರ ರಾಜಧಾನಿ ಕಳಚೂರ್ಯರ ವಶವಾಯಿತು. ಚಾಳುಕ್ಯರು ಸುಮಾರು 20 ವರ್ಷಗಳ ಕಾಲ ಅಧಿಕಾರವಿಲ್ಲದೆ ಇದ್ದರು. ಈ ಅವಧಿಯಲ್ಲಿ ಕಳಚೂರ್ಯರು ಆಳ್ವಿಕೆ ನಡೆಸಿದರು.

ಒಂದನೇಯ ಬಿಜ್ಜಳನು ಕಳಚೂರಿ ಮನೆತನದ ಪ್ರಾರಂಭದಲ್ಲಿ ಬರತಕ್ಕವರಲ್ಲಿ ಪ್ರಮುಖ ವ್ಯಕ್ತಿ. ಕ್ರಿ.ಶ. 1057 ರಲ್ಲಿ ಒಂದನೆ ಸೋಮೇಶ್ವರನ ಮಹಾಮಾಂಡಳಿಕನಾಗಿ ಸೇವೆ ಸಲ್ಲಿಸುತ್ತಿದ್ದನು. ಆತನ ಅನೇಕ ಯುದ್ಧಗಳಲ್ಲಿ ಒಂದನೆ ಬಿಜ್ಜಳನು ಭಾಗವಹಿಸಿದ್ದನು. ಈತನ ನಂತರ ಬರತಕ್ಕ ಕಳಚೂರಿ ಮನೆತನದ ಪ್ರಮುಖ ವ್ಯಕ್ತಿಗಳೆಂದರೆ ಜೋಗ ಮತ್ತು ಪೆರ್ಮಾಡಿ. ಜೋಗಮನು ಕ್ರಿ.ಶ. 1180 ರಿಂದ 1118 ರವರೆಗೆ ಕಲ್ಯಾಣ ಚಾಳುಕ್ಯರ ಸಾಮಂತನಾಗಿ ಆಳ್ವಿಕೆ ನಡೆಸಿದನು. ನಂತರ ಪೆರ್ಮಾಡಿಯು ಕ್ರಿ.ಶ. 1118 ರಿಂದ 1130 ರವರೆಗೆ ಆಳ್ವಿಕೆ ನಡೆಸಿದನು. ಈತನು ಆರನೆಯ ವಿಕ್ರಮಾದಿತ್ಯನ ಮಗಳನ್ನು ವಿವಾಹವಾಗಿದ್ದನು. ಎರಡನೆಯ ಬಿಜ್ಜಳನೆ ಈ ವಿವಾಹ ಸಂಬಂಧದಿಂದ ಜನಿಸಿದವನು.

### *17.10.1 ಎರಡನೆಯ ಬಿಜ್ಜಳ (ಸುಮಾರು ಕ್ರಿ.ಶ. 1130-1167)*

ಕ್ರಿ.ಶ. 1130 ರಲ್ಲಿ ಎರಡನೆಯ ಬಿಜ್ಜಳನು ಪೆರ್ಮಾಡಿಯ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರಬಹುದು. ಕ್ರಿ.ಶ. 1139 ರಲ್ಲಿ ಎರಡನೆಯ ಜಗದೇಕಮಲ್ಲನು ಕಲ್ಯಾಣ ಚಾಳುಕ್ಯರ ಅರಸನಾದನು. ಕ್ರಿ.ಶ. 1142 ರಲ್ಲಿ ಬಿಜ್ಜಳನು ಕರ್‍ಹಾಡ್- 4000 ಪ್ರದೇವನ್ನು ಆಳುತ್ತಿದ್ದನು. ಕ್ರಿ.ಶ. 1157 ರಲ್ಲಿ ಈತನು ತರ್ದವಾಡಿ 1000 ಪ್ರದೇಶವನ್ನು ಆಳುತ್ತಿದ್ದನು. ಕ್ರಿ.ಶ. 1149 ರಲ್ಲಿ ಎರಡನೆ ಜಗದೇಕಮಲ್ಲನು ಮರಣ ಹೊಂದಿದುದರಿಂದ ಅವನ ಸಹೋದರ ಮೂರನೆ ತೈಲಪನು ಚಾಳುಕ್ಯರ ಅರಸನಾದನು. ಅವನು ದುರ್ಬಲನಾಗಿದ್ದುದರಿಂದ ಎರಡನೆಯ ಬಿಜ್ಜಳನು ಈಸುಸಮಯವನ್ನು ಉಪಯೋಗಿಸಿಕೊಂಡು ಅವನನ್ನು ಪದಚ್ಯುತಿಗೊಳಿಸಲು ನಿರ್ಧರಿಸಿದನು. ಅನೇಕ ಸಾಮಂತರನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದರಲ್ಲಿ ಯಶಸ್ವಿಯಾದನು. ಕ್ರಿ.ಶ. 1156 ರಲ್ಲಿ ಬಿಜ್ಜಳನು ಚಾಳುಕ್ಯ ಸಿಂಹಾಸನವನ್ನು ವಶಪಡಿಸಿಕೊಂಡನು. ಮೂರನೆಯ ತೈಲಪನು ರಾಜಧಾನಿಯಿಂದ ಓಡಿಹೋಗಿ ತಲೆಮರೆಸಿಕೊಂಡು ಹಲವು ವರ್ಷಗಳು ಜೀವಿಸಿದ್ದು ಮರಣ ಹೊಂದಿದನೆಂದು ತಿಳಿದು ಬರುತ್ತದೆ.

ಎರಡನೆಯ ಬಿಜ್ಜಳನು ಚಾಳುಕ್ಯ ಸಾಮ್ರಾಜ್ಯದ ಉತ್ತರ ಭಾಗವನ್ನು ಸಂಪೂರ್ಣವಾಗಿ ತನ್ನ ಅಧೀನಕ್ಕೊಳಪಡಿಸುವುದರಲ್ಲಿ ಯಶಸ್ವಿಯಾದನು. ಆದರೆ ಸಾಮ್ರಾಜ್ಯದ ದಕ್ಷಿಣ ಭಾಗಗಳಲ್ಲಿದ್ದ ಸಾಮಂತರು ಪ್ರಬಲ ವಿರೋಧವನ್ನು ವ್ಯಕ್ತಪಡಿಸಿದರು. ಅವರೆಲ್ಲರನ್ನು ಸದೆಬಡಿದು ತನ್ನ ಅಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದನು.

ಬಿಜ್ಜಳನು ಸಮರ್ಥಯೋಧ ಮತ್ತು ದಂಡನಾಯಕನಾಗಿದ್ದನು. ಬಿಜ್ಜಳನ ಅಂತ್ಯಕ್ಕೆ ಸಂಬಂಧಿಸಿದಂತೆ ಸರಿಯಾದ ಮಾಹಿತಿ ದೊರಕುವುದಿಲ್ಲ. ವೀರಶೈವ ಧರ್ಮ ಸುಧಾರಕ ಬಸವಣ್ಣವರು ಬಿಜ್ಜಳದ ಭಂಡಾರಿಯಾಗಿದ್ದರು. ಇವರಿಬ್ಬರಿಗೂ ಹಲವು ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾಯಿತೆಂದೂ ತಿಳಿದು ಬರುತ್ತದೆ. ಅನಂತರ ಬಸವಣ್ಣ ಬಿಜ್ಜಳನ ಆಸ್ಥಾನವನ್ನು ತೊರೆದು ಹೋದ ನಂತರ ಅವನ ಅನುಯಾಯಿಗಳಿಂದ ಬಿಜ್ಜಳನು ಕೊಲೆಯಾದನೆಂದು ವಿವರಿಸಲಾಗಿದೆ. ಬಿಜ್ಜಳನ ಆಳ್ವಿಕೆ ಕ್ರಿ.ಶ. 1167 ರಲ್ಲಿ ಕೊನೆಗೊಂಡಿತು.

### *17.10.2 ಕಳಚೂರ್ಯರ ಅವನತಿ*

ಬಿಜ್ಜಳನ ಮರಣಾನಂತರ ಅವನ ಮಗ ಸೋವಿದೇವ ಅಥವಾ ಸೋಮೇಶ್ವರ ಎಂಬುವವನು ಕ್ರಿ.ಶ. 1167 ರಿಂದ 1176 ರವರೆಗೆ ಆಳಿದನು. ಅವನ ಆಳ್ವಿಕೆಯಲ್ಲಿ ಮಾಂಡಲಿಕರು ದಂಗೆಯೆದ್ದರು. ಆದರೆ ಸೋವಿದೇವನ ದಂಡನಾಯಕರುಗಳು ಈ ಮಾಂಡಲಿಕರ ದಂಗೆಗಳನ್ನು ಅಡಗಿಸಿದನು. ಸೋವಿದೇವನಿಗೆ ಮಲ್ಲುಗಿದೇವ ಅಥವಾ ಮಲ್ಲಿಕಾರ್ಜುನ ಎಂಬ ಮತ್ತೊಬ್ಬ ಸಹೋದರನಿದ್ದನೆಂದೂ ಅವನು ಸಿಂಹಾಸನಕ್ಕಾಗಿ ದಂಗೆಯೆದ್ದು ವಿಫಲನಾದರೂ ಸಹ ಭೀಮಾ ನದಿಯ ಪ್ರದೇಶದಲ್ಲಿ ಸ್ವಲ್ಪ ಕಾಲ ಸ್ವತಂತ್ರವಾಗಿ ಆಳಿದನೆಂದು ತಿಳಿದು ಬರುತ್ತದೆ. ಸೋವಿದೇವನ ಅನಂತರ ಸಂಕಮನು ಚಕ್ರವರ್ತಿಯಾದನು. ಸಂಕಮನು 1177 ರಿಂದ 1180 ರವರೆಗೆ ರಾಜ್ಯಭಾರ ಮಾಡಿದನು. ಸಂಕಮನ ಆಳ್ವಿಕೆಯ ವೇಳೆಗೆ ದೋರ ಸಮುದ್ರದ ಹೊಯ್ಸಳರು ಪ್ರಾಬಲ್ಯಕ್ಕೆ ಬಂದಿದ್ದರು. ಹೊಯ್ಸಳರು ತುಂಗಭದ್ರ

ನದಿಯವರೆಗೂ ದಂಡೆತ್ತಿ ಬಂದಿದ್ದರು. ಅವರೊಡನೆ ಯುದ್ಧ ಮಾಡಲಾಗದೆ ಒಂದು ಒಪ್ಪಂದವನ್ನು ಮಾಡಿಕೊಂಡರು. ಅದೇ ವರ್ಷ ಸಂಕಮನ ಆಳ್ವಿಕೆಯು ಕೊನೆಗೊಂಡು ಅಹವಮಲ್ಲನ ಆಳ್ವಿಕೆ ಪ್ರಾರಂಭವಾಯಿತು.

ಕ್ರಿ.ಶ. 1180 ರ ವೇಳೆಗೆ ಮಾಂಡಲಿಕರ ವಿರೋಧ ಹೆಚ್ಚಾಯಿತು. ಇದರ ಜೊತೆಗೆ ಚಾಳುಕ್ಯ ಮೂರನೆ ತೈಲಪನ ಮಗ ನಾಲ್ಕನೆ ಸೋಮೇಶ್ವರನು ತನ್ನ ಮನೆತನದ ಅಧಿಕಾರವನ್ನು ಪುನರ್ ಸ್ಥಾಪಿಸುವ ಹವಣಿಕೆಯಲ್ಲಿದ್ದನು. ಅನೇಕ ಮನೆತನದ ಅರಸರು ಅವನಿಗೆ ಸಹಾಯ ಮಾಡಿದರು. ಸೋಮೇಶ್ವರನ ಪರವಾಗಿ ದಂಡನಾಯಕ ಬರ್ಮ ಅಥವಾ ಬರ್ಮರಸ ಹೋರಾಟ ನಡೆಸಿ ಕಳಚೂರ್ಯರ ಅಧಿಕಾರವನ್ನು ಕೊನೆಗೊಳಿಸಿದನು. ಕ್ರಿ.ಶ. 1184 ರಲ್ಲಿ ಕಳಚೂರ್ಯರ ಅಧಿಕಾರ ಕೊನೆಗೊಂಡು ನಾಲ್ಕನೆಯ ಸೋಮೇಶ್ವರನು ಚಾಳುಕ್ಯರ ಅಧಿಕಾರವನ್ನು ಪುನರ್ ಸ್ಥಾಪಿಸಿದನು. ಆದರೆ ಸೋಮೇಶ್ವರನ ಆಳ್ವಿಕೆ ಬಹಲ ಕಾಲ ಮುಂದುವರಿಯಲಿಲ್ಲ. ಸೇವುಣರ ಮತ್ತು ಹೊಯ್ಸಳರ ಒತ್ತಡದಿಂದಾಗಿ ಚಾಳುಕ್ಯ ಸಾಮ್ರಾಜ್ಯವು ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಚಾಳುಕ್ಯರ ಅಧಿಕಾರವು ಕ್ರಿ.ಶ. 1189 ರಲ್ಲಿ ಕೊನೆಗೊಂಡಿತು. ಹೀಗೆ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಚಾಳುಕ್ಯರ ಮತ್ತು ಕಳಚೂರ್ಯರ ಅಧಿಕಾರವು ಕೊನೆಗೊಂಡಿತು.

## 17.11 ಕಲ್ಯಾಣ ಚಾಳುಕ್ಯರ ಆಡಳಿತ

ಚಾಲುಕ್ಯ ರಾಜ್ಯವು ಅದರ ಉಚ್ಛ್ರಾಯ ಕಾಲದಲ್ಲಿ ಇಂದಿನ ಬಹುತೇಕ ಕರ್ನಾಟಕ ಮತ್ತು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಅನೇಕ ಭಾಗಗಳನ್ನು ಒಳಗೊಂಡಿತ್ತು.

### *17.11.1 ಕೇಂದ್ರಾಡಳಿತ*

ರಾಜನು ರಾಜ್ಯದ ಸರ್ವೋಚ್ಚ ಅಧಿಕಾರಿಯಾಗಿದ್ದನು. ರಾಜ್ಯಕ್ಕೆ ಸಂಬಂಧಿಸಿದ ಎಲ್ಲಾ ಅಂತಿಮ ತೀರ್ಮಾನಗಳನ್ನು ಅವನೆ ತೆಗೆದುಕೊಳ್ಳುತ್ತಿದ್ದನು. ಆದರೆ ಅವನು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ಮಂತ್ರಿಮಂಡಲದೊಡನೆ ಆಲೋಚನ ನಡೆಸುತ್ತಿದ್ದನು. ಅವನ ಅಧೀನದಲ್ಲಿ ಅನೇಕ ಮಂತ್ರಿಗಳಿದ್ದರು. ಅವರುಗಳಲ್ಲಿ ಪ್ರಧಾನಮಂತ್ರಿ ಮತ್ತು ಮಹಾದಂಡನಾಯಕ ಪ್ರಮುಖರು. ಇನ್ನೂ ಅನೇಕ ಮಂತ್ರಿಗಳಿದ್ದರು. ಆ ಕಾಲದಲ್ಲಿ ಸಾಮಾನ್ಯವಾಗಿ ದಂಡನಾಯಕರುಗಳೇ ಮಂತ್ರಿಗಳಾಗುತ್ತಿದ್ದರು. ಮಂತ್ರಿಮಂಡಲದ ಸಂಖ್ಯೆ ಎಷ್ಟಿತ್ತೆಂಬುದು ತಿಳಿದುಬರುವುದಿಲ್ಲ. ಮಂತ್ರಿಗಳು ಅನೇಕ ಇಲಾಖೆಗಳ ಮುಖ್ಯಸ್ಥರಾಗಿದ್ದರು. ಉದಾಹರಣೆಗೆ ಸಂಧಿವಿಗ್ರಹಿ ಯುದ್ಧ ಮತ್ತು ಶಾಂತಿ ಒಪ್ಪಂದಕ್ಕೆ ಸಂಬಂಧಿಸಿದ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದನು. ಅಂತ ಪುರಾಧ್ಯಕ್ಷನು ಅರಮನೆಯ ವ್ಯವಹಾರಗಳ ಮುಖ್ಯಸ್ಥನಾಗಿದ್ದನು. ಭಂಡಾರಿ ರಾಜ್ಯದ ಕೋಶಾಧಿಕಾರಿಯಾಗಿದ್ದನು. ಇದೇ ರೀತಿ ಮನೆವೆರ್ಗಡೆ ಮತ್ತು ಅಡಪ ಅಧಿಕಾರಗಳ ಬಗ್ಗೆ ಶಾಸನಗಳು ವಿವರಿಸುತ್ತವೆ.

### *17.11.2 ಪ್ರಾಂತ್ಯ ಮತ್ತು ಸ್ಥಳೀಯ ಆಡಳಿತ*

ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಈ ಪ್ರಾಂತ್ಯಗಳ ಆಡಳಿತವನ್ನು ನಿರ್ವಹಿಸಲು ಪ್ರಾಂತ್ಯಾಧಿಕಾರಿಗಳನ್ನು ನೇಮಕ ಮಾಡುತ್ತಿದ್ದರು. ಈ ಪ್ರಾಂತ್ಯಗಳನ್ನು ಅಥವಾ ವಿಭಾಗಗಳನ್ನು ಸಾಮಾನ್ಯವಾಗಿ ನಾಡು, ವಿಷಯ ಅಥವಾ ಕಂಪಣ ಎಂದು ಕರೆಯುತ್ತಿದ್ದರು. ಆದರೆ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ರಾಷ್ಟ್ರದ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ.

ಪ್ರಾಂತ್ಯಗಳ ಆಡಳಿತವನ್ನು ಮಹಾಮಾಂಡಳೇಶ್ವರರು ನಿರ್ವಹಿಸುತ್ತಿದ್ದರು. ಮಹಾಮಾಂಡಳೇಶ್ವರರು ರಾಜನಿಗೆ ಸಲಹೆಗಾರರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ಮಹಾ ಮಾಂಡಳೇಶ್ವರರ ಸಹಾಯಕ್ಕೆ ಸುಂಕವೆರ್ಗಡೆ, ಕರ್ಣ, ಶ್ರೀಕರ್ಣ, ನಾಡಪ್ರಭು, ನಾಡಸೇನಭೋವ, ನಾಡಗೌಂಡ, ಸರ್ವಾಧ್ಯಕ್ಷ ಮೊದಲಾದ ಅಧಿಕಾರಿಗಳಿದ್ದರು.

ಗ್ರಾಮಗಳಲ್ಲಿ ಗಾವುಂಡನು ಗ್ರಾಮಾಳಿತಯನ್ನು ನಿರ್ವಹಿಸುತ್ತಿದ್ದನು. ಹಳ್ಳಿಯ ರಕ್ಷಣೆಯ ಕೆಲಸ ಅವನದಾಗಿತ್ತು. ಅವನು ನ್ಯಾಯಾಧೀಶನಾಗಿಯೂ ಕೆಲಸ ನಿರ್ವಹಿಸಬೇಕಾಗಿತ್ತು. ಕಂದಾಯವನ್ನು ಕೂಲಿ ವಸೂಲಿ ಮಾಡಬೇಕಾಗಿತ್ತು. ಅವನ ಸಹಾಯಕ್ಕೆ ಸೇನಬೋವ (ಕರಣಿಕ) ನಿದ್ದನು. ಲೆಕ್ಕ ಮತ್ತು ದಾಖಲೆ ಪತ್ರಗಳನ್ನಿಡುವ ಕೆಲಸ ಅವನದಾಗಿತ್ತು.

ಅನೇಕ ಪಟ್ಟಣಗಳ ಆಡಳಿತದ ಬಗ್ಗೆ ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಇವುಗಳನ್ನು ಉರ್ ಅಥವಾ ನಗರ ಎಂದು ವಿವರಿಸಲಾಗಿದೆ. ನಗರ ಸಾಮಾನ್ಯವಾಗಿ ಒಂದು ವ್ಯಾಪಾರ ಕೇಂದ್ರವಾಗಿರುತ್ತಿತ್ತು. ನಗರಗಳ ಆಡಳಿತವನ್ನು ವ್ಯಾಪಾರ ಶ್ರೇಣಿಗಳಾಗಿದ್ದ ನಖರಗಳು ನಿರ್ವಹಿಸುತ್ತಿದ್ದವು. ನಗರಾಧ್ಯಕ್ಷನು ನಗರದ ಆಡಳಿತದ ಮುಖ್ಯಸ್ಥನಾಗಿದ್ದನು. ನಗರಶ್ರೇಷ್ಠಿ ನಖರದ ಅಧ್ಯಕ್ಷನಾಗಿರುತ್ತಿದ್ದನು.

ರಾಜ್ಯದ ಹಲವು ಭಾಗಗಳಲ್ಲಿ ಸಾಮಂತರು ಹಲವು ಪ್ರದೇಶಗಳ ಮೇಲೆ ಆಡಳಿತ ನಿರ್ವಹಿಸುತ್ತಿದ್ದರು. ಅವರಿಗೆ ಹೆಚ್ಚು ಸ್ವಾತಂತ್ರ್ಯ ನೀಡಲಾಗಿತ್ತು. ಆದರೆ ಅವರು ರಾಜನಿಗೆ ಪ್ರತಿ ವರ್ಷವು ನಿಗಧಿಯಾಗಿದ್ದಂತೆ ಕಪ್ಪ ಕಾಣಿಕೆಯನ್ನು ಸಲ್ಲಿಸಬೇಕಾಗಿತ್ತು. ಯುದ್ಧದ ಸಮಯದಲ್ಲಿ ಅವರು ಸೈನ್ಯದ ತುಕಡಿಗಳನ್ನು ರಾಜನಿಗೆ ಒದಗಿಸಬೇಕಾಗಿತ್ತು.

## 17.12 ಸಮಾಜ

ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ನಾಲ್ಕು ಜಾತಿಗಳು ಮುಂದುವರಿದವು. ಸಮಾಜದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನವನ್ನು ಹೊಂದಿದ್ದರು. ಅಗ್ರಹಾರಗಳಲ್ಲಿ ನೆಲೆಸಿದ್ದ ಅವರು ವೇದ, ದರ್ಶನಶಾಸ್ತ್ರ, ವಿಜ್ಞಾನ ಮತ್ತು ಸಾಹಿತ್ಯದಲ್ಲಿ ಪಾಂಡಿತ್ಯ ಹೊಂದಿದ್ದವರಾಗಿದ್ದರು. ಸಮಾಜದಲ್ಲಿ ಅವರು ಹೊಂದಿದ್ದ ಪಾಂಡಿತ್ಯದಿಂದಾಗಿ ಅಪಾರ ಗೌರವ ಹೊಂದಿದ್ದರು.

ಸಮಾಜದಲ್ಲಿ ಜಾತಿ ಪದ್ಧತಿಯಲ್ಲಿದ್ದ ನ್ಯೂನತೆಗಳ ಬಗ್ಗೆ ಅರಿವು ಬೆಳೆಯಲು ಪ್ರಾರಂಭವಾಯಿತು. ರನ್ನ ಮತ್ತು ಪೊನ್ನನ ಬರವಣಿಗೆಗಳಿಂದ ಸಾಮಾಜಿಕ ಘರ್ಷಣೆಯ ಕುರುಹುಗಳ ಬಗ್ಗೆ ನಮಗೆ ಮಾಹಿತಿ ದೊರಕುತ್ತದೆ. ಸಮಾಜದಲ್ಲಿ ಅನೇಕ ಅನಾನುಕೂಲತೆಗಳಿಂದ ತೊಂದರೆಗೊಳಗಾಗಿದ್ದ ಜನರಿಂದ ಅತೃಪ್ತಿಯ ಹೊಗೆಯಾಡಲು ಪ್ರಾರಂಭಿಸಿತು. ಇಂತಹ ಜನರಿಗೆ ಒಬ್ಬ ಧಾರ್ಮಿಕ ನಾಯಕನ ಅವಶ್ಯಕತೆ ಇತ್ತು. ಇಂತಹ ನಾಯಕನನ್ನು ಬಸವಣ್ಣನಲ್ಲಿ ಕಂಡುಕೊಂಡರು. ಬಸವಣ್ಣನವರು ಧಾರ್ಮಿಕ ಕ್ರಾಂತಿಯನ್ನು ಪ್ರಾರಂಭಿಸಿ ಸಮಾಜದ ನ್ಯೂನತೆಗಳನ್ನು ಕಿತ್ತೆಸೆದುಹಾಕಲು ಹೋರಾಟ ನಡೆಸಿದರು.

ಬ್ರಾಹ್ಮಣರನ್ನು ಹೊರತುಪಡಿಸಿ ಇನ್ನುಳಿದ ಜಾತಿಗಳು ವೃತ್ತಿಗಳ ಆಧಾರದ ಮೇಲೆ ನಿಂತಿದ್ದವು. ಶೆಟ್ಟಿಗಳು ಮತ್ತು ಬಣಜಿಗರು ವ್ಯಾಪಾರದಲ್ಲಿ ನಿರಂತರವಾಗಿದ್ದರು. ತೆಲ್ಲಿಗರು ಎಣ್ಣೆ ಉತ್ಪಾದನೆಯಲ್ಲಿ, ಕುಂಬಾರರು ಮಡಕೆಗಳನ್ನು ತಯಾರಿಸುವುದರಲ್ಲಿ, ಬಡಗಿಯು ಮರಕೆಲಸದಲ್ಲಿ ನಿಪುಣರಾಗಿದ್ದರು. ಇದೇ ರೀತಿ ಇನ್ನುಳಿದ ಕಸುಬುದಾರರು ಕೂಡ ತಮ್ಮ ತಮ್ಮ ವೃತ್ತಿಗೊಳಲ್ಲಿ ತೊಡಗಿದ್ದರು. ಪ್ರತಿಯೊಂದು ವೃತ್ತಿಯ ಜನಾಂಗ ತಮ್ಮದೇ ಆದ ಶ್ರೇಣಿಯನ್ನು ಹೊಂದಿದ್ದರು. ವಂಶಪಾರಂಪರ್ಯವಾಗಿ ಈ ಕಸುಬುಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರತಿಯೊಂದು ವೃತ್ತಿದಾರರು ತಮ್ಮದೇ ಒಂದು ಜಾತಿ ಎಂದು ಗುರುತಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ತಮ್ಮ ವೃತ್ತಿಯನ್ನು ಬದಲಾಯಿಸುತ್ತಿರಲಿಲ್ಲ.

ಶೂದ್ರರ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ಕಂಡುಬರುವುದು ಅಪರೂಪ. ಒಂದೇ ಒಂದು ಶಾಸನದಲ್ಲಿ 'ಕೀಳ ಜಾತಿಯ ಮುಖ್ಯರು' ಎಂದು ಉಲ್ಲೇಖಿಸಲ್ಪಟ್ಟಿರುವುದನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿದ್ದವರನ್ನು ಮತ್ತು ವ್ಯವಸಾಯದಲ್ಲಿ ತೊಡಗಿದ್ದವರನ್ನು ಚತುರ್ಥ ವಂಶಕ್ಕೆ ಸೇರಿದ್ದವರಾಗಿದ್ದರು.

### *17.12.1 ಸ್ತ್ರೀಯರ ಸ್ಥಾನಮಾನ*

ಈ ಕಾಲದ ಕೆಲವು ಶಾಸನಗಳು ಸ್ತ್ರೀಯರು ಆಡಳಿತದಲ್ಲಿ ಭಾಗವಹಿಸಿದುದರ ಬಗ್ಗೆ ಮಾಹಿತಿ ನೀಡುತ್ತವೆ. ಮುಖ್ಯವಾದ ಉದಾಹರಣೆ ಎಂದರೆ ಅಕ್ಕದೇವಿ. ಇನ್ನು ಕೆಲವು ಸ್ತ್ರೀಯರು ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದುದರ ಬಗ್ಗೆ ಹಲವು ಮಾಹಿತಿಗಳು ದೊರಕುತ್ತವೆ.

ಆಂಧ್ರಪ್ರದೇಶದ ಕೊರಪೋಲವಿನಲ್ಲಿ ದೊರಕಿರುವ ಕ್ರಿ.ಶ. 973 ರ ಒಂದು ಶಾಸನ ಅಹವಮಲ್ಲ ಮತ್ತು ಅವನ ರಾಣಿ ಲಕ್ಷ್ಮಿ ಕೊರಪಾಲದ ಮೇಲೆ ಆಡಳಿತ ನಡೆಸುತ್ತಿದ್ದುದರ ಬಗ್ಗೆ ಉಲ್ಲೇಖಿಸುತ್ತದೆ. ಅವ್ವಾನವರ ಪ್ರದೇಶದ ಮೇಲೆ ಆಳ್ವಿಕೆ ನಡೆಸುತ್ತಿದ್ದ ರೇವರಸನ ಮಡದಿ ವುಲಿಯಬ್ಬರಸಿ ಮಹಬಲೇಶ್ವರ ದೇವಾಸ್ಥಾನವನ್ನು ಕಟ್ಟಿಸಿ ದಾನ ನೀಡಿದುದರ ಬಗ್ಗೆ ತಿಳಿದು ಬರುತ್ತದೆ. ಇಂತಹ ಇನ್ನೂ ಅನೇಕ ಉದಾಹರಣೆಗಳು ದೊರಕುತ್ತವೆ.

### 17.12.2 ವಿದ್ಯಾಭ್ಯಾಸ

ಚಾಳುಕ್ಯ ರಾಜ್ಯದಲ್ಲಿ ಬ್ರಹ್ಮಪುರಿ, ಅಗ್ರಹಾರ, ಘಟಿಕಸ್ಥಾನ ಮತ್ತು ಮಠ ಪ್ರಮುಖ ವಿದ್ಯಾಕೇಂದ್ರಗಳಾಗಿದ್ದವು. ಬ್ರಹ್ಮಪುರಿ ಪಟ್ಟಣದಲ್ಲಿ ಬ್ರಾಹ್ಮಣರು ನಲೆಸಿದ್ದ ಒಂದು ಪ್ರತ್ಯೇಕ ನೆಲೆ. ಅಗ್ರಹಾರ ಕೇವಲ ಬ್ರಾಹ್ಮಣರೇ ನೆಲೆಸಿದ್ದ ಪ್ರತ್ಯೇಕ ಪಟ್ಟಣ. ಅಗ್ರಹಾರಗಳನ್ನು ನೋಡಿಕೊಳ್ಳುತ್ತಿದ್ದವರು ಮಹಾಜನರು. ಘಟಿಕಾಸ್ಥಾನಗಳ ಸಂಖ್ಯೆ ತುಂಬಾ ಕಡಿಮೆ ಇತ್ತು. ಮಠಗಳನ್ನು ಸಾಮಾನ್ಯವಾಗಿ ದೇವಸ್ಥಾನಗಳ ಹಿಡಿತಕ್ಕೊಳಪಡಿಸಲಾಗಿತ್ತು. ದೇವಸ್ಥಾನಗಳಿಗೆ ಬರತಕ್ಕ ಆದಾಯದಲ್ಲಿ ಒಂದು ಭಾಗವನ್ನು ಈ ಮಠಗಳಿಗೋಸ್ಕರ ವ್ಯಯ ಮಾಡಬೇಕಾಗಿತ್ತು. ದೇವಸ್ಥಾನದ ಆಚಾರ್ಯನು ಈ ಮಠಗಳ ನಿರ್ವಹಣೆಯ ಜವಾಬ್ದಾರಿ ಹೊಂದಿದ್ದನು. ಸಾರ್ವಜನಿಕರು ದೇವಸ್ಥಾನಗಳಿಗೆ ನೀಡತಕ್ಕ ದಾನ ದತ್ತಿಗಳನ್ನು ಸ್ವೀಕರಿಸಿ ಅವುಗಳ ನಿರ್ವಹಣೆಯ ಕೆಲಸ ಹೊಂದಿದ್ದನು.

ವೇದಗಳು, ವೇದಾಂಗಗಳು, ವ್ಯಾಕರಣ, ಮೀಮಾಂಸೆ, ನಾಟಕ, ರಾಜ್ಯನೀತಿ, ನಾಟ್ಯ, ಹದಿನೆಂಟು ಪುರಾಣಗಳು, ಸಂಹಿತೆಗಳು ಸ್ಮೃತಿಗಳು ಆರು ರೀತಿಯ ದರ್ಶನಶಾಸ್ತ್ರ, ಇನ್ನೂ ಅನೇಕ ವಿಷಯಗಳನ್ನು ಈ ವಿದ್ಯಾ ಕೇಂದ್ರಗಳಲ್ಲಿ ಬೋಧಿಸುತ್ತಿದ್ದರು.

ತಾಳಗುಂದ, ಬಳ್ಳಿಗಾವೆ, ಲಕ್ಕುಂಡಿ, ಸಾಲೊತಗಿ, ನಾಗಾಯಿ ಮತ್ತು ಇನ್ನೂ ಅನೇಕ ವಿದ್ಯಾ ಕೇಂದ್ರಗಳು ಈ ಕಾಲದಲ್ಲಿದ್ದವು.

### 17.12.3 ಸಾಹಿತ್ಯ

ಚಾಳುಕ್ಯರ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಸಾಹಿತ್ಯದಲ್ಲಿ ಅದ್ಭುತ ಬೆಳವಣಿಗೆ ಉಂಟಾಯಿತು. ಜೈನ ವಿದ್ವಾಂಸರುಗಳು ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಪ್ರಾಕೃತದಲ್ಲಿ ಕೇವಲ ಕೆಲವು ಗ್ರಂಥಗಳು ಮಾತ್ರ ರಚಿಸಲ್ಪಟ್ಟವು. ಏಕೆಂದರೆ ಬಹುತೇಕ ಜೈನ ವಿದ್ವಾಂಸರುಗಳು ಸಂಸ್ಕೃತ ಅಥವಾ ಕನ್ನಡ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದರು. ಮಾಣಿಕ್ಯ ಸೂರಿಯು **ಯಶೋಧರ ಚರಿತ** ಗ್ರಂಥವನ್ನು ಹೇಮಚಂದ್ರ **ತ್ರಿಷಷ್ಠಿ ಸಲಾಕ ಪುರುಷ ಚರಿತ** ಗ್ರಂಥವನ್ನು ರಚಿಸಿರುವರು. ಸಂಯುಕ್ತ ವಕೌಮುದಿ ಗ್ರಂಥವು ಕೂಡ ಈ ಕಾಲದಲ್ಲಿ ರಚಿತವಾಯಿತು. ಆದರೆ ಇದರ ಕರ್ತೃ ಯಾರು ಎಂದು ತಿಳಿದು ಬರುವುದಿಲ್ಲ. ಆದರೆ ಈ ಗ್ರಂಥದಲ್ಲಿ ಬಿಲ್ಹಣನ ಹೆಸರು ಉಲ್ಲೇಖಿಸಲ್ಪಟ್ಟಿರುವುದು.

ಕಾಶ್ಮೀರದಿಂದ ಆಗಮಿಸಿದ ಬಿಲ್ಹಣನು ಮತ್ತೊಬ್ಬ ಪ್ರಸಿದ್ಧ ಸಂಸ್ಕೃತ ವಿದ್ವಾಂಸ. ಈತನು ಆರನೆಯ ವಿಕ್ರಮಾದಿತ್ಯನ ಆಸ್ಥಾನ ಕವಿ. ವಿಕ್ರಮಾದಿತ್ಯನು ಈತನಿಗೆ ವಿದ್ಯಾಪತಿ ಎಂಬ ಬಿರುದನ್ನು ನೀಡಿ ಗೌರವಿಸಿದನು. **ವಿಕ್ರಮಾಂಕದೇವ ಚರಿತ** ಒಂದು ಐತಿಹಾಸಿಕ ಕಾವ್ಯವಾಯಿತು. ಈ ಕಾವ್ಯದಲ್ಲಿ ವಿಕ್ರಮಾದಿತ್ಯನ ಸಾಧನೆಗಳನ್ನು ಕುರಿತು ವಿವರಣೆ ನೀಡುತ್ತದೆ. ಬಿಲ್ಹಣನೆ ಚೌರಪಂಚ್‌ಸಿಕ್ ಎಂಬ ಗ್ರಂಥವನ್ನು ರಚಿಸಿದ್ದಾನೆ. ಬಿಲ್ಹಣನಿಂದ ಪ್ರೇರೇಪಿಸಲ್ಪಟ್ಟ ಮೂರನೆಯ ಸೋಮೇಶ್ವರನು **ವಿಕ್ರಮಾಂಕಾಭ್ಯೂದಯಂ** ಎಂಬ ಗ್ರಂಥವನ್ನು ರಚಿಸಿದ್ದಾನೆ. ಮೂರನೆಯ ಸೋಮೇಶ್ವರನು **ಮಾನಸೊಲ್ಲಾಸ ಅಥವಾ ಅಭಿಲಾಷಿತಾರ್ಥ ಚಿಂತಾಮಣಿ** ಎಂಬ ವಿಶ್ವಕೋಶವನ್ನು ರಚಿಸಿದ್ದಾನೆ. ಈ ಕಾಲದ ಮತ್ತೊಬ್ಬ ವಿದ್ವಾಂಸ ವಿಜ್ಞಾನೇಶ್ವರ. ಅವನು **ಮಿತಾಕ್ಷರ** ವನ್ನು ರಚಿಸಿದ್ದಾನೆ. ಈ ಗ್ರಂಥವು ಯಾಜ್ಞವಲ್ಕ್ಯ ಸ್ಮೃತಿಯ ಭಾಷ್ಯವಾಗಿದೆ.

ಕನ್ನಡ ಭಾಷೆಗಳಲ್ಲೂ ಅನೇಕ ಗ್ರಂಥಗಳು ರಚಿಸಲ್ಪಟ್ಟವು. ಕನ್ನಡ ಸಾಹಿತ್ಯದ ಮೂವರು ದಿಗ್ಗಜರಾದ ಪಂಪ, ಪೊನ್ನ ಮತ್ತು ರನ್ನ ಹತ್ತನೆಯ ಶತಮಾನದಲ್ಲಿ ಬದುಕಿದ್ದರು. ಈ ಮೂವರಲ್ಲಿ ರನ್ನನು ಸತ್ಯಾಶ್ರಯನ ಆಸ್ಥಾನ ಕವಿಯಾಗಿದ್ದನು. ಇನ್ನುಳಿದವರು ಅವನಿಗಿಂತ ಕೆಲವು ದಶಕಗಳ ಮುಂಚೆ ಇದ್ದವರು. ರನ್ನನು **ಅಜಿತಪುರಾಣ, ಸಾಹಸ ಭೀಮ ವಿಜಯ** ಅತ್ಯಂತ ಪ್ರಸಿದ್ಧವಾದ ಗದಾಯುದ್ಧ ವನ್ನು ರಚಿಸಿರುವನು. ಈತನು ಇನ್ನೆರಡು ಗ್ರಂಥಗಳಾದ **ಚಕ್ರೇಶ್ವರ ಚರಿತ** ಮತ್ತು **ಪರಶುರಾಮ ಚರಿತ** ಗ್ರಂಥಗಳನ್ನು ರಚಿಸಿರುವನು ಎಂಬುದಾಗಿ ಅಭಿಪ್ರಾಯ ಪಡಲಾಗಿದೆ. ಒಂದನೆಯ ನಾಗವರ್ಮನು ರನ್ನನ ಸಮಕಾಲೀನ. ಈತನು **ಚಂದೋಬುಧಿ** ಮತ್ತು **ಕರ್ನಾಟಕ ಕಾದಂಬರಿ** ಎಂಬ ಗ್ರಂಥಗಳನ್ನು ರಚಿಸಿರುವನು. ಕ್ರಿ.ಶ. 1025 ರಲ್ಲಿ ಎರಡನೆಯ ಚಾವುಂಡರಾಯನು ಲೋಕೋಪಕಾರಿ ಎಂಬ ಗ್ರಂಥವನ್ನು ರಚಿಸಿರುವನು. ಈತನ ಸಮಕಾಲೀನ ಚಂದ್ರರಾಜ ಕಾಮಸೂತ್ರಕ್ಕೆ ಸಂಬಂಧಿಸಿದಂತೆ **ಛಂದೋರ್ಣವ** ಎಂಬ ಗ್ರಂಥವನ್ನು ರಚಿಸಿದ್ದಾನೆ. ದುರ್ಗಸಿಂಹನು ಕ್ರಿ.ಶ. 1031 ರಲ್ಲಿ ಪಂಚತಂತ್ರವನ್ನು ರಚಿಸಿದ್ದಾನೆ. ಒಂದನೆಯ ಸೋಮೇಶ್ವರನಿಂದ ಪ್ರೋತ್ಸಾಹಿಸಲ್ಪಟ್ಟ ಶ್ರೀಧರಾಚಾರ್ಯ **ಜಾತಕ ತಿಲಕ** ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದು ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥ. ಬನವಾಸಿಯಲ್ಲಿದ್ದ ಶಾಂತಿನಾಥ ಕ್ರಿ.ಶ. 1060 ರಲ್ಲಿ **ಸುಕುಮಾರ ಚರಿತೆ**ಯನ್ನು ರಚಿಸಿರುವನು. ಸುಕುಮಾರ ಒಬ್ಬ ವ್ಯಕ್ತಿಯಲ್ಲ. ಇದು ಆತ್ಮದ ಕಥೆಯಾಗಿದೆ. ಜನನ-ಮರಣಗಳ ಚಕ್ರದಲ್ಲಿ ಆತ್ಮದ ಬಗ್ಗೆ ಕುರಿತು ಬರೆದ ಗ್ರಂಥವಾಗಿದೆ.

ಈ ಕಾಲದ ಇನ್ನುಳಿದ ಕವಿಗಳೆಂದರೆ ರನ್ನಮಯ್ಯ, ಮಾನಸಿಜ ಚಂದ್ರಭಟ್ಟ, ಗಜಂಕುಶ, ಸಂಬವರ್ಮ, ಹರಿಸಾಲ ಹಂಸರಾಜ ಮತ್ತು ಮೊದಲಾದವರು.

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಉದಯ ಈ ಕಾಲದ ಮುಖ್ಯ ಅಂಶ. ವೀರಶೈವ ಸಂತರು ಅನೇಕ ವಚನಗಳನ್ನು ರಚಿಸಿದನು. ಅದರಲ್ಲೂ ಬಸವಣ್ಣನವರ ಕೊಡುಗೆ ವಚನ ಸಾಹಿತ್ಯಕ್ಕೆ ಅಮೋಘ. ಈ ವಚನಗಳು ಪದ್ಯಗಳಾಗಿದ್ದರೂ ಗದ್ಯರೂಪವನ್ನು ಪಡೆದುಕೊಂಡಿವೆ. ಇಂತಹ ವಚನ ಸಾಹಿತ್ಯದ ಉದಯವನ್ನು 12 ನೇ ಶತಮಾನದ ಪ್ರಾರಂಭಕ್ಕೆ ಗುರುತಿಸಬಹುದು. ಜೇಡರ ದಾಸಿಮಯ್ಯನು ಪ್ರಾರಂಭಕ್ಕೆ ಸಂಬಂಧಿಸಿದಂತೆ ಪ್ರಮುಖ ವಚನಕಾರ. ದೋಹರ ಕಕ್ಕಯ್ಯ, ಮಾದರ ಚನ್ನಯ್ಯ, ಕೆಂಬಾವಿ ಭೋಗಣ್ಣ ಮತ್ತು ಕೊಂಡಗಲಿ ಕೇಸಿರಾಜ ಇತರ ಪ್ರಮುಖ ವಚನಕಾರರು. ಬಸವಣ್ಣನವರ ಆಗಮನದಿಂದ ವಚನ ಸಾಹಿತ್ಯ ವಿಪುಲವಾಗಿ ಬೆಳೆಯಿತು. ಅಕ್ಕಮಹಾದೇವಿ ಮತ್ತು ಇನ್ನುಳಿದ ಸಮಕಾಲೀನ ವೀರಶೈವ ಗುರುಗಳ ಪ್ರಯತ್ನದಿಂದಾಗಿ ಹನ್ನೆರಡನೆ ಮತ್ತು ಹದಿಮೂರನ ಶತಮಾನಗಳಲ್ಲಿ ವಚನ ಸಾಹಿತ್ಯ ಬೆಳವಣಿಗೆ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು.

ವಚನಕಾರರ ಮುಖ್ಯ ಉದ್ದೇಶ ದಾರ್ಶನಿಕ ಭಾವನೆಗಳನ್ನು ಸರಳ ಭಾಷೆಯಲ್ಲಿ ಜನ ಸಾಮಾನ್ಯರಿಗೆ ಬೋಧಿಸುವುದಾಗಿತ್ತು. ವಚನಕಾರರು ಧಾರ್ಮಿಕ ಮತ್ತು ಸಾಮಾಜಿಕ ನ್ಯೂನತೆಗಳನ್ನು ತೊಡೆದು ಹಾಕುವುದಾಗಿತ್ತು. ಅರ್ಥವಿಲ್ಲದ ಆಚರಣೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ಜಾತಿಯತೆ ವಿರುದ್ಧ ಹೋರಾಟ ನಡೆಸಿ ಎಲ್ಲರೂ ಸಮಾನರು ಎಂದು ಸಾರಿದರು. ಏಕದೇವತಾ ಆರಾಧನೆಯ ಬಗ್ಗೆ ಒತ್ತಿ ಹೇಳಿದರು. ಶಿವನೊಬ್ಬನೆ ಎಲ್ಲಿರಿಗೂ ದೈವ ಎಂದು ಸಾರಿದರು. ಈ ರೀತಿಯಾಗಿ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಲು ಈ ವಚನಗಳು ಸಹಕಾರಿಯಾದವು.

## 17.13 ಧಾರ್ಮಿಕ ಪರಿಸ್ಥಿತಿ

ಚಾಲುಕ್ಯ ಅರಸರು ಶೈವ ಧರ್ಮದ ಅನುಯಾಯಿಗಳಾಗಿದ್ದರು. ಆದರೆ ಇನ್ನುಳಿದ ಧರ್ಮಗಳಿಗೂ ತಮ್ಮ ಪ್ರೋತ್ಸಾಹ ನೀಡಿದರು. ಅವರು ಶೈವ ಧರ್ಮದ ಜೊತೆಗೆ ಜೈನ ಧರ್ಮ ಮತ್ತು ವೈಷ್ಣವ ಧರ್ಮಕ್ಕೂ ದತ್ತಿಗಳನ್ನು ನೀಡಿದರು. ಚಾಲುಕ್ಯ ರಾಜ್ಯದಲ್ಲಿ ವಿವಿಧ ಧರ್ಮಗಳ ಅನುಯಾಯಿಗಳು ಅನ್ಯೋನತೆಯಿಂದ ಜೀವನ ನಡೆಸುತ್ತಿದ್ದುದನ್ನು ಕಾಣಬಹುದಾಗಿದೆ. ಚಾಲುಕ್ಯ ಅರಸರು ಧರ್ಮ ಸಹಿಷ್ಣುತೆಯ ಬಗ್ಗೆ ಒಲವು ತೋರಿ ತಮ್ಮ ಪ್ರಜೆಗಳನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು.

### *17.13.1 ಬೌದ್ಧ ಧರ್ಮ*

ಬೌದ್ಧ ಧರ್ಮ ದಖ್ಖಿನಿನಲ್ಲಿ ಈ ವೇಳೆಗೆ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತ್ತು. ಆದಾಗ್ಯೂ ಹಲವು ಸ್ಥಳಗಳಲ್ಲಿ ಬೌದ್ಧ ಧರ್ಮದ ಅನುಯಾಯಿಗಳು ನೆಲೆಸಿದ್ದರು. ಬಳ್ಳಿಗಾವೆ ಶೈವ ಮತ್ತು ಜೈನಧರ್ಮಗಳ ಪ್ರಮುಖ ಕೇಂದ್ರವೆನಿಸಿಕೊಂಡಿದ್ದರೂ, ಬೌದ್ಧ ಧರ್ಮವು ಅಷ್ಟೇ ಪ್ರಭಾವವನ್ನು ಬೀರಿತ್ತು. ಬಳ್ಳಿಗಾವೆಯಲ್ಲಿ ದಂಡನಾಯಕ ರೂಪಭಟಯ್ಯ ಒಂದು ಬೌದ್ಧ ವಿಹಾರವನ್ನು ಮತ್ತು ತಾರಭಗವತಿ ದೇವಸ್ಥಾನವನ್ನು ನಿರ್ಮಿಸಿದನು. ಅವನು ಬುದ್ಧ ಮತ್ತು ತಾರಭಗವತಿಯ ಪೂಜೆಗೆ ದತ್ತಿಗಳನ್ನು ನೀಡಿದುದಲ್ಲದೆ ಲೋಕೇಶ್ವರ ಮತ್ತು ಕೇಶವ ದೇವಸ್ಥಾನಗಳಿಗೂ ದತ್ತಿಗಳನ್ನು ನೀಡಿದನು. ದಾರವಾಡ ಜಿಲ್ಲೆಯ ದಂಬಾಲ್ ಮತ್ತು ಕೋಳಿವಾಡಗಳು ಇತರ ಪ್ರಮುಖ ಬೌದ್ಧ ಕೇಂದ್ರಗಳಾಗಿದ್ದವು.

### *17.13.2 ಜೈನಧರ್ಮ*

ಚಾಲುಕ್ಯ ದೊರೆಗಳು ಜೈನಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರು. ವೀರಶೈವ ಧರ್ಮದ ಉದಯದವರೆಗೂ ಜೈನಧರ್ಮ ಹೆಚ್ಚು ಪ್ರಬಲವಾಗಿತ್ತು. ಚಾಲುಕ್ಯ ರಾಜ್ಯದ ಸಂಸ್ಥಾಪಕನಾದ ಎರಡನೆಯ ತೈಲಪನು ಪ್ರಸಿದ್ಧ ಜೈನಕವಿ ರನ್ನನಿಗೆ ಆಶ್ರಯ ನೀಡಿದನು. ಸತ್ಯಾಶ್ರಯನು ಜೈನ ಗುರು ವಿಮಲ ಚಂದ್ರಪಂಡಿತ ದೇವನಿಂದ ಆಧ್ಯಾತ್ಮಿಕ ಮಾರ್ಗ ದರ್ಶನವನ್ನು ಪಡೆದಿದ್ದನು ಎಂಬುದಾಗಿ ತಿಳಿದು ಬರುತ್ತದೆ. ಎರಡನೆಯ ಜಯಸಿಂಹ, ಒಂದನೆಯ ಸೋಮೇಶ್ವರ, ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಅವರು ಜೈನಗುರುಗಳಿಗೆ, ಜೈನಬಸದಿಗಳಿಗೆ ಭೂಮಿಯನ್ನು ದಾನವಾಗಿ ನೀಡಿದುದರ ಬಗ್ಗೆ ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ದಾನ ಚಿಂತಾಮಣಿ ಅತ್ತಿಮಬ್ಬೆಯು ಸುಮಾರು 1500 ಬಸದಿಗಳನ್ನು ನಿರ್ಮಿಸಿದಳೆಂದು

ಸತ್ಯಾಶ್ರಯನ ಲಕ್ಕುಂಡಿ ಶಾಸನ ವಿವರಿಸುತ್ತದೆ. ಲಕ್ಕುಂಡಿಯ ಬ್ರಾಹ್ಮಣ ಅಗ್ರಹಾರದಲ್ಲಿರುವ ಬಸದಿಯನ್ನು ಬ್ರಹ್ಮ ಜಿನಾಲಯ ಎಂದು ವಿವರಿಸಲಾಗಿದೆ. ಎರಡನೆಯ ಸೋಮೇಶ್ವರನ ಮಂತ್ರಿಯಾಗಿದ್ದ ಸೋಮನಾಥನು ಜೈನಧರ್ಮದ ಅನುಯಾಯಿಯಾಗಿದ್ದನು. ಬನವಾಸಿಯ ಮಾಂಡಳಿಕನಾಗಿದ್ದ ಲಕ್ಷ್ಮ ಎಂಬುವವನು ಶಾಂತಿನಾಥ ಬಸದಿಯನ್ನು ನಿರ್ಮಿಸಿದನು ಎಂಬುದಾಗಿ ಬಳ್ಳಿಗಾವೆಯ ಶಾಸನಗಳು ತಿಳಿಸುತ್ತವೆ. ಅದೇ ರೀತಿ ಚಾಳುಕ್ಯ ರಾಜ್ಯದ ವಿವಿಧ ಭಾಗಗಳಲ್ಲಿ ಅನೇಕ ಬಸದಿಗಳನ್ನು ನಿರ್ಮಿಸಿದುದರ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಈ ಕಾಲದಲ್ಲಿ ದಿಗಂಬರ ಪಂಥ ಹೆಚ್ಚು ಜನರನ್ನು ಆಕರ್ಷಿಸಿತು. ಜೈನಧರ್ಮ ಮತ್ತು ಹಿಂದೂ ಧರ್ಮಗಳೆರಡಕ್ಕೂ ಹಲವು ನಂಬಿಕೆಗಳು ಮತ್ತು ಪದ್ಧತಿಗಳು ಒಂದೇ ರೀತಿ ಇದ್ದವು. ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ವೀರಶೈವ ಧರ್ಮದ ಪ್ರಭಾವದಿಂದ ಜೈನಧರ್ಮ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಜೈನಧರ್ಮ ಮತ್ತು ವೀರಶೈವ ಧರ್ಮಕ್ಕೂ ಘರ್ಷಣೆ ಪ್ರಾರಂಭವಾಗಿ ಅಂತಿಮವಾಗಿ ವೀರಶೈವ ಧರ್ಮ ತನ್ನ ಮೇಲುಗೈಯನ್ನು ಪಡೆದುಕೊಂಡಿತು.

### *17.13.3 ಶೈವಧರ್ಮ*

ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಪ್ರಮುಖ ಧರ್ಮವೆಂದರೆ ಶೈವಧರ್ಮವಾಗಿತ್ತು. ಈ ಶೈವಧರ್ಮ ಅನೇಕ ಪಂಥಗಳನ್ನು ಹೊಂದಿತ್ತು. ಶೈವ, ಪಾಶುಪತ ಅಥವಾ ಲಾಕುಲ, ಕಾಳಾಮುಖ ಮತ್ತು ಕಾಪಾಲಿಕ ಎಂಬ ಪಂಥಗಳನ್ನು ಹೊಂದಿತ್ತು. ಇವುಗಳಲ್ಲಿ ಪಾಶುಪತ ಪಂಥ ಸುಮಾರು ಹತ್ತನೆಯ ಶತಮಾನದಿಂದ ಕರ್ನಾಟಕದಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಪಾಶುಪತ ಪಂಥದವರು ಬಳ್ಳಿಗಾವೆ, ಸೂದಿ, ಕುಕ್ಕನೂರು, ಶ್ರೀಶೈಲಂ ಮತ್ತು ಇನ್ನೂ ಅನೇಕ ಸ್ಥಳಗಳಲ್ಲಿ ಕೇಂದ್ರಗಳನ್ನು ಹೊಂದಿದ್ದರು. ಕಾಳಾಮುಖ ಪಾಶುಪತ ಪಂಥದ ಸ್ಥಾಪಕನಾದ ಲಾಕುಲೀಸನ ಬಗ್ಗೆ ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಅವನ ಅನಂತರ ಇನ್ನೂ ಮಾಹಿತಿ ದೊರಕುತ್ತದೆ. ಆದರೆ ಈ ಪಂಥ ತಮ್ಮ ಅನುಯಾಯಿಗಳಿಗೆ ಕಠಿಣ ರೀತಿಯ ತಪ್ಪಸ್ಸಿನ ಮಾರ್ಗದ ಪದ್ಧತಿಗಳ ಬಗ್ಗೆ ಬೋಧಿಸುತ್ತದೆ.

### *17.13.4 ವೈಷ್ಣವಧರ್ಮ*

ಚಾಳುಕ್ಯ ರಾಜ್ಯದಲ್ಲಿ ವೈಷ್ಣವ ಧರ್ಮ ಅಷ್ಟೊಂದು ಪ್ರಸಿದ್ಧಿಯಾಗಿರಲಿಲ್ಲ. ಅನೇಕರು ವಿಷ್ಣುವಿನ ಆರಾಧಕರಾಗಿದ್ದರು. ಆದರೆ ಈ ಪಂಥಕ್ಕೆ ರಾಜಾಶ್ರಯ ದೊರಕಿದುದರ ಬಗ್ಗೆ ಮಾಹಿತಿ ದೊರಕುವುದಿಲ್ಲ. ಆದರೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ವೈಷ್ಣವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ದೊರಕಿತು. ಶ್ರೀರಾಮಾನುಜಚಾರ್ಯರ ಆಗಮನದ ನಂತರ ಹೊಯ್ಸಳ ರಾಜ್ಯದಲ್ಲಿ ಶ್ರೀ ವೈಷ್ಣವ ಧರ್ಮ ಅತ್ಯಂತ ಹೆಚ್ಚು ಪ್ರಸಿದ್ಧಿಗೆ ಬಂತು. ಅನೇಕ ದೇವಸ್ಥಾನಗಳನ್ನು ವಿಷ್ಣುವಿಗೆ ನಿರ್ಮಿಸಲಾಯಿತು.

### *17.13.5 ವೀರಶೈವಧರ್ಮ*

ಶೈವಧರ್ಮ ಮತ್ತು ವೈಷ್ಣವ ಧರ್ಮಗಳಲ್ಲಿದ್ದ ಅನೇಕ ರೀತಿಯ ಸಂಪ್ರದಾಯಗಳು ಮತ್ತು ಅರ್ಥವಿಲ್ಲದ ಆಚರಣೆಗಳಿಂದಾಗಿ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳಲು ಪ್ರಾರಂಭಿಸಿದವು. ದೇವರ ಪೂಜೆ ಎಂದರೆ ಅನೇಕ ಆಚರಣೆಗಳ ವೈಭವೀಕರಣ ಎಂಬ ಭಾವನೆ ಸಮಾಜದಲ್ಲಿ ಬೇರುಬಿಟ್ಟಿತ್ತು. ಆದ್ದರಿಂದ ಶ್ರೀಮಂತ ಮತ್ತು ಬಡವರ ನಡುವೆ ಆಚರಣೆಯಲ್ಲಿ ಒಂದು ದೊಡ್ಡ ಅಂತರವುಂಟಾಯಿತು. ಮಾನವರನ್ನು ಮಾನವರೆಂದು ಕಾಣುವುದರಲ್ಲಿ ತಾರತಮ್ಯವುಂಟಾಯಿತು. ಪುರುಷರು ಮತ್ತು ಸ್ತ್ರೀಯರನ್ನು ಸಮಾನತೆಯಿಂದ ಕಾಣುತ್ತಿರಲಿಲ್ಲ.

ಹನ್ನೆರಡನಯ ಶತಮಾನದ ಪ್ರಾರಂಭದಲ್ಲಿ ಶೈವಧರ್ಮದ ತತ್ವಗಳನ್ನು ಪುನರುಜ್ಜೀವನಗೊಳಿಸಿ ಬಲಪಡಿಸಲು ಪ್ರಯತ್ನ ನಡೆಸಲಾಯಿತು. ಅವರು ಶೈವಧರ್ಮವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳಬೇಕಾದರೆ ಜೈನ ಮತ್ತು ಬೌದ್ಧ ಧರ್ಮಗಳ ಪ್ರಭಾವವೇ ಕಾರಣವೆಂದು ವಾದಿಸಿದರು. ಶೈವ ಧರ್ಮವನ್ನು ಪುನರುಜ್ಜೀವನಗೊಳಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ ಗುರುವೆಂದರೆ ಏಕಾಂತದ ರಾಮಯ್ಯ. ಶೈವಧರ್ಮದ ಅನುಯಾಯಿಗಳಲ್ಲಿ ಹೋರಾಟದ ಪ್ರವೃತ್ತಿ ಬೆಳೆಯುವಂತೆ ಪ್ರೇರೇಪಿಸಿ ಅನ್ಯಧರ್ಮೀಯರನ್ನು ಕೀಳು ಮಟ್ಟದಿಂದ ಕಾಣುವ ಭಾವನೆ ಬೆಳೆಯಲು ಕಾರಣನಾದನು.

ಇಂತಹ ಪರಿಸ್ಥಿತಿಗಳಲ್ಲಿ ಬಸವಣ್ಣನವರು ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಬದಲಾವಣೆಯು ಅತ್ಯವಶ್ಯಕ ಎಂದು ಮನಗಂಡರು. ಅವರ ಹೋರಾಟದಿಂದ ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಒಂದು ಹೊಸ ಯುಗ ಪ್ರಾರಂಭವಾಯಿತು. ಶೈವಧರ್ಮಕ್ಕೆ ಸಂಬಂಧಿಸಿದ ತತ್ವವನ್ನೇ ಬೋಧಿಸಿದನು. ಆದರೆ ಈ ಬೋಧನೆ ಹೆಚ್ಚು ಶೌರ್ಯದಿಂದ ಕೂಡಿತ್ತು. ಆದ್ದರಿಂದ ಅವನ ಶೈವಧರ್ಮಕ್ಕೆ

ವೀರಶೈವ ಧರ್ಮ ಎಂದು ಹೆಸರು ಬಂದಿತು. ಸಾಮಾಜಿಕ ಮತ್ತು ಧಾರ್ಮಿಕ ರಂಗಗಳಲ್ಲಿ ಸಮಾನತೆಯನ್ನು ಎತ್ತಿ ಹಿಡಿದನು. ಅವನು ಬೋಧಿಸಿದುದನ್ನು ಆಚರಣೆಗೆ ತಂದನು. ಅವನ ಬೋಧನೆಗಳು ವಚನಗಳ ಮೂಲಕ ಹೆಚ್ಚು ಜನಪ್ರಿಯವಾದವು. ಅವನ ವಚನಗಳು ಸರಳವಾಗಿದ್ದು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಿತ್ತು. ವಚನಗಳು ಅರ್ಥಗರ್ಭಿತವಾಗಿದ್ದು ಆಲೋಚನೆಗಳಿಂದ ಕೂಡಿದ್ದವು. ಬಸವಣ್ಣನವರು ಎಲ್ಲಾ ಜಾತಿಗಳಿಗೂ ಅಂತ್ಯ ಹಾಡಿ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ನೋಡುವಂತೆ ಬೋಧಿಸಿದರು. ಎಲ್ಲ ಸಾಮಾಜಿಕ ಅಂತಸ್ತುಗಳು ಕೊನೆಗೊಂಡವು. ಶ್ರೇಷ್ಠ-ಕನಿಷ್ಠ, ಸ್ಪೃಶ್ಯ-ಅಸ್ಪೃಶ್ಯ ಭಾವನೆಗಳನ್ನು ತೊಡೆದುಹಾಕಿದನು. ಅಸ್ಪೃಶ್ಯೋದ್ಧಾರ ಕಾರ್ಯಗಳಲ್ಲದೆ ಬಸವಣ್ಣನವರು "ಮುಕ್ತಿಯನ್ನು ಪಡೆಯಬೇಕಾದರೆ ನಂಬಿಕೆ, ಜ್ಞಾನ ಮತ್ತು ಕಾಯಕ ಬಹಳ ಮುಖ್ಯ. ಪ್ರತಿಯೊಬ್ಬನು ತನ್ನ ಜೀವನಾಂಶಕ್ಕೆ ತಾನೆ ದುಡಿಯಬೇಕು. ಕಾಯಕವೇ ಕೈಲಾಸ". ವೀರಶೈವ ಭಕ್ತಿ ಪಂಥವನ್ನು ಪ್ರಚಾರ ಮಾಡಿತು. ಭಕ್ತಿ ಪಂಥ ಮುಂದಿನ ಶತಮಾನಗಳಲ್ಲಿ ಹೆಚ್ಚು ಪ್ರಚಾರಕ್ಕೆ ಬರಲು ವೀರಶೈವ ಧರ್ಮದ ಕಾಣಿಕೆಯು ಇದೆ. ಬಸವಣ್ಣನವರ ವಚನಗಳು ಕನ್ನಡ ಸಾಹಿತ್ಯ ಮತ್ತು ಭಾಷೆಯ ಬೆಳವಣಿಗೆಗೂ ಸಹಕಾರಿಯಾದವು. ವೀರಶೈವಧರ್ಮ ಯಾವುದೇ ರಾಜಾಶ್ರಯವಿಲ್ಲದೆ ಜನರ ಬೆಂಬಲದಿಂದಲೆ ಪ್ರಸಿದ್ಧಿಗೆ ಬಂತು. ಬಸವಣ್ಣನವರಿಂದ ಆದ ವೀರಶೈವ ಮತದ ಪುನಶ್ಚೇತನ ಭಾರತದ, ಅದರಲ್ಲೂ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಮಹಾಘಟ್ಟವಾಗಿದೆ.

## 17.14 ವಾಸ್ತುಶಿಲ್ಪ

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ವಿಪುಲವಾದ ದೇವಸ್ಥಾನಗಳು ನಿರ್ಮಿಸಲ್ಪಟ್ಟವು. ನೂರಾರು ಶೈವದೇವಾಸ್ಥಾನಗಳು ನಿರ್ಮಿಸಲ್ಪಟ್ಟವು. ಚಾಳುಕ್ಯರ ದೇವಸ್ಥಾನಗಳು ಔರಂಗಬಾದ್ ಜಿಲ್ಲೆಯ ಕೊಡ್‌ನಿಂದ ಹಿಡಿದು ತುಮಕೂರಿನ ಅರಳಗುಪ್ಪೆಯವರೆಗೆ ಮತ್ತು ಸೊಲ್ಲಾಪುರದಿಂದ ಆಂದ್ರಪ್ರದೇಶದ ಮೊಹಬೂಬ ಜಿಲ್ಲೆಯ ಪಾನಗಲ್‌ವರೆಗೂ ದೊರಕುತ್ತವೆ. ಕುಕ್ಕನೂರಿನ ಕಲ್ಲೇಶ್ವರ, ಅಬ್ಲೂರಿನ ಬ್ರಹ್ಮೇಶ್ವರ, ಕೂರುವಟ್ಟಿಯ ಮಲ್ಲಿಕಾರ್ಜುನ, ಉನಕಲ್‌ನ ಚಂದ್ರಮೌಳೇಶ್ವರ, ಲಕ್ಕುಂಡಿಯ ಕಾಶಿವಿಶ್ವೇಶ್ವರ, ಗದಗ್‌ನ ಸರಸ್ವತಿ, ಸೋಮೇಶ್ವರ ಮತ್ತು ತ್ರಿಕೊಟೇಶ್ವರ ಇಟ್ಟಗಿಯ ಮಹದೇವ, ಹಾನಗಲ್‌ನ ತಾರಕೇಶ್ವರ ಮತ್ತು ಗಣಪತಿ ಚಾಲುಕ್ಯರ ಪ್ರಮುಖ ದೇವಸ್ಥಾನಗಳಾಗಿವೆ.

### *17.4.1 ಲಕ್ಷಣಗಳು*

ಕಲ್ಯಾಣದ ಚಾಲುಕ್ಯರ ವಾಸ್ತು ಶೈಲಿಯ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ದೇವಾಲಯಗಳ ಭಾಗಗಳ ವಿವರಣೆ ನೀಡಬೇಕು. ಕಲ್ಯಾಣದ ಚಾಲುಕ್ಯರು ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು (Schist) ದೇವಾಲಯಗಳ ನಿರ್ಮಾಣಕ್ಕೆ ಬಳಸಿದ್ದಾರೆ. ಆದರೆ ಕುಕ್ಕನೂರಿನ ಕಲ್ಲೇಶ್ವರ ದೇವಾಲಯವನ್ನು ಕೆಂಪು ಉಸುಗು ಕಲ್ಲಿನಿಂದ ಕಟ್ಟಲಾಗಿದೆ. ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲಿನ ಬಳಕೆಯಿಂದಾಗಿ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಶೈಲಿಯಲ್ಲಿ ತೀವ್ರತರ ಬದಲಾವಣೆಗಳಾದವು.

*ತಲವಿನ್ಯಾಸ*

ಸಾಮಾನ್ಯವಾಗಿ ದೇವಾಲಯಗಳ ತಲವಿನ್ಯಾಸವು ವಾಸ್ತು ಶೈಲಿಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಇವರ ಕಾಲದ ದೇವಾಲಯಗಳಲ್ಲಿ ಭಿನ್ನ ಭಿನ್ನ ತಲ ವಿನ್ಯಾಸಗಳನ್ನು ಕಾಣಬಹುದು. ಕಲ್ಯಾಣದ ಚಾಲುಕ್ಯರ ಹೆಚ್ಚಿನ ದೇವಾಲಯಗಳು ನಿರಂಧಾರ ಪ್ರಕಾರದವುಗಳು. ಕುಕ್ಕನೂರಿನ ಕಲ್ಲೇಶ್ವರ ದೇವಾಲಯದ ಸ್ಥಳ ತಲವಿನ್ಯಾಸದಿಂದ ಹಿಡಿದು ನೀಲಗುಂದದ ಭೀಮೇಶ್ವರ ದೇವಾಲಯದ ಜಟಿಲವಾದ ತಲವಿನ್ಯಾಸದಂತಹ ತಲವಿನ್ಯಾಸಗಳನ್ನು ಹೊಂದಿವೆ. ಕುಕ್ಕನೂರಿನ ಕಲ್ಲೇಶ್ವರ ದೇವಾಲಯ ಕೇವಲ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಲಕ್ಕುಂಡಿಯ ಬ್ರಹ್ಮ ಜಿನಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಅರೆತೆರೆದ ಮುಖಮಂಟಪಗಳಿವೆ. ಇಲ್ಲಿಯೂ ಪ್ರವೇಶವು ಮುಖಮಂಟಪದ ಮೂಲಕವೇ ಇದೆ. ಮುಖಮಂಟಪವು ಸಾಕಷ್ಟು ವಿಶಾಲವಾಗಿದ್ದು ಮೂವತ್ತು ಕಂಬಗಳನ್ನು ಹೊಂದಿದೆ. ಈ ಬ್ರಹ್ಮ ಜಿನಾಲಯದಲ್ಲಿ ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗೃಹವಿದೆ.

ಈ ಕಾಲದಲ್ಲಿ ಅನೇಕ ತ್ರಿಕೂಟ ದೇವಾಲಯಗಳು ಅಸ್ತಿತ್ವಕ್ಕೆ ಬಂದವು. ಮಾಗಳದ ವೇಣುಗೋಪಾಲ ದೇವಾಲಯ ಚಾಲುಕ್ಯರ ಅತ್ಯಂತ ಹಳೆಯ ತ್ರಿಕೂಟಗಳಲ್ಲಿ ಒಂದು. ಇದರಲ್ಲಿ ಮೂರು ಗರ್ಭಗೃಹಗಳು, ಮೂರು ಸುಕನಾಸಿಗಳು ಇವೆ. ಎಲ್ಲ ಸುಕನಾಸಿಗಳಿಗೆ ಹೊಂದಿಕೊಂಡು ಸುರಂಗವಿದೆ. ನವರಂಗದ ಮುಂದುಗಡೆ ಪ್ರವೇಶ ದ್ವಾರವಿದೆ.

ಡಂಬಳದ ದೊಡ್ಡ ಬಸಪ್ಪ ದೇವಾಲಯ ಹೊರಭಾಗದಲ್ಲಿ ನಕ್ಷತ್ರಾಕಾರದ ವಿನ್ಯಾಸವನ್ನು ಹೊಂದಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗಗಳಿದ್ದು ನವರಂಗಕ್ಕೆ ಎರಡು ಪ್ರವೇಶ ದ್ವಾರಗಳಿವೆ. ಇವುಗಳಲ್ಲಿ ಒಂದು ಪೂರ್ವ ದಿಕ್ಕಿಗೆ ಇನ್ನೊಂದು ದಕ್ಷಿಣ ದಿಕ್ಕಿಗೆ ಇವೆ. ತಳಪಾಯ, ಅದಿಷ್ಠಾನ, ಗೋಡೆಗಳು ಮತ್ತು ಶಿಖರ ಇವೆಲ್ಲವೂ ನಕ್ಷತ್ರಾಕಾರದವಾಗಿರುತ್ತವೆ. ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯವು ಸಾಂಧಾರ ಮಾದರಿಯದಾಗಿದ್ದು, ವೈಶಿಷ್ಟ್ಯ ಪೂರ್ಣವಾಗಿದೆ. ಇದರಲ್ಲಿ ನಾಲ್ಕು ಕಡೆಗೆ ಬಾಗಿಲುಳ್ಳ ಗರ್ಭಗೃಹ, ಪ್ರದಕ್ಷಿಣಾಪಥ ಮತ್ತು ನಾಲ್ಕು ದಿಕ್ಕಿಗೆ ನಾಲ್ಕು ಸುಕನಾಸಿಗಳಿವೆ. ಈ ದೇವಾಲಯವನ್ನು ನಾಲ್ಕು ದಿಕ್ಕಿನಿಂದ ಪ್ರವೇಶಿಸಬಹುದು. ಈ ದೇವಾಲಯದ ಗರ್ಭಗೃಹದಲ್ಲಿ ಮೂಲತಃ ಚತುರ್ಮುಖ ಶಿವಲಿಂಗವನ್ನು ಪ್ರತಿಷ್ಠೆ ಮಾಡಲಾಗಿತ್ತು. ಕಾಲಾನುಕ್ರಮದಲ್ಲಿ ಅದು ಭಗ್ನವಾಗಿ ಬೇರೊಂದು ಶಿವಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ.

*ಅದಿಷ್ಠಾನ*

ಅಧಿಷ್ಠಾನದ ಎತ್ತರವು ದೇವಾಲಯದಿಂದ ದೇವಾಲಯಕ್ಕೆ ಬೇರೆಯಾಗಿರುತ್ತದೆ. ಅದು ಸಾಮಾನ್ಯವಾಗಿ ಮೂರರಿಂದ ಐದು ಅಡಿಗಳ ಎತ್ತರವುಳ್ಳದಾಗಿರುತ್ತದೆ. ಕಲ್ಯಾಣದ ಚಾಲುಕ್ಯರ ಅಧಿಷ್ಠಾನದಲ್ಲಿ 'ಉಪಾನ''ಜಾಗತಿ'' ಕಂಪ' 'ಕಂಠ' ಮತ್ತು 'ಪಟ್ಟಿಕೆ'ಗಳು ಹೆಚ್ಚು ಎದ್ದು ಕಾಣುತ್ತವೆ. ಮಾಗಳದ ವೇಣುಗೋಪಾಲ ದೇವಾಲಯದ ಅಧಿಷ್ಠಾನದಲ್ಲಿ ಸಿಂಹ, ಯಕ್ಷ ಮತ್ತು ನರ್ತಕರ ಶಿಲ್ಪಗಳನ್ನು ಕೆತ್ತಲಾಗಿದೆ. ಚೌಡದಾನಪುರದ ಮುಕ್ತೇಶ್ವರ ದೇವಾಲಯದ ಅಧಿಷ್ಠಾನ ಆಕರ್ಷಕವಾಗಿದ್ದು, ಇಲ್ಲಿ 'ಉಪಾನ' ಭಾಗದಲ್ಲಿ ಕಲ್ಪ ಲತಾ ಸುಳಿಗಳ ಸಾಲಿದ್ದರೆ 'ಜಗತಿ' ಭಾಗದಲ್ಲಿ ನವಿಲುಗಳ ಸಾಲಿದೆ. ಈ ಕಾಲದ ದೇವಾಲಯಗಳ ಅಧಿಷ್ಠಾನ, ಭಿತ್ತಿ ಅಥವಾ ಗೋಡೆಗಳಲ್ಲಿ ಸಾಮಾನ್ಯವಾಗಿ ಹಿಂಬಣೆ-ಮುಂಬಣೆಗಳನ್ನು ಅಳವಡಿಸಲಾಗಿರುವುದು ಗಣನೀಯವಾದ ಅಂಶ. ಕೊಳ್ಗಲ್ಲಿನ ಕಾಶಿ ವಿಶ್ವನಾಥ ದೇವಾಲಯ ಸಂಪೂರ್ಣವಾಗಿ ಬಿಳಿಕಲ್ಲಿನ ನಿರ್ಮಾತವಾಗಿದ್ದು, ಇದರಲ್ಲಿಯ ಅಧಿಷ್ಠಾನದಲ್ಲಿ 'ಜಗತಿ' 'ತ್ರಿಪಟ್ಟ' 'ಕುಮುದ' ಮತ್ತು 'ಕಪೋಲ' ಭಾಗಗಳಿವೆ.

*ಗೋಡೆಗಳು*

ಕಲ್ಯಾಣ ಚಾಲುಕ್ಯರ ದೇವಾಲಯಧ್ಧ ಗೋಡೆಗಳಲ್ಲಿ ಎರಡು ವಿಧಗಳನ್ನು ಕಾಣಬಹುದು. ಮೊದಲನೆಯ ವಿಧದ ಗೋಡೆಯು ಸರಳವಾಗಿದ್ದರೂ ಹಿಂಬಣೆ-ಮುಂಬಣೆಗಳಿಂದಾಗಿ ಆಕರ್ಷಕವಾಗಿ ಕಾಣುತ್ತದೆ. ಎರಡನೆಯ ವಿಧದ ಗೋಡೆಗಳು ಹೆಚ್ಚು ಅಲಂಕಾರಿಕವಾಗಿದ್ದು, ಇವುಗಳಲ್ಲಿ ಕೋಷ್ಠ ಗುಡಿಗಳ ಬೆಳವಣಿಗೆಯ ಹಂತಗಳನ್ನು ಗುರುತಿಸಬಹುದು.

ಮೊದಲನೆಯ ರೀತಿಯ ಪ್ರಕಾರದ ಗೋಡೆ ಅನೇಕ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಕುಕ್ಕನೂರಿನ ಕಲ್ಲೇಶ್ವರ, ಲಕ್ಕುಂಡಿಯ ಬ್ರಹ್ಮ ಜಿನಾಲಯ ಮತ್ತು ನಾಗನಾಥ. ನೀಲಗುಂದದ ಭೀಮೇಶ್ವರ, ಹೂವಿನ ಹಡಗಲಿಯ ಕಲ್ಲೇಶ್ವರ, ಉಣಕಲ್ಲಿನ ಚಂದ್ರಮೌಳೇಶ್ವರ, ಕೊಳ್ಗಲ್ಲಿನ ಕಾಶಿ ವಿಶ್ವನಾಥ ಮತ್ತು ಡಂಬಳದ ದೊಡ್ಡ ಬಸಪ್ಪ ದೇವಾಲಯಗಳು ಇದಕ್ಕೆ ಉದಾಹರಣೆಗಳಾಗಿವೆ. ಈ ದೇವಾಲಯಗಳಲ್ಲಿಯ ಹೊರಗೋಡೆಗಳು ಅನೇಕ ಅರ್ಧಕಂಬ, ಶಿಖರಗಳಿಂದ ಅಲಂಕೃತ ಪಂಜರ ಮತ್ತು ಚಿಕ್ಕ ಪ್ರಮಾಣದ ಕೋಷ್ಠಗಳಿಂದ ಕೂಡಿರುತ್ತವೆ.

ಎರಡನೆಯ ಪ್ರಕಾರ ಗೋಡೆಗಳನ್ನು ಕಾಣಬಹುದಾದ ದೇವಸ್ಥಾನಗಳೆಂದರೆ, ಲಕ್ಕುಂಡಿಯ ಕಾಶಿ ವಿಶ್ವೇಶ್ವರ ಮತ್ತು ಸನ್ನೇಶ್ವರ, ಮಾಗಳದ ವೇಣುಗೋಪಾಲ, ಚೌಡದಾನಪುರದ ಮುಕ್ತೇಶ್ವರ, ಹಾನಗಲ್ಲಿನ ತಾರಕೇಶ್ವರ, ಬಳ್ಳಿಗಾವಿಯ ಕೇದಾರೇಶ್ವರ ಮತ್ತು ಲಕ್ಷ್ಮೇಶ್ವರದ ಸೋಮೇಶ್ವರ. ಈ ಗೋಡೆಗಳಲ್ಲಿ ಕೋಷ್ಠಗಳ ವೈವಿಧ್ಯತೆ, ಆಕಾರ, ಪ್ರಮಾಣ, ಅಲಂಕರಣ ಎದ್ದು ಕಾಣುತ್ತವೆ. ಈ ಕೋಷ್ಠಗಳು ಚಿಕ್ಕ ಗುಂಡಿಯಂತೆ ಕಾಣುತ್ತವೆ. ಮಾಗಳದ ವೇಣುಗೋಪಾಲ ದೇವಾಲಯದ ಕೋಷ್ಠಗಳಲ್ಲಿ ಅದಿಷ್ಠಾನ, ಸುಂದರವಾಗಿ ಕೆತ್ತಿದ ದ್ವಾರ, ಮಂಗಲ ಫಲಕ ಮತ್ತು ಕಪೋತವಿದೆ. ಕಪೋತದ ಮೇಲೆ ದ್ರಾವಿಡ ಶಿಖರವಿದ್ದು, ಅದರ ಎರಡೂ ಬದಿಗಳಲ್ಲಿ ತೋರಣವನ್ನು ಕೆತ್ತಿದ್ದಾರೆ. ಚೌಡದಾನಪುರದ ಮುಕ್ತೇಶ್ವರ ದೇವಾಲಯದಲ್ಲಿಯ ಕೋಷ್ಠಗಳು ಬಹಳ ಆಳವಾಗಿದ್ದು ಅವುಗಳ ಪ್ರವೇಶ ದ್ವಾರದ ಎರಡೂ ಕಡೆಗೆ ಆನೆಗಳಿವೆ. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ಹೊರಗೋಡೆಯಲ್ಲಿ ಕಟ್ಟಿದ ಕೋಷ್ಠಗಳು ವಿಶಾಲವಾಗಿಯೂ, ಆಳವಾಗಿಯೂ ಮತ್ತು ಹೆಚ್ಚು ಅಲಂಕಾರಿಕವಾಗಿಯೂ ಇವೆ. ಪ್ರವೇಶ ದ್ವಾರದ ಎರಡೂ ಬದಿಗೆ ಸುಂದರವಾಗಿ ಕೆತ್ತಿದ ಹೂವಿನ ಮೊಗ್ಗೆ ಮತ್ತು ಲತಾ ಸುಳಿವುಗಳಿವೆ.

*ಜಾಲಾಂಧ್ರಗಳು*

ಕಲ್ಯಾಣದ ಚಾಲುಕ್ಯರ ದೇವಾಲಯಗಳಲ್ಲಿ ಕಂಡು ಬರುವ ಜಾಲಾಂಧ್ರಗಳು ವೈಶಿಷ್ಟ್ಯಪೂರ್ಣವಾಗಿರುತ್ತವೆ. ಈ ದೇವಾಲಯಗಳಲ್ಲಿ ಜಾಲಾಂಧ್ರಗಳನ್ನು ಸಾಮಾನ್ಯವಾಗಿ ದ್ವಾರಗಳ ಎರಡೂ ಬದಿಗೆ ಅಳವಡಿಸಿದ್ದಾರೆ. ಪ್ರವೇಶದ್ವಾರ, ಸುಕನಾಸಿದ್ವಾರ ಮತ್ತು ಗರ್ಭಗೃಹ ದ್ವಾರಗಳ ಇಕ್ಕೆಲಗಳಲ್ಲಿ ಇಂತಹ ಜಾಲಂಧ್ರಗಳನ್ನು ಕಾಣಬಹುದು. ಜಾಲಾಂಧ್ರಗಳನ್ನು ಬಳಪದ ಕಲ್ಲಿನಲ್ಲಿ ಕೊರೆದಿರುವುದರಿಂದ ಇವು ಸೂಕ್ಷ್ಮ ಕೆತ್ತನೆ ಕೆಲಸಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ಈ ಜಾಲಾಂಧ್ರಗಳು ಹೆಚ್ಚಾಗಿ ಆಯತಾಕಾರದಲ್ಲಿವೆ.

ಉಣಕಲ್ಲಿನ ಚಂದ್ರ ಮೌಳೇಶ್ವರ ಮತ್ತು ಬಳ್ಳಿಗಾವೆಯ ತ್ರಿಪುರಾಂತಕೇಶ್ವರ ದೇವಾಲಯದ ಅಲಂಕಾರಿಕ ಜಾಲಂಧ್ರಗಳು ಆಕರ್ಷಕವಾಗಿವೆ. ತ್ರಿಪುರಾಂತಕೇಶ್ವರ ಗರ್ಭಗೃಹ ದ್ವಾರದ ಇಕ್ಕೆಲಗಳಲ್ಲಿರುವ ಜಾಲಂಧ್ರಗಳಲ್ಲಿ ಮೂರು ಜೋಡು ನಾಗ-ನಾಗಿಣಿಯರ ಶಿಲ್ಪಗಳಿದ್ದು, ಅವು ಒಂದನ್ನೊಂದು ಹೆಣೆದುಕೊಂಡು, ಗಂಟು ಹಾಕಿಕೊಂಡಿವೆ. ಇದೇ ದೇವಾಲಯದ ಮತ್ತೊಂದು ಜಾಲಂಧ್ರಗಳಲ್ಲಿ ಕಲ್ಪಲತಾ ಸುಳಿಗಳಿದ್ದು, ಅವುಗಳಲ್ಲಿ ವಾದ್ಯಾಗಾರ, ನರ್ತಕ-ನರ್ತಕಿಯರನ್ನು ಕೆತ್ತಿದ್ದಾರೆ. ಊಣಕಲ್ಲಿನ ಚಂದ್ರ ಮೌಳೇಶ್ವರ ದೇವಾಲಯದ ನಾಲ್ಕು ಪ್ರವೇಶ ದ್ವಾರಗಳ ಇಕ್ಕೆಲಗಳಲ್ಲಿ ಅತ್ಯುತ್ತಮವಾಗಿ ಕೆತ್ತಿದ ಜಾಲಾಂಧ್ರಗಳಿವೆ. ಗದಗ, ಅಬ್ಬಲೂರು ಮತ್ತು ಬಂದಳಿಕೆಯ ದೇವಾಲಯಗಳಲ್ಲಿಯ ಜಾಲಾಂಧ್ರಗಳು ಗಮನಾರ್ಹವಾಗಿವೆ. ಬಂದಳಿಕೆ ಜಾಲಾಂಧ್ರಗಳು ಸುಮಾರು ಆರು ಅಡಿ ಒಂಬತ್ತು ಅಂಗುಲ ಎತ್ತರ ಮತ್ತು ನಾಲ್ಕು ಅಡಿ ಅಗಲ ಇದ್ದು ಇವುಗಳಲ್ಲಿ ಏಳು ಪಟ್ಟಿಕೆಗಳಿವೆ. ಈ ಪಟ್ಟಿಕೆಗಳಲ್ಲಿ ರಾಮಾಯಣ, ಮಹಾಭಾರತಗಳಿಗೆ ಸಂಬಂಧಿಸಿದ ಉಬ್ಬು ಶಿಲ್ಪಗಳಿವೆ.

*ನವರಂಗ*

ಕಲ್ಯಾಣದ ಚಾಲುಕ್ಯರ ದೇವಾಲಯಗಳಲ್ಲಿನ ನವರಂಗದ ವಿನ್ಯಾಸ ಬಾದಾಮಿಯ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಕಾಲದ ನವರಂಗಗಳಿಗಿಂತ ಭಿನ್ನವಾಗಿದೆ. ಈ ಕಾಲದ ನವರಂಗದಲ್ಲಿ ದೇವಕೋಷ್ಠಗಳನ್ನು ಗೋಡೆಗಳಲ್ಲಿ ಕಟ್ಟಿದ್ದಾರೆ. ಇವುಗಳನ್ನು ಸಾಮಾನ್ಯವಾಗಿ ಸುಕನಾಸಿಯ ದ್ವಾರದ ಇಕ್ಕೆಲಗಳಲ್ಲಿ ಅಳವಡಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ನವರಂಗದ ಪಕ್ಕದ ಗೋಡೆಗಳಲ್ಲಿಯೂ ಈ ದೇವಕೋಷ್ಠಗಳನ್ನು ಕಾಣಬಹುದು. ಈ ದೇವಕೋಷ್ಠಗಳಲ್ಲಿ ಸೂರ್ಯ, ಮಹಿಷಾಸುರ ಮರ್ದಿನಿ, ಭೈರವ್, ಸಪ್ತ ಮಾತೃಕೆಯರು ಮುಂತಾದ ದೇವತಾ ವಿಗ್ರಹಗಳನ್ನು ಪ್ರತಿಷ್ಠೆ ಮಾಡುವ ಸಂಪ್ರದಾಯ ಈ ಕಾಲದಲ್ಲಿತ್ತು.

ನೀಲಗುಂದದ ಭೀಮೇಶ್ವರ ದೇವಾಲಯದ ನವರಂಗದಲ್ಲಿ ಮುಖ್ಯ ಗರ್ಭ ಗೃಹದ ಕಡೆಯ ಗೋಡೆಯಲ್ಲಿ ಎರಡು ಮತ್ತು ಆಚೀಚೆಯ ಗೋಡೆಗಳಲ್ಲಿ ಒಂದೊಂದು ಹೀಗೆ ನಾಲ್ಕು ಕೋಷ್ಠಗಳನ್ನು ಅಳವಡಿಸಿದ್ದಾರೆ. ಹೂವಿನಡಗಲಿಯ ಕೇಶವ ದೇವಾಲಯ ಮತ್ತು ಬಳ್ಳಿಗಾವಿಯ ಕೇದಾರೇಶ್ವರ ದೇವಾಲಯದಲ್ಲಿ ತಲಾ ಎರಡು, ಗಳಗನಾಥ ಗಳಗೇಶ್ವರ, ದೇಗಾವೆಯ ಕಲ್ಲುಗುಡಿ ಮತ್ತು ಹರಳಹಳ್ಳಿಯ ಸೋಮೇಶ್ವರ ದೇವಾಲಯದಲ್ಲಿ ಎಂಟು ಕೋಷ್ಠಗಳನ್ನು ನವರಂಗದ ಒಳಗೋಡೆಗಳಲ್ಲಿಯೇ ನಿರ್ಮಿಸಿದ್ದಾರೆ.

*ದ್ವಾರಗಳು*

ಕಲ್ಯಾಣದ ಚಾಲುಕ್ಯರ ದೇವಾಲಯಗಳ ಪ್ರವೇಶ ದ್ವಾರಗಳು ಹೆಚ್ಚಿನ ಕೆತ್ತನೆ ಕೆಲಸಗಳಿಂದ ಕೂಡಿದ್ದು ಅತ್ಯಂತ ಅಲಂಕೃತವಾಗಿವೆ. ದ್ವಾರಗಳಲ್ಲಿ ಸಾಮಾನ್ಯವಾಗಿ ಐದು ಅಥವಾ ಅದಕ್ಕೂ ಹೆಚ್ಚು ದ್ವಾರ ಶಾಖೆಗಳಿರುತ್ತವೆ. ಉಣಕಲ್ಲಿನ ಚಂದ್ರ ಮೌಳೇಶ್ವರ ಲಕ್ಕುಂಡಿಯ ಕಾಶಿವಿಶ್ವೇಶ್ವರ, ನೀಲಗುಂದದ ಭೀಮೇಶ್ವರ, ಹೂವಿನ ಹಡಗಲಿಯ ಕಲ್ಲೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ, ಹಿರೇಹಗಲಿಯ ಕಲ್ಲೇಶ್ವರ, ಮಾಗಳದ ವೇಣು ಗೋಪಾಲ ಮತ್ತು ಬಂಕಾಪುರದ ಅರವತ್ತು ಕಂಬದ ಗುಡಿಯ ದ್ವಾರಗಳು ಚಿತ್ತಾಕರ್ಷಕ ಕುಸುರಿಯ ಕೆಲಸಕ್ಕೆ ಒಳ್ಳೆಯ ನಿದರ್ಶನಗಳಾಗಿವೆ. ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದ ದಕ್ಷಿಣ ದ್ವಾರ ಈ ಕಾಲದ ಅತ್ಯಂತ ಸುಂದರ ಹಾಗೂ ಕಲಾತ್ಮಕ ದ್ವಾರಗಳಲ್ಲಿ ಒಂದೆನ್ನಬಹುದು. ಇದರಲ್ಲಿ ಒಂಬತ್ತು ದ್ವಾರ ಶಾಖೆಗಳಿವೆ. ಇವುಗಳಲ್ಲಿ ಕ್ರಮವಾಗಿ ವಜ್ರದಾಕಾರದ ಅಲಂಕರಣ, ಸಂಗೀತಗಾರರನ್ನೊಳಗೊಂಡ ಲತಾಸುರುಳಿಗಳು, ರಸಿಕ ದಂಪತಿ, ಅರ್ಧಕಂಬ, ಸಿಂಹಗಳ ಸಾಲುಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ದ್ವಾರದ ಕೆಳಭಾಗದಲ್ಲಿ ಪ್ರತಿಯೊಂದು ದ್ವಾರ ಶಾಖೆಯಲ್ಲಿ ಒಂದೊಂದು ಚಿಕ್ಕ ಮೂರ್ತಿ ಶಿಲ್ಪವಿದ್ದು, ಇವು ದ್ವಾರಪಾಲ, ಮತ್ತಿತರ ದೇವತಾಪುರುಷ, ಅಪ್ಸರೆಯರ ಶಿಲ್ಪಗಳಾಗಿವೆ. ಕೆಲವು ಸಲ ದ್ವಾರಗಳಲ್ಲಿಯೇ ಜಾಲಾಂಧ್ರಗಳನ್ನು ಅಳವಡಿಸಿರುವ ಉದಾಹರಣೆಗಳು ಇಲ್ಲಿದಿಲ್ಲ. ದ್ವಾರಗಳ ಮೇಲ್ಭಾಗದಲ್ಲಿ ಮಕರ ತೋರಣವಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಈ ತೋರಣದಲ್ಲಿ

ಪತ್ನಿ ಸಮೇತ ಬ್ರಹ್ಮ, ಶಿವ ಮತ್ತು ವಿಷ್ಣು ಮೂರ್ತಿಗಳನ್ನು ಕೆತ್ತಿದ್ದಾರೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ದ್ವಾರಗಳ ಮತ್ತೊಂದು ಲಕ್ಷಣವೆಂದರೆ ಇವುಗಳ ಹೊಸ್ತಿಲು ಅಥವಾ ಭುವಂಗಮ ಮತ್ತು ಅದಕ್ಕೆ ಹೊಂದಿಸಿರುವ ಚಂದ್ರಶಿಲೆಗಳ ವಿನ್ಯಾಸ ಮತ್ತು ಕೆತ್ತನೆ.

*ಕಂಬಗಳು*

ಕಲ್ಯಾಣ ಚಾಲುಕ್ಯರ ದೇವಾಲಯಗಳ ಇನ್ನೊಂದು ಗಮನಾರ್ಹ ಲಕ್ಷಣವೆಂದರೆ ಕಂಬಗಳ ವಿನ್ಯಾಸ. ಎರಡು ಪ್ರಕಾರದ ಕಂಬಗಳು ಇಲ್ಲಿ ಕಂಡು ಬರುತ್ತವೆ. ಮೊದಲನೆಯ ವಿದದ ಕಂಬ ಕಾಂಡ ಭಾಗದಲ್ಲಿ ಚಚ್ಚೌಕವಾಗಿದೆ. ಎರಡನೆಯ ಪ್ರಕಾರದ ಕಂಬ ಗಂಟೆಯಾಕಾರದ್ದಾಗಿದೆ. ಗಂಟೆಯಾಕಾರದ ಕಂಬಗಳ ಕೆಳಭಾಗದ ಚಚ್ಚೌಕದಲ್ಲಿ ಮೂರ್ತಿ ಶಿಲ್ಪಗಳನ್ನು ಕೆತ್ತಿರುವುದು ಕಂಡು ಬರುತ್ತದೆ. ಡಂಬಳದ ದೊಡ್ಡ ಬಸಪ್ಪ ದೇವಾಲಯದ ಕಂಬಗಳನ್ನು ಭೈರವಿ, ಭೈರವ, ಗಾಳಿ ವರಾಹ ಮತ್ತು ಅಪ್ಸರೆಯರ ಶಿಲ್ಪಗಳಿವೆ. ಇನ್ನೂ ಅನೇಕ ದೇವಾಲಯಗಳಲ್ಲಿ ಇಂತಹ ಶಿಲ್ಪಗಳುಳ್ಳ ಕಂಬಗಳನ್ನು ಕಾಣಬಹುದು. ಕಂಬಗಳ ಬೋದುಗೆಗಳಿಗೆ ಅನಿಸಿ ಮದನಿಕೆಯರ ಶಿಲ್ಪಗಳನ್ನು ನಿಲ್ಲಿಸುವ ಸಂಪ್ರದಾಯ ಚಾಲುಕ್ಯರ ಕಾಲದಲ್ಲಿ ಮುಂದುವರಿಯಿತು. ದುರ್ದೈವದ ಸಂಗತಿಯೆಂದರೆ ಮದನಿಕೆ ಹಾಗೂ ಮತ್ತಿತರ ಮೂರ್ತಿಗಳು ಅನೇಕ ದೇವಾಲಯಗಳಲ್ಲಿ ಲಭ್ಯವಿಲ್ಲ. ಇನ್ನೊಂದು ಪ್ರಕಾರದ ಕಂಬ ಹಲವು ಭಾಗಗಳಿಂದ ಕೂಡಿದೆ. ಅದರಲ್ಲಿ ಒಂದು ಮೇಲೆ, ಒಂದು ಕೆಳಗೆ, ಹೀಗೆ ಎರಡು ಚಚ್ಚೌಕ ಭಾಗಗಳಿರುತ್ತವೆ. ಈ ಎರಡು ಚಚ್ಚೌಕಗಳ ಮಧ್ಯದ ಕಾಂಡಭಾಗದಲ್ಲಿ ಎಂಟು ಮಗ್ಗಲು, ಹದಿನಾರು ಮಗ್ಗಲು ಮತ್ತು ಪುನಃ ಎಂಟು ಮಗ್ಗಲುಗಳ ಪಟ್ಟಿಕೆಗಳಿರುತ್ತವೆ. ಕೆಲವು ಸಲ ಚಚ್ಚೌಕ ಭಾಗಗಳ ನಾಲ್ಕು ಮುಖಿಗಳಲ್ಲಿ ದೇವತಾ ಮೂರ್ತಿಗಳನ್ನು ಕಡೆದಿರುತ್ತಾರೆ. ಈ ಮೂರ್ತಿಗಳು ತೋರಣವೊಂದರಿಂದ ಸುತ್ತುವರಿದಿರುವುದು ಒಂದು ವಿಶಿಷ್ಟ ಲಕ್ಷಣ.

ಮೇಲೆ ವಿವರಿಸಿದ ಎರಡು ಮುಖ್ಯ ಪ್ರಕಾರದ ಕಂಬಗಳಲ್ಲದೆ, ಈ ಕಾಲದ ದೇವಾಲಯಗಳಲ್ಲಿ ಇತರ ಬಗೆಯ ಕಂಬಗಳು ಇವೆ. ಉದಾಹರಣೆಗೆ ಗದಗಿನ ಸರಸ್ವತಿ ದೇವಾಲಯದ ಮಂಟಪದಲ್ಲಿ ಕುಚ್ಚುಗಳುಳ್ಳ ಚೌಕಾಕಾರದ ಮತ್ತು ಕುಚ್ಚುಗಳುಳ್ಳ ಚೌಕ, ಅಷ್ಟಮಾಲೆ, ವೃತ್ತಾಕಾರ ಭಾಗಗಳುಳ್ಳ ಕಂಬಗಳಿವೆ. ಈ ದೇವಾಲಯದ ಕಂಬಗಳ ವೈಶಿಷ್ಟ್ಯವೆಂದರೆ, ಕಂಬಗಳ ಮೇಲಿರುವ ಬೋದುಗೆಗಳಲ್ಲಿ ಲತಾ ಸುರುಳಿಗಳನ್ನು ಕೊರೆದಿದ್ದಾರೆ.

*ಭುವನೇಶ್ವರಿ*

ಕಲ್ಯಾಣದ ಚಾಲುಕ್ಯರ ದೇವಾಲಯಗಳ ಭುವನೇಶ್ವರಿ ಹೆಚ್ಚು ಅಲಂಕಾರಿಕವಾಗಿದೆ. ಈ ಭುವನೇಶ್ವರಿಗಳಲ್ಲಿ ಅರಳಿದ ಕಮಲ ಇಲ್ಲವೇ ಮೂರ್ತಿ ಶಿಲ್ಪಗಳನ್ನು ಕೊರೆದಿರುತ್ತಾರೆ. ಹರಳಹಳ್ಳಿಯ ಸೋಮೇಶ್ವರ ದೇವಾಲಯದ ಮುಖ್ಯ ಭುವನೇಶ್ವರಿಯಲ್ಲಿ ಒಂಬತ್ತು ಚಚ್ಚೌಕಗಳಿದ್ದು, ಅವುಗಳಲ್ಲಿ ವಿವಿಧ ಬಗೆಯಲ್ಲಿ ಅಲಂಕರಿಸಿದ ಕಮಲಗಳಿವೆ. ಹಾನಗಲ್ಲಿನ ತಾರಕೇಶ್ವರ ದೇವಾಲಯದ ಮುಖಮಂಟಪದ ಭುವನೇಶ್ವರಿ ಅತ್ಯುತ್ತಮ ಕಲಾಕೃತಿಗಳಲ್ಲಿ ಒಂದೆಂದು ಹೇಳಬಹುದು. ವೇಣುಗೋಪಾಲ ದೇವಾಲಯಗಳ ನವರಂಗದ ಮಧ್ಯದ ಭುವನೇಶ್ವರಿಯ ಅಂಚಿನ ಸುತ್ತಲೂ ಅಷ್ಟ ದಿಕ್ಪಾಲಕರ ಮೂರ್ತಿಗಳಿವೆ. ಇಟ್ಟಗೆಯ ದೇವಾಲಯದಲ್ಲಿ ಚೆನ್ನಾಗಿ ಕಂಡರಿಸಿದ ಭುವನೇಶ್ವರಿಗಳಿವೆ. ಕೆಲವು ಸಲ ನವರಂಗದ ಅಥವಾ ಮುಖಮಂಟಪದ ಮುಖ್ಯ ಭುವನೇಶ್ವರಿಯನ್ನು ಅಷ್ಟದಿಕ್ಪಾಲಕರ ಶಿಲ್ಪಗಳಿಂದ ಅಲಂಕರಿಸುವುದು ಕಂಡು ಬರುತ್ತದೆ. ಬಳ್ಳಿಗಾವಿಯ ಕೇದಾರೇಶ್ವರದಲ್ಲಿಯ ಭುವನೇಶ್ವರಿಯೊಂದರಲ್ಲಿ ದಿಕ್ಪಾಲಕರನ್ನು ಕೊರೆದಿದ್ದಾರೆ.

*ಶಿಖರ*

ಕಲ್ಯಾಣ ಚಾಲುಕ್ಯರ ದೇವಾಲಯಗಳ ಶಿಖರ ಸುಮಾರು ಮೂವತ್ತೈದರಿಂದ ನಲವತ್ತುಅಡಿ ಎತ್ತರವಿರುತ್ತದೆ. ನಕ್ಷತ್ರಾಕಾರದ ವಿನ್ಯಾಸವನ್ನುಳ್ಳ ಶಿಖರವನ್ನು ಗರ್ಭಗೃಹದ ಮೇಲೆ ಕಟ್ಟಿರುತ್ತಾರೆ. ಇದು ಮೆಟ್ಟಿಲುಮೆಟ್ಟಿಲಾಗಿ ಮೇಲೆ ಹೋಗುತ್ತಾ, ಸೂಪ್ತಿಯಲ್ಲಿ ಸಮಾವೇಶವಾಗುತ್ತದೆ. ಶಿಖರದ ಮೆಟ್ಟಿಲುಗಳಲ್ಲಿ ಅನೇಕ ರೀತಿಯ ಅಲಂಕಾರಗಳನ್ನು ಅಲ್ಲದೇ ಯಕ್ಷರ ಚಿಕ್ಕ ಚಿಕ್ಕ ಮೂರ್ತಿಗಳನ್ನು ಕೊರೆದಿದ್ದಾರೆ. ಶಿಖರದ ಸುಖನಾಶವು ಮುಂದೆ ಚಾಚಿದ್ದು ಅದಕ್ಕೆ ಮಹಾನಾಸಿಕ (ಚೈತ್ಯ) ವೊಂದಿದೆ. ಈ ನಾಸಿಕದಲ್ಲಿ ಗರ್ಭಗೃಹದಲ್ಲಿ ಪ್ರತಿಷ್ಠೆಯಾದ ದೇವತೆಗೆ ಸಂಬಂಧಿಸಿದ ಶಿಲ್ಪವೊಂದನ್ನು ಅಳವಡಿಸಿದ್ದಾರೆ. ಈ ನಕ್ಷತ್ರಾಕಾರದ ಶಿಖರ ದ್ರಾವಿಡ ಮತ್ತುನಾಗರ ಶೈಲಿಯ ಮಿಶ್ರಣದಿಂದ ಉದ್ಭವಿಸಿದ ವೇಸರ ಶೈಲಿಗೆ ಸೇರಿದುದೆಂದು ಅಭಿಪ್ರಾಯ ಪಡಲಾಗಿದೆ.

## 19.15 ಸಂಕ್ಷಿಪ್ತ ಅವಲೋಕನ

ಕ್ರಿ.ಶ. 973 ರಲ್ಲಿ ಕಲ್ಯಾಣದ ಚಾಲುಕ್ಯರು ಮಾನ್ಯಖೇಟದ ರಾಷ್ಟ್ರಕೂಟರ ಆಡಳಿತವನ್ನು ಅಂತ್ಯಗೊಳಿಸಿ ಕರ್ನಾಟಕದಲ್ಲಿ ತಮ್ಮ ಆಡಳಿತವನ್ನು ಪ್ರಾರಂಭಿಸಿದರು. ಸತ್ಯಾಶ್ರಯ, ಎರಡನೆಯ ಜಯಸಿಂಹ, ಒಂದನೆಯ ಸೋಮೇಶ್ವರ, ಎರಡನೆಯ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯ ಒಂದು ಪ್ರಬಲ ರಾಜ್ಯವನ್ನು ನಿರ್ಮಿಸಿದರು. ಚೋಳರ ವಿರುದ್ಧ ಸತತವಾಗಿ ಹೋರಾಟ ನಡೆಸಿದರು. ಅದೇ ರೀತಿ ಉತ್ತರ ಭಾರತದ ಅರಸರುಗಳ ಜೊತೆಯು ಅನೇಕ ಯುದ್ಧಗಳನ್ನು ಮಾಡಿದರು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ನಂತರ ಚಾಲುಕ್ಯ ರಾಜ್ಯ ದುರ್ಬಲಗೊಂಡಿತು. ಕಳಚೂರ್ಯರು ತಮ್ಮ ರಾಜ್ಯವನ್ನು ಸ್ಥಾಪಿಸಿ ಹಲವು ದಶಕಗಳ ಕಾಲ ಮಾತ್ರ ಆಳ್ವಿಕೆ ನಡೆಸಿದರು. ಚಾಲುಕ್ಯ ಅರಸರು ಸಮರ್ಥ ಆಡಳಿತವನ್ನು ಸ್ಥಾಪಿಸಿದ್ದರು. ಅನೇಕ ವಿದ್ಯಾಕೇಂದ್ರಗಳು ವಿದ್ಯಾಭ್ಯಾಸದ ಪ್ರಚಾರದಲ್ಲಿ ತೊಡಗಿದ್ದವು. ಅನೇಕ ಉದ್ಗ್ರಂಥಗಳು ಈ ಕಾಲದಲ್ಲಿ ರಚಿಸಲ್ಪಟ್ಟವು. ಚಾಲುಕ್ಯರ ಕಾಲದ ಆಳ್ವಿಕೆಯ ಪ್ರಾರಂಭದಲ್ಲಿ ಜೈನಧರ್ಮ, ಶೈವಧರ್ಮ ಮತ್ತು ವೈಷ್ಣವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ದೊರಕಿತು. ಆದರೆ ಚಾಲುಕ್ಯರ ಅಧಿಕಾರ ದುರ್ಬಲಗೊಂಡಾಗ ಕಳಚೂರ್ಯರು ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಕಳಚೂರ್ಯರು ಅಧಿಕಾರದಲ್ಲಿದ್ದಾಗ ವೀರಶೈವಧರ್ಮ ಪ್ರಮುಖ ಧರ್ಮವಾಗಿ ಹೊರಹೊಮ್ಮಿತು. ಕಲೆಗೂ ಕೂಡ ಭವ್ಯ ಸ್ಮಾರಕಗಳನ್ನು ನಿರ್ಮಿಸುವುದರ ಮೂಲಕ ಚಾಲುಕ್ಯರು ತಮ್ಮ ಅಮೋಘ ಕೊಡುಗೆಯನ್ನು ನೀಡಿದ್ದಾರೆ.

## 17.16 ಮಾದರಿ ಪ್ರಶ್ನೆಗಳು

1. ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಮಹತ್ವವನ್ನು ಕುರಿತು ಪರಿಶೀಲಿಸಿ.
2. ಆರನೆಯ ವಿಕ್ರಮಾದಿತ್ಯನ ಜೀವನ ಮತ್ತು ಸಾಧನೆಗಳನ್ನು ಕುರಿತು ವಿವರಿಸಿ.
3. ಕಲ್ಯಾಣ ಚಾಲುಕ್ಯರ ಕೊಡುಗೆಗಳನ್ನು ಧರ್ಮ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವರಿಸಿ.
4. ವಾಸ್ತುಶಿಲ್ಪಕ್ಕೆ ಕಲ್ಯಾಣದ ಚಾಲುಕ್ಯರ ಕೊಡುಗೆಯನ್ನು ಮೌಲ್ಯಮಾಪನ ಮಾಡಿ

## 17.17 ಅಧ್ಯಯನಕ್ಕೆ ಗ್ರಂಥಗಳು


1. Gopal .B.R. : The Chalukyas of Kalyana and the Kalachuris, Dharwad, 1981.
2. Desai .P.B.(Ed) : A History of Karnataka Dharwad, 1981
3. Prof. Basavaraja .K.R. : History and Culture of Karnataka
4. Prof. Rajasekhara .S. : Karnataka Architecture


ಪ್ರೊ. ಶಿವಣ್ಣ


## ಟಿಪ್ಪಣಿಗಳು

# NOTES

ಆದೇಶ ಸಂಖ್ಯೆ : ಕರಾಮುವಿ/ಅಸಾವಿ/2–1614/2012–2013 ದಿನಾಂಕ : ಜೂನ್ 2012
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 170 GSM ಆರ್ಟ್‌ಕಾರ್ಡ್
ಮುದ್ರಕರು : ಗೀತಾಂಜಲಿ ಗ್ರಾಫಿಕ್ಸ್, ಬೆಂಗಳೂರು. ಪ್ರತಿಗಳು : 4500

# Karnataka State Open University


Manasagangotri Mysore - 570 006




♣ **REGIONAL CENTRES**

- Bangalore
- Davanagere
- Gulbarga
- Dharwad
- Shimoga
- Mangalore
- Tumkur
- Hassan
- Chamarajanagar
- Bellary

- ● **HEAD QUARTERS**
- ★ **Total Study Centres : 111**
- ♣ **Regional Centres : 10**
- ❄ **B.Ed Study Centres : 10**
- ✦ **M.Ed Study Centres : 08**


Feedback : improvement, revision and launching of new programmes
Multimedia learning material
STUDENT
Academic and other support
Evaluation - methods and modes
INSTRUCTIONAL SYSTEM